ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೦೭
ವಿಚಾರ ಸಾಹಿತ್ಯಮಾಲೆ – ೨೮
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
ಡಾ. ಪ್ರಧಾನ್ ಗುರುದತ್ತ

ಸಂಪಾದಕರು
ಡಾ. ಎ. ವಿ. ನರಸಿಂಹಮೂರ್ತಿ

ಭಾರತದ ಚರಿತ್ರೆಯಲ್ಲಿ ಭೌಗೋಳಿಕ ಅಂಶಗಳು

ಭವನದ ಗ್ರಂಥ ವಿಶ್ವವಿದ್ಯಾನಿಲಯ

ಭಾರತದ ಚರಿತ್ರೆಯಲ್ಲಿ ಭೌಗೋಳಿಕ ಅಂಶಗಳು

ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತ:
(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)
–ಋಗ್ವೇದ, I. ೮೯–೧

ಮೂಲ
ಕೆ. ಎಂ. ಪಣಿಕ್ಕರ್
ಅನುವಾದ
ಕೆ. ಎನ್. ಸುಬ್ಬನರಸಿಂಹಯ್ಯ

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

Bharatada Charitreyalli Bhaugolika Amshagalu : Kannada translation of *Geographical Factors in Indian History* by **K.M. Panikkar;** Kannada translation by **K.N. Subbanarasimhaiah;** Editor-in-Chief : **Dr. Pradhan Gurudatta**; Editor of the series: **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxvi + 72 ; Price: Rs. 10/-

ಮುದ್ರಣ : ೨೦೧೦
ಪುಟಗಳು : xxvi + ೭೨
ಬೆಲೆ : ರೂ. ೧೦/–

ಪ್ರಕಾಶಕರು :
ಪಿ. ನಾರಾಯಣಸ್ವಾಮಿ
ರಿಜಿಸ್ಟ್ರಾರ್
ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
ಮೆ|| ಮಯೂರ ಪ್ರಿಂಟ್ ಆಡ್ಸ್
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫–೮–೨೦೦೯
ಸಿಎಂ/ಪಿಎಸ್/೧೪೭/೦೯

ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು–ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ–ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ–ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ–ಸೂಚನೆ–ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ–ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ–ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

ಗೋವಿಂದ ಎಂ. ಕಾರಜೋಳ
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

ಗೋವಿಂದ ಎಂ. ಕಾರಜೋಳ

ಕರ್ನಾಟಕ ಸರ್ಕಾರ

ರಮೇಶ್ ಬಿ.ಝಳಕಿ, ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝಳಕಿ)

ಕರ್ನಾಟಕ ಸರ್ಕಾರ

ಮನು ಬಳಿಗಾರ್
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,

ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯಕ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

(ಮನು ಬಳಿಗಾರ್)

ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ-ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ-ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ-ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ-ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ-ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ-ಗರಿಮೆಗಳನ್ನು ರಾಷ್ಟ್ರೀಯ-ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ

ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧-೦೯-೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚಯವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯-೦೮-೨೦೦೯ರ ಬೆಳಗ್ಗೆ ೧೧-೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ-ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :

(i) "ಕನ್ನಡ ಸಾಹಿತ್ಯ ಹಿರಿಮೆ-ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ

ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

(ಇ) ಪ್ರಕಟಣೆಗಳು :

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ, ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ

ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾ ಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರ ಶಾಖೆಯ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲ್ಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀ ಕೆ.ಎನ್. ಸುಬ್ಬನರಸಿಂಹಯ್ಯ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎಚ್.ಎಸ್. ಹರಿಶಂಕರ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

ಪ್ರಧಾನ್ ಗುರುದತ್ತ
ಅಧ್ಯಕ್ಷ

ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಭಾರತದ ಚರಿತ್ರೆಯಲ್ಲಿ ಭೌಗೋಳಿಕ ಅಂಶಗಳು' ಎಂಬ ಪುಸ್ತಕ ಖ್ಯಾತ ಲೇಖಕರಾದ ಶ್ರೀ ಕೆ.ಎನ್. ಸುಬ್ಬನರಸಿಂಹಯ್ಯ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

ಎನ್. ರಾಮಾನುಜ
ಅಧ್ಯಕ್ಷರು
ಭಾರತೀಯ ವಿದ್ಯಾಭವನ, ಕರ್ನಾಟಕ

ಎ. ವಿ. ನರಸಿಂಹಮೂರ್ತಿ
ಅಧ್ಯಕ್ಷರು, ವಿದ್ಯಾಭವನ, ಮೈಸೂರು
ಪ್ರಧಾನ ಸಂಪಾದಕ

ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲುಪುತ್ತದೆ ಎಂದು ನಾನು ಭಾವಿಸಿದ್ದೇನೆ.

ಭಾರತೀಯ ವಿದ್ಯಾಭವನ
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

ಸಾಮಾನ್ಯ ಸಂಪಾದಕರ ಮುನ್ನುಡಿ

ಮುಂಬಯಿಯಲ್ಲಿರುವ ಭಾರತೀಯ ಸಂಸ್ಕೃತಿ ಅಧ್ಯಯನ ಸಂಸ್ಥೆ ಅಂದರೆ ಭಾರತೀಯ ವಿದ್ಯಾಭವನಕ್ಕೆ ಒಂದು ಬುಕ್ ಯೂನಿವರ್ಸಿಟಿಯ ಅವಶ್ಯಕತೆ ಇತ್ತು. ಇದು ಪ್ರಕಟಿಸುವ ಗ್ರಂಥಗಳನ್ನು ಅಧ್ಯಯನ ಮಾಡಿದರೆ, ಉನ್ನತ ಶಿಕ್ಷಣವನ್ನು ಹೊಂದಿದಂತೆ ಆಗಬೇಕೆನ್ನುವುದೇ ಮುಖ್ಯ ಉದ್ದೇಶ. ಭಾರತೀಯ ಸಂಸ್ಕೃತಿಯ ಆಳವಾದ ಬೇರುಗಳನ್ನು ಜನಗಳಿಗೆ ತಿಳಿಸುವ ಉದ್ದೇಶವೇ ಇದರ ಮುಖ್ಯ ಗುರಿ. ಮೊದಲನೆಯ ಹಂತದಲ್ಲಿ ಒಂದು ನೂರು ಪುಸ್ತಕಗಳನ್ನು ಕೈಗೆತ್ತಿಕೊಂಡು, ಅದರಲ್ಲಿಯೂ ೫೦ ಪುಸ್ತಕಗಳನ್ನು ತಕ್ಷಣವೇ ಪ್ರಕಟಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು. ಪ್ರತಿ ಪುಸ್ತಕವೂ ೨೦೦ ರಿಂದ ೨೫೦ ಪುಟಗಳಷ್ಟಿದ್ದು, ಇದರ ಬೆಲೆ ಎರಡು ರೂಪಾಯಿಗಳೆಂದು ನಿರ್ಧರಿಸಲಾಯಿತು.

ಈ ಪುಸ್ತಕಗಳನ್ನು ಇಂಗ್ಲಿಷಿನಲ್ಲಿ ಮಾತ್ರವಲ್ಲದೆ, ಇತರ ಭಾರತೀಯ ಭಾಷೆಗಳಾದ ಹಿಂದಿ, ಬಂಗಾಳಿ, ಗುಜರಾತಿ, ಮರಾಠಿ, ತಮಿಳು, ತೆಲುಗು, ಕನ್ನಡ ಮತ್ತು ಮಲಯಾಳಂಗಳಲ್ಲಿಯೂ ಪ್ರಕಟಿಸುವುದೆಂದು ತೀರ್ಮಾನಿಸಲಾಯಿತು.

ಈ ರೀತಿಯ ೬೦೦ ಪುಸ್ತಕಗಳ ಪ್ರಕಟನೆಗೆ ಸಾಕಷ್ಟು ಧನ ಹಾಗೂ ಅಖಿಲ ಭಾರತ ಸಂಸ್ಥೆಯ ಅವಶ್ಯಕತೆ ಇದೆ. ವಿದ್ಯಾಭವನವು ಇದನ್ನು ಸಫಲಗೊಳಿಸುವಲ್ಲಿ ಸಾಕಷ್ಟು ಶ್ರಮವಹಿಸುತ್ತಿದೆ.

ಆಧುನಿಕ ಜ್ಞಾನದಡಿಯಲ್ಲಿ ಹಾಗೂ ನಮ್ಮ ಇಂದಿನ ಅವಶ್ಯಕತೆಗಳಿಗನುಗುಣವಾಗಿ ಭಾರತೀಯ ಸಂಸ್ಕೃತಿಯನ್ನು ಸಮಗ್ರವಾಗಿ ತಿಳಿಸುವುದೇ ಭಾರತೀಯ ವಿದ್ಯಾಭವನದ ಮೂಲ ಗುರಿ. ಇದರಿಂದ ನಮ್ಮ ಸಂಸ್ಕೃತಿಯ ನಿಜವಾದ ಕ್ರಿಯಾಶೀಲ ರೂಪ ಹಾಗೂ ಮೌಲ್ಯಗಳನ್ನು ತಿಳಿಸುವುದು ಸಾಧ್ಯವಾಗುತ್ತದೆ.

ನಮ್ಮ ಗುರಿಯನ್ನು ಇನ್ನೂ ವಿಶದವಾಗಿ ತಿಳಿಸಲು ಯತ್ನಿಸುತ್ತೇನೆ. ಪ್ರತಿಯೊಬ್ಬನಿಗೂ ತನ್ನ ಶಕ್ತಿ ಮತ್ತು ಗುಣಗಳಿಗನುಗುಣವಾಗಿ ತನ್ನ ಘನತೆಗೆ ತಕ್ಕಂತೆ ಸಾಮಾಜಿಕ ಸ್ಥಿತಿಗಳನ್ನು ಕಂಡುಕೊಳ್ಳುವುದನ್ನು ನಾವು ಬಯಸುತ್ತೇವೆ; ವೈಯಕ್ತಿಕ ಪ್ರಯತ್ನ ಹಾಗೂ ಸಾಮಾಜಿಕ ಸಂಬಂಧಗಳನ್ನು ನಮ್ಮ ಮೌಲ್ಯದಡಿಯಲ್ಲಿ ನಿರಂತರವಾಗಿ ಸಾಧಿಸುವುದನ್ನು ನಾವು ಆಶಿಸುತ್ತೇವೆ; ಜೀವನ ಕಲೆಯನ್ನು ನಮ್ಮ ಪರಿಮಿತಿಯನ್ನು ದಾಟಿ ಸಾಧಿಸುವುದರ ಮೂಲಕ ಮಾನವನು ದೈವದ ಸಾಧನವಾಗಿ, ಅವನನ್ನು ಎಲ್ಲರಲ್ಲಿಯೂ ಎಲ್ಲವನ್ನೂ ಅವನಲ್ಲಿಯೂ ಕಾಣುವಂತೆ ಮಾಡುವುದೇ ನಮ್ಮ ಗುರಿ.

ಪ್ರಪಂಚ ನಮ್ಮ ಜೊತೆ ವಿಶೇಷವಾಗಿದೆ. ಪುಸ್ತಕಗಳು ನಮಗೆ ಬೋಧಿಸುವಂತೆ, ಇನ್ನಾವುದೂ ನಮಗೆ ಸುಂದರ ಹಾಗೂ ಆಕಾಂಕ್ಷೆಯ ಜೀವನವನ್ನು ತೋರಲಾರರು.

ಆದುದರಿಂದ, ಈ ಮಾಲಿಕೆಯಲ್ಲಿ, ಪ್ರಾಚೀನ ಹಗೂ ಆಧುನಿಕ ಸಾಹಿತ್ಯವನ್ನು ಪ್ರತಿಬಿಂಬಿಸುವ ಕೃತಿಗಳನ್ನು, ಎಲ್ಲರಿಗೂ ಸುಲಭವಾಗಿ ದೊರಕುವಂತೆ ಪ್ರಕಟಿಸಲು

ಉದ್ದೇಶಿಸಲಾಗಿದೆ. ಪ್ರಪಂಚದ ಇತರ ಸಾಹಿತ್ಯಗಳಲ್ಲಿ ನಾವು ಗೌರವಿಸುವ ಮೌಲ್ಯಗಳ ಈ ಗುಣಗಳು ಕಂಡುಬಂದರೆ ಅವುಗಳನ್ನೂ ಇದರಲ್ಲಿ ಸೇರಿಸಿಕೊಳ್ಳಲಾಗುವುದು.

ಈ ರೀತಿಯ ಸಾಹಿತ್ಯ ವಾಹಿನಿಯು ಬೇರೆ ಬೇರೆ ಭಾಷೆಗಳ ಮೂಲಕ ಹರಿದು ಬಂದರೂ, ಅವುಗಳಲ್ಲಿ ಒಂದೇ ಗುರಿ ಮತ್ತು ಆಕಾಂಕ್ಷೆ ಕಾಣಬರುತ್ತದೆ. ಆದುದರಿಂದ ಇದು ಪೌರ್ವಾತ್ಯ ಅಥವಾ ಪಾಶ್ಚಿಮಾತ್ಯ ಓದುಗರಿಗೆ ಭಾರತದ ಆಂತರ್ಯವನ್ನು ತಿಳಿಯುವ ಹಾಗೂ ಪ್ರಪಂಚದ ಚಿಂತನೆಯನ್ನು ತಿಳಿಸುವ ಸಾಧನವಾಗುತ್ತದೆ ಎಂದು ಭಾವಿಸಲಾಗಿದೆ.

ಇದಕ್ಕನುಗುಣವಾಗಿ ಬುಕ್ ಯೂನಿವರ್ಸಿಟಿಯ ಮೊದಲನೆಯ ಪುಸ್ತಕ, ಅತ್ಯಂತ ಶ್ರೇಷ್ಠ ವಿದ್ವಾಂಸರಾದ ಶ್ರೀ ರಾಜಗೋಪಾಲಾಚಾರಿಯವರ 'ಮಹಾಭಾರತ' ಪ್ರಕಟವಾಗಿರುವುದು ನಮ್ಮ ಸುಯೋಗ; ಎರಡನೆಯ ಪುಸ್ತಕ ಇದರ ಒಂದು ಭಾಗವಾದ, ಖ್ಯಾತ ನ್ಯಾಯವಾದಿಗಳೂ ತತ್ವಶಾಸ್ತ್ರವಿದರೂ ಆದ ಎಚ್. ವಿ. ದವೆಯವರಿಂದ ರಚಿತವಾದ ಭಗವದ್ಗೀತೆ. ಇಲ್ಲಿ ಇಲ್ಲದ್ದು ಇನ್ನೆಲ್ಲಿಯೂ ಇರದು ಎಂದು ಮಹಾಭಾರತವನ್ನು ಕುರಿತು ಹೇಳಲಾಗಿತ್ತು. ಇಪ್ಪತ್ತೈದು ಶತಮಾನಗಳಾದ ನಂತರವೂ ನಾವು ಇದೇ ಮಾತನ್ನು ಪುನರುಚ್ಚರಿಸಬಹುದು. ಯಾರಿಗೆ ಮಹಾಭಾರತವು ಗೊತ್ತಿಲ್ಲವೋ, ಅವರಿಗೆ ಆತ್ಮದ ಆಳ ಮತ್ತು ಎತ್ತರ ತಿಳಿದಿಲ್ಲ; ಅಂತಹವರು ಜೀವನದ ಕಷ್ಟಸುಖಗಳಿಂದ ಹಾಗೂ ವೈಭವದಿಂದ ವಂಚಿತರಾಗಿರುತ್ತಾರೆ.

ಮಹಾಭಾರತವು ಕೇವಲ ಒಂದು ಮಹಾಕಾವ್ಯವಲ್ಲ; ವೀರ ರಮಣಿಯರ ಹಾಗೂ ಪುರುಷರ, ಅದರಲ್ಲಿಯೂ ದೈವಾಂಶ ಸಂಭೂತರಾದ ಕೆಲವರ ಮಹಾಗಾಥೆ, ಜೀವನದ ಗುರಿಯನ್ನು ತೋರಿಸುವ ಪೂರ್ಣ ಸಾಹಿತ್ಯವದು; ಸಾಮಾಜಿಕ ಹಾಗೂ ಮೌಲಿಕ ಸಂಬಂಧಗಳ ತಾತ್ವಿಕ ಚಿಂತನೆ; ಅದೊಂದು ಸರಿಸಾಟಿಯಿಲ್ಲದ ಮಾನವನ ಸಮಸ್ಯೆಗಳ ಕುರಿತಾದ ಚಿಂತನೆ; ಇವೆಲ್ಲವುಗಳಿಗಿಂತ ಮಿಗಿಲಾಗಿ ಅದರ ಮುಖ್ಯ ತಿರುಳು ಗೀತೆ. ಇದೊಂದು ಅತ್ಯಂತ ಉದಾತ್ತವಾದ ಪವಿತ್ರ ಗ್ರಂಥ: ಇದರ ಹನ್ನೊಂದನೆಯ ಅಧ್ಯಾಯದಲ್ಲಿ ಅದ್ಭುತವಾಗಿ ಭವಿಷ್ಯದ ದರ್ಶನವೇ ಆಗುತ್ತದೆ ಎಂಬುದನ್ನು ಇತ್ತೀಚೆಗೆ ವಿಶ್ವದ ಜನ ತಿಳಿಯಲು ಆರಂಭಿಸಿದ್ದಾರೆ.

ಇಂತಹ ಉತ್ತಮ ಪುಸ್ತಕಗಳಿಂದ ಮಾತ್ರ ನಮ್ಮ ನಿಜವಾದ ಸಂಸ್ಕೃತಿಯ ನೆಲೆ ತಿಳಿಯಬರುತ್ತದೆ ಮತ್ತು ನಮ್ಮ ಆಧುನಿಕ ಜೀವನದ ಸಂಘರ್ಷಗಳಿಗೆ ಒಂದು ದಿನ ಸಾಮರಸ್ಯವನ್ನು ಒದಗಿಸುತ್ತದೆ.

ಭವನದ ಈ ಕಾರ್ಯವನ್ನು ಸಫಲಗೊಳಿಸುವಲ್ಲಿ ಸಹಾಯ ಹಸ್ತ ನೀಡಿರುವ ಎಲ್ಲರನ್ನೂ ನಾನು ಮನಸಾರೆ ವಂದಿಸುತ್ತೇನೆ.

೧. ಕ್ವೀನ್ ವಿಕ್ಟೋರಿಯಾ ರೋಡ್
ನವದೆಹಲಿ
೩, ಅಕ್ಟೋಬರ್, ೧೯೫೧

ಕೆ.ಎಂ. ಮುನ್ಷಿ

ಮೂಲ ಲೇಖಕರ ನುಡಿ

ಈ ಪುಸ್ತಕದಲ್ಲಿ ನಾನು ಪ್ರಸ್ತಾವನೆಯ ರೂಪದಲ್ಲಿ ಭಾರತ ದೇಶದ ಚರಿತ್ರೆಯನ್ನು ರೂಪಿಸುವುದರಲ್ಲಿ ಅದರ ಭೌಗೋಳಿಕ ಅಂಶಗಳ ಪಾತ್ರವೇನು ಎಂಬುದನ್ನು ಉಲ್ಲೇಖಿಸಿ, ವಿವರಿಸುವ ಪ್ರಯತ್ನ ಮಾಡಿದ್ದೇನೆ. ಇಲ್ಲಿಯುವರೆಗೆ ಹೆಚ್ಚಿನ ಗಮನವನ್ನು, ಈ ವಿಷಯದತ್ತ ಯಾರೂ ಹರಿಸಿಲ್ಲ ನಮ್ಮ ದೇಶದಲ್ಲಿ ಭೂಗೋಳ ವಿಷಯವನ್ನು ತಾತ್ಸಾರದಿಂದ ನೋಡಲಾಗಿದೆ. ನಮ್ಮ ಭೌಗೋಳಿಕ ವಿಷಯಗಳ ಬಗ್ಗೆ ತೋರುತ್ತಿರುವ ತಾತ್ಸಾರ ಭಾವ ಈಗಲೂ ಮುಂದುವರಿದಿದೆ.

ಪ್ರತಿ ಒಂದು ದೇಶದ ಚರಿತ್ರೆಯನ್ನು ರೂಪಿಸುವಲ್ಲಿ ಆ ದೇಶದ ಭೂಗೋಳ, ಶಾಶ್ವತವಾದ ತಳಹದಿಯಾಗಿರುತ್ತದೆ. ಒಂದು ದೇಶದ ಜನರ ಚರಿತ್ರೆಯು ವಿಕಾಸವಾಗುವುದರಲ್ಲಿ ಭೂಗೋಳದ ಪಾತ್ರ ಪ್ರಮುಖವಾದುದು. ಭಾರತ ದೇಶದ ಚರಿತ್ರೆಯಲ್ಲಿ ಸಾಮಾನ್ಯವಾಗಿ ಸ್ಥಳೀಯ ರಾಜಮನೆತನಗಳ ಏಳಿಗೆ, ಅವಸಾನಗಳಿಗೆ ವಿಶೇಷ ಪ್ರಾಮುಖ್ಯ ನೀಡಲಾಗಿದೆ. ಹೀಗಾಗಿ ಚರಿತ್ರೆಯನ್ನು ರೂಪಿಸುವಲ್ಲಿ, ಇತರ ಸಂಗತಿಗಳನ್ನು ನಾವು ಗಮನಕ್ಕೆ ತಂದುಕೊಂಡಿಲ್ಲ. ಆದರೆ ಭೂಗೋಳವನ್ನು ಮರೆತ ರಾಷ್ಟ್ರವು ತನ್ನ ಅಸ್ತಿತ್ವವನ್ನೇ ಮರೆತಂತಾಗುತ್ತದೆ. ಒಂದು ದೇಶದ ಆಗುಹೋಗುಗಳು ಮತ್ತು ವಿದೇಶಗಳೊಡನೆ ಸಂಬಂಧಗಳು ಬದಲಾಗದ ಭೌಗೋಳಿಕ ಸ್ಥಿತಿಗಳ ಆಧಾರದ ಮೇಲೆ ನಿಲ್ಲುತ್ತದೆ.

ಉದಾಹರಣೆಗೆ : ಮೊದಲ ಬಾರಿಗೆ ನಾವು ಸಾಧಿಸಿರುವ ದೇಶದ ಒಗ್ಗಟ್ಟನ್ನು ಹೇಗೆ ಕಾಪಾಡಿಕೊಂಡು ಹೋಗಬೇಕೆಂಬುದು ನಮ್ಮ ಮೊದಲ ಚಿಂತನೆಯಾಗಿದೆ. ಹೀಗೆ ಮಾಡುವ ಮೊದಲು ಯಾವ ಯಾವ ಭೌಗೋಳಿಕ ಸಮಸ್ಯೆಗಳು ನಮ್ಮ ಒಗ್ಗಟ್ಟನ್ನು ಸಾಧಿಸುವ ದಾರಿಯಲ್ಲಿ ಅಡ್ಡಗಾಲಾಗಿದ್ದವು ಎಂಬುದನ್ನು ಮನಗಾಣಬೇಕಾಗಿದೆ.

ಸಮುದ್ರವನ್ನೇ ನೋಡಿ. ದೇಶ, ಮೂರು ಕಡೆಗಳಲ್ಲಿ ಸಮುದ್ರದಿಂದ ಆವೃತವಾಗಿದೆ. ಆದರೂ ೪೫೦ ವರ್ಷಗಳಿಂದ ಸಮುದ್ರದ ಮೇಲೆ ಪ್ರಭುತ್ವ ಸಾಧಿಸಿದ ದೇಶಗಳ ರಾಜಕೀಯ ಮತ್ತು ಆರ್ಥಿಕ ಒತ್ತಡಗಳಿಗೆ ಒಳಗಾಗಿದ್ದರೂ, ನಮ್ಮ ಚರಿತ್ರೆಯಲ್ಲಿ ಸಮುದ್ರಾಧಿಪತ್ಯದ ವಿಷಯದಲ್ಲಿ ನಾವು ಹೇಳಿಕೊಳ್ಳುವಂತಹ ಅಭಿವೃದ್ಧಿ ಏನನ್ನೂ ಸಾಧಿಸಿಲ್ಲ. ಇನ್ನೊಂದು ಗಮನಿಸಬೇಕಾದ ಸಂಗತಿ ಎಂದರೆ ನಮ್ಮ ದೇಶ ಚೀನಾ ಹಾಗೂ ಪರ್ಶಿಯಾಗಳಂತೆ ವಿದೇಶ ಸಂಬಂಧದಲ್ಲಿ ನಿಖರವಾದ ಯಾವ ರಾಜಕೀಯ ನೈಪುಣ್ಯವನ್ನೂ ಸಾಧಿಸಿಲ್ಲ. ಬ್ರಿಟಿಷರು ತಮ್ಮ ಆಡಳಿತವನ್ನು ನಮ್ಮ ಮೇಲೆ ಹೇರುವವರೆಗೆ, ನಾವು ನೌಕಾಬಲದ ವಿಷಯದಲ್ಲಾಗಲಿ, ಯೂರೋಪ್ ದೇಶಗಳೊಡನೆಯ ಸಂಬಂಧದಲ್ಲಾಗಲಿ ಯಾವ ಹಿರಿಮೆಯ ಮನೋಭಾವವನ್ನೂ ಬೆಳೆಸಿಕೊಳ್ಳಲಿಲ್ಲ.

ಇಂದು ಸ್ವತಂತ್ರ ಭಾರತದ ಭೌಗೋಳಿಕ ಅಂಶಗಳು ನಮ್ಮನ್ನು ಪ್ರಪಂಚದ ಇತರ ದೇಶಗಳೊಡನೆ ಹೇಗೆ ಬಂಧಿಸಿವೆ ಎಂಬ ಸಂಗತಿಯನ್ನು ಅರಿಯಬೇಕಾಗಿದೆ. ಭೌಗೋಳಿಕ ಅಂಶಗಳು ಹೇಗೆ ನಮ್ಮ ಬಲಾಬಲಗಳನ್ನು ನಿರ್ಣಯಿಸಿವೆ ಎಂಬಂಶವನ್ನು ನಾವು ಮನಗಾಣಬೇಕಾಗಿದೆ.

ಈ ದಿಸೆಯಲ್ಲಿ ಇದು ಅಗಾಧವಾದ ಈ ಸಮಸ್ಯೆಯ ಪ್ರಮುಖ ಅಂಶಗಳತ್ತ ನಮ್ಮ ಗಮನವನ್ನು ಸೆಳೆಯುವುದು ಆಗಿದೆಯೇ ಹೊರತು ವಿವರವಾದ ಹಾಗೂ ದೀರ್ಘವಾದ ಚಿಂತನೆಯಲ್ಲ ಎಂಬುದನ್ನು ತಿಳಿಸಬಯಸುತ್ತೇನೆ.

ಕೊಚಿನ್ — **ಕೆ.ಎಂ. ಪಣಿಕ್ಕರ್**

ಜನವರಿ ೧೯೫೫

Blank Page

ಪರಿವಿಡಿ

Blank Page

ಭಾರತದ ಚರಿತ್ರೆಯಲ್ಲಿ ಭೌಗೋಳಿಕ ಅಂಶಗಳು

ಅಧ್ಯಾಯ ೧

ಪ್ರಸ್ತಾವನೆ

ಭೂ ಶಾಸ್ತ್ರ ಎಂದರೆ ಭೂಗೋಳ ಮತ್ತು ರಾಜನೀತಿಯ ಸಂಬಂಧದ ಒಂದು ಹೊಸ ಅಭ್ಯಾಸದ ವಿಷಯವೇ ಆಗಿದೆ. ಬಹಳಕಾಲ ಭೂಗೋಳ ಶಾಸ್ತ್ರ ಎಂದರೆ, ಭೂಮಿಯ ಮೇಲ್ಮೈನ ಅಧ್ಯಯನ ಹಾಗೂ ಅದರ ಏರಿಳಿತಗಳು, ಬೆಟ್ಟಗುಡ್ಡಗಳು, ಉಬ್ಬುತಗ್ಗುಗಳು, ಪರ್ವತಗಳು, ನದಿಗಳು, ಮರುಭೂಮಿ, ಮಟ್ಟಸವಾದ ಪ್ರದೇಶಗಳು, ಸಾಗರ, ಸಮುದ್ರ, ಖಾರಿ, ಕೊಲ್ಲಿ, ದೂರಸಂಪರ್ಕ, ದಿಕ್ಕುಗಳು, ಸಾಮಾನ್ಯ ಜೀವನಕ್ಕೆ ಬೇಕಾದ ವಿಷಯಗಳ ವಿವರಣೆ, ಜೊತೆಗೆ ಮಾರುತಗಳು, ಸ್ವಾಭಾವಿಕ ವಿಭಾಗಗಳು, ಹವಾಮಾನ, ಪ್ರವಾಹಗಳೂ ಮುಂತಾದ ಸಾಮಾನ್ಯ ಜನರ ಜೀವನದ ಮೇಲೆ ಪರಿಣಾಮ ಬೀರುವ ವಿಷಯಗಳನ್ನು ಒಳಗೊಂಡಿದ್ದವು. ೧೯ನೇ ಶತಮಾನದ ಬಕಲ್ ಎಂಬುವನು ಒಂದು ಹೊಸ ಪರಂಪರೆಯನ್ನು ಎಂದರೆ, ನಾಗರಿಕತೆಗೂ ಭೂಗೋಳ ಶಾಸ್ತ್ರಕ್ಕೂ ಇರುವ ಸಂಬಂಧವನ್ನು ಪ್ರಚಾರಕ್ಕೆ ತಂದನು. ಇಪ್ಪತ್ತನೆಯ ಶತಮಾನದಲ್ಲಿ ಪ್ರಪಂಚದ ದೃಷ್ಟಿಯಲ್ಲಿ ಭೂಗೋಳವು ರಾಜ್ಯಶಾಸ್ತ್ರದ ಮೇಲೆ ಪರಿಣಾಮ ಬೀರುತ್ತದೆ ಎಂಬ ಅಂಶ ಹೊಸದಾಗಿ ಸೇರಿಕೊಂಡಿತು.

ಈ ಹೊಸಭಾವನೆಯ ಉಗಮದ ಕರ್ತೃ ಸರ್ ಹ್ಯಾಲ್‌ಫೋರ್ಡ್ ಮೆಕಿಂಡರ್. ಅವನ "ಜಿಯೋಗ್ರಾಫಿಕಲ್ ಪಿವೊಟ್ ಆಫ್ ಹಿಸ್ಟರಿ" ಎಂಬ ಪ್ರಬಂಧವು ಭೂರಾಜ್ಯ ಶಾಸ್ತ್ರದ ಪ್ರಾಥಮಿಕ ಕಲ್ಪನೆಗಳ ಉಗಮ ಎಂದು ಭಾವಿಸಬಹುದು. ಮುಂಬರುವ ಅಧ್ಯಾಯಗಳಲ್ಲಿ ಇಂಥ ಕಲ್ಪನೆಗಳನ್ನು ವಿಸ್ತಾರವಾಗಿ ವಿವೇಚಿಸಲಾಗಿದೆ. ಸದ್ಯಕ್ಕೆ ಸ್ಥೂಲವಾಗಿ ಹೇಳುವುದಾದರೆ ಮೆಕಿಂಡರನ ಅಭಿಪ್ರಾಯದಲ್ಲಿ ಆಫ್ರೋ–ಯುರೇಶಿಯನ್ ಖಂಡವು ಪ್ರಪಂಚ ದ್ವೀಪ. ಇದು ಹೊಸ ಗೋಳಾರ್ಧದಿಂದ ಬೇರ್ಪಟ್ಟಿದೆ ಮತ್ತು ಪ್ರಪಂಚ ದ್ವೀಪಕ್ಕಿಂತ ಚಿಕ್ಕದು. ಭೂಮಿಯನ್ನು ಒಂದು ಭೌಗೋಳಿಕ ಘಟಕ ಎಂದು ಭಾವಿಸಿದವರಲ್ಲಿ ಮೆಕಿಂಡರನೇ ಮೊದಲಿಗ. ಆತನಿಗೆ ಭಾಸವಾದಂತೆ, ಸಾಗರಶಕ್ತಿಗಳಿಂದ ಸ್ಪರ್ಶಿಸಲಾಗದ, ಭೂಮಿಯ ಹೃದಯಭಾಗಗಳಾದ ಪ್ರದೇಶಗಳು ನಿರಂತರವಾಗಿ ಸಮುದ್ರ ತಟದ ಕಡೆಗೆ ಒತ್ತರಿಸುತ್ತಿದ್ದುವು. ಅವನ ಅದ್ಭುತವಾದ

"ಡೆಮೊಕ್ರಾಟಿಕ್ ಐಡಿಯಲ್ಸ್ ಮತ್ತು ರಿಯಾಲಿಟೀಸ್‌ಗಳಲ್ಲಿ" ಈ ವಿಚಾರ ವಿಸ್ತಾರವಾಗಿ ವಿವರಿಸಲ್ಪಟ್ಟಿದೆ. ಇದಕ್ಕೆ ಅನಿರೀಕ್ಷಿತವಾಗಿ ಜರ್ಮನಿಯ ಬುದ್ಧಿಜೀವಿಗಳಿಂದ ಒತ್ತಾಸೆ ಸಿಕ್ಕಿತು. ಮುಖ್ಯವಾಗಿ ಹೌಸೋಫರ್ ಮತ್ತು ಆತನ ಅನುಯಾಯಿಗಳು ಇದರ ಪ್ರಬಲ ಪ್ರತಿಪಾದಕರು. ಅವರ ಮುಖ್ಯ ಧ್ಯೇಯ ಜರ್ಮನಿಯ ಬಲವರ್ಧನೆ. ಒಂದು ರೀತಿಯಲ್ಲಿ ಹಿಟ್ಲರ್ ಮತ್ತು ಅವನ ಸೇನಾನಿಗಳ ಮಿಲಿಟರಿ ಯೋಚನೆಗಳಿಗೆ ಭೂಮಿಕೆಯಾದದ್ದು ಇದೇ ವಾದ. ಈ ವಿಚಾರ ಈಗ ನಮಗೆ ಬೇಡ. ಆದರೆ, ಹೌಸೋಫರ್ ಮತ್ತು ಅವನ ಶಿಷ್ಯರ ವಾದ ಭೂಶಾಸ್ತ್ರವು ಮುಂದೆ ಭೂವಿಜ್ಞಾನಗಳಾದ ಜಿಯೋಮೆಡಿಸಿನ್, ಜಿಯೋನಾಮಿಕ್ಸ್ ಮುಂತಾದ ಹೆಸರುಗಳ ವಿಭಾಗಗಳಿಗೆ ಮಾತೃಶಾಸ್ತ್ರವಾಯಿತು.

ಈ ಹೌಸೋಫರ್‌ನ ವಾದ ಮುಂದೆ ಹಿಟ್ಲರನ ಆಕ್ರಮಣಕಾರಿ ಯುದ್ಧಕ್ಕೆ ಮೂಲವಾಯಿತೆಂಬ ವಿಚಾರ ನಮಗೆ ಈಗ ಅನವಶ್ಯಕ. ಆದರೆ ಮೆಕಿಂಡರ್‌ನ ಯೋಚನಾ ತರಂಗಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಭೂರಾಜ್ಯಶಾಸ್ತ್ರವನ್ನು ಒಂದು ಗಂಭೀರ, ವಿಚಾರಶೀಲ ಅಧ್ಯಯನವನ್ನಾಗಿ ಮಾಡಿದ ಸಂಗತಿ ಮುಖ್ಯ.

ಮೆಕಿಂಡರ್ ಪ್ರಕಾರ ಪ್ರತಿಯೊಂದು ದೇಶವೂ ತನ್ನದೇ ಆದ ದೃಷ್ಟಿಕೋನವನ್ನು ಹೊಂದಿರುತ್ತದೆ.

ಭಾರತದವರಾದ ನಾವು ಗ್ರೀನ್‌ವಿಚ್ ಮೆರಿಡಿಯನ್ ರೇಖಾಂಶದ ಆಧಾರದ ಮೇಲೆ ರಚಿತವಾದ ಭೂಪಟಗಳಿಗೆ ಹೊಂದಿಕೊಂಡು ಬ್ರಿಟಿಷರ ಭೌಗೋಳಿಕ ದೃಷ್ಟಿಕೋನವೇ ಪ್ರಾಮಾಣಿಕ ಎಂದು ನಂಬಿದ್ದೇವೆ. ಆದರೆ ನಾವು ವಿಶ್ವಸಂಸ್ಥೆಯ ಲಾಂಛನದ ಮೇಲಿರುವ ಉತ್ತರಧ್ರುವವನ್ನು ಕೇಂದ್ರವಾಗಿ ಇಟ್ಟುಕೊಂಡು ರಚಿಸಿರುವ ಪ್ರಪಂಚ ಭೂಪಟವನ್ನು ವೀಕ್ಷಿಸಿದರೆ ನಮ್ಮ ದೃಷ್ಟಿಕೋನವೇ ಬದಲಾಯಿಸುತ್ತದೆ.

ಮರ್ಕೆಟೋರಿಯಲ್ ಕಲ್ಪನೆಯಂತೆ ರಚಿಸಿರುವ ಭೂಪಟಗಳನ್ನು ನೋಡಿದರೆ ಭೂಮಿ ಚಪ್ಪಟೆಯಾಗಿ ಬೇರೆ ರೀತಿಯಾಗಿಯೇ ಕಾಣುತ್ತದೆ. ಉತ್ತರ ಧ್ರುವ ದೃಷ್ಟಿಯಿಂದ ಬರೆದ ಭೂಪಟದಲ್ಲಿ, ನಮ್ಮ ಮನಸ್ಸಿನಲ್ಲಿ ನೆಲೆಯಾಗಿ ನಿಂತಿರುವ ಚಪ್ಪಟೆ ಪಟದ ದೂರಾಂತರಗಳು ಬದಲಾಗಿ ಅಸ್ತವ್ಯಸ್ತವಾಗಿ ಕಾಣುತ್ತವೆ.

ಭೂಮಿಯು ಗುಂಡಾಗಿರುವುದರಿಂದ, ಯಾವುದೇ ಬಿಂದುವನ್ನು ಭೂಮಿಯ ಮಧ್ಯಬಿಂದು ಎಂದು ಪರಿಗಣಿಸಿ, ಭೂಮಿಯು ಆ ಬಿಂದುವಿನ ಸುತ್ತ ಸುತ್ತುತ್ತಿದೆ ಎಂದು ಕಲ್ಪಿಸಿಕೊಳ್ಳಬಹುದು.

ಆಧುನಿಕ ಭೂಗೋಳವು ಸಮುದ್ರಯಾನ ಅನ್ವೇಷಕರಿಂದ ಪ್ರಾರಂಭವಾಯಿತು. ಈ ಸಂಶೋಧಕರು ಹೊಸ ಹೊಸ ಸಮುದ್ರ ಮಾರ್ಗಗಳನ್ನು ಕಂಡುಹಿಡಿದರು. ಅಜ್ಞಾತ ಸಮುದ್ರಗಳನ್ನು ಪರಿಶೋಧಿಸಿದರು. ಇಲ್ಲಿಯವರೆಗೂ ಗೊತ್ತಿರದಿದ್ದ ಭೂಖಂಡಗಳನ್ನು ಕಂಡುಹಿಡಿದರು.

ಡಯಜ಼್, ಕೊಲಂಬಸ್, ವಾಸ್ಕೋಡಿಗಾಮ, ಮ್ಯಾಗಲನ್, ಕುಕ್ ಇವರುಗಳು ಆಧುನಿಕ ಸಮುದ್ರ ಭೂಶಾಸ್ತ್ರದ ಕಲಿಪುರುಷರು. ಹೊಸ ಭೂ–ಅರ್ಧಗೋಳ, ಆಸ್ಟ್ರೇಲಿಯಾ, ದೂರ ಪೆಸಿಫಿಕ್ ಸಾಗರದ ದ್ವೀಪಗಳನ್ನು ಬಿಟ್ಟರೆ ಈ ಅನ್ವೇಷಕರು ಬೇರೆ ಯಾವ ಹೊಸ ಖಂಡ, ದೇಶಗಳನ್ನೂ ಭೌಗೋಳಿಕ ಸಂಗತಿಗಳನ್ನೂ ಕಾಣಲಿಲ್ಲ.

ಭಾರತ, ಚೀನಾ, ಜಪಾನ್ ಮತ್ತು ಇಂಡೋನೇಷಿಯಾದ ದ್ವೀಪಗಳು ಇವೆ ಎಂಬುದು, ಪೋರ್ಚುಗಲ್, ಜಿನೋವಾ, ವೆನಿಸ್‌ಗಳು ಸಮುದ್ರಯಾನಕ್ಕೆ ತಯಾರಾಗುವುದಕ್ಕೆ ಮುಂಚೆಯೇ, ಯುರೋಪಿನ ಜನರಿಗೆ ಗೊತ್ತಿತ್ತು. ರೇಷ್ಮೆದಾರಿಯಲ್ಲಿ ಕಾರವಾನ್‌ಗಳು ಚೀನದಿಂದ ಅಲ್ಲಿ ತಯಾರಾದ ವಸ್ತುಗಳನ್ನು ಯುರೋಪಿಗೆ ಒಯ್ಯುತ್ತಿದ್ದವು. ಹೆರೊಡೋಟಸ್ ಕಾಲದಿಂದಲೂ ಭಾರತ ದೇಶವು ಪಾಶ್ಚಾತ್ಯ ರಾಷ್ಟ್ರಗಳಿಗೆ ಗೊತ್ತಿತ್ತು. ಈ ಭೂಸಂಪರ್ಕ ದಾರಿಯನ್ನು ಚೆನ್ನಾಗಿ ಗುರುತಿಸಲಾಗಿತ್ತು. ಹೂಣರು, ಮಂಗೋಲಿಯರು, ಮತ್ತು ಟರ್ಕಿಯರು ಯುರೋಪಿನ ಹೆಚ್ಚು ಹೆಚ್ಚು ಭೂಪ್ರದೇಶಗಳನ್ನು ಗೆದ್ದು ಈ ಸಂಗತಿಯನ್ನು ದೃಢಪಡಿಸಿದ್ದಾರೆ.

ರಾಜಶಾಸನದಿಂದ ರಕ್ಷಿತರಾದ ನಾವಿಕರು ಉತ್ತರ ಮತ್ತು ದಕ್ಷಿಣ ಧ್ರುವಗಳನ್ನು ಮುಟ್ಟಿದಾಗ, ಸಾಗರಗಳನ್ನು ಶೋಧಿಸಿದಾಗ, ಭೂಗೋಳ ಶಾಸ್ತ್ರವು ಪ್ರಪಂಚದ ಶಾಸ್ತ್ರವಾಯಿತು. ಹೀಗಾಗಿ ಭೂಗೋಳ ಶಾಸ್ತ್ರ ನೌಕಾಯಾನ ಶಾಸ್ತ್ರವಾಯಿತು. ಆದರೆ ಈ ಭೂಗೋಲ ಶಾಸ್ತ್ರದಿಂದ ಕೆಲವು ಮಿಥ್ಯಾಭಾವನೆಗಳುಂಟಾದವು. ಉದಾಹರಣೆಗೆ ನಾವಿಕರು ತಾವು ಹಡಗಿನಲ್ಲಿ ತಲುಪಲಾಗದ ಪ್ರದೇಶಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಡಲಿಲ್ಲ. ಹೀಗಾಗಿ ನಮ್ಮ ಭೂಗೋಳದ ಪುಸ್ತಕಗಳು ಹಿಮಾಲಯ ಪರ್ವತದ ಉತ್ತರಕ್ಕಿರುವ ವಿಶಾಲ ಪ್ರದೇಶಗಳ ವಿಚಾರವಾಗಿ ಏನೇನೂ ತಿಳಿಸುವುದಿಲ್ಲ. ಆದರೆ ಮಂಗೋಲಿಯನ್ನರು ಈ ಪ್ರದೇಶದ ಭೌಗೋಳಿಕ ಸಂಗತಿಗಳನ್ನು ಎಷ್ಟು ಚೆನ್ನಾಗಿ ತಿಳಿದಿದ್ದರೆಂದರೆ, ಅವರು ಮತ್ತೆ ಮತ್ತೆ ಈ ಮಾರ್ಗವಾಗಿ ನಮ್ಮ ದೇಶದ ಮೇಲೆ ದಾಳಿ ನಡೆಸಿದರು. ಭೂಸಾಮ್ರಾಜ್ಯಗಳ ದೃಷ್ಟಿಯಿಂದ ಆಯಕಟ್ಟಿನ ಅನೇಕಾನೇಕ ಭೂಭಾಗಗಳು ಅವರಿಗೆ ತಿಳಿದಿತ್ತು. ಉದಾಹರಣೆಗೆ ಫರ್‌ಘಾನದ ಓಯಸಿಸ್, ಮುಖ್ಯ ನಿರ್ಧಾರಕ ಪ್ರದೇಶವಾಗಿ ಏಷಿಯಾದ ಚರಿತ್ರೆಯ ಸಾರ್ವಕಾಲಿಕ ಚಿಂತನದಲ್ಲಿ ಒಂದಾಗಿದೆ. ಟಾಯ್ನ್‌ಬಿ ಹೇಳುವಂತೆ ಕಾರವಾನ್ ಯುಗದಲ್ಲಿ ಅದು ಪ್ರಪಂಚದ ಮಧ್ಯಬಿಂದುವಾಗಿತ್ತು. ಸಮುದ್ರಯಾನದ ದೃಷ್ಟಿಯಲ್ಲಿ ಇವತ್ತಿಗೂ ಅದೊಂದು ಮುಖ್ಯ, ಆರ್ಯರು ಕಟ್ಟಿದ ಜಾಗ ಎಂದು ಯಾರಿಗೂ ತಿಳಿದಿಲ್ಲ.

ಭೂಗೋಳ ಶಾಸ್ತ್ರ ಅಭ್ಯಾಸಮಾಡುವ ಯಾರೇ ಆಗಲಿ, ಭೂ ಮಂಡಲದ ಪ್ರತಿಕೃತಿಯನ್ನು ನೋಡಿದರೆ ಎರಡು ತೆರನಾದ ಮೈದಾನ ಪ್ರದೇಶಗಳು

ಗೋಚರವಾಗುತ್ತವೆ. ಒಂದು: ಭೂ ಪ್ರದೇಶವನ್ನು ಬಳಸಿರುವ ನೀರಿನ ಸಾಗರಗಳು, ಎರಡು: ಭೂ ಮಧ್ಯಪ್ರದೇಶವನ್ನು ಆಕ್ರಮಿಸಿರುವ, ಜನಾವೃತ ಪ್ರದೇಶಗಳನ್ನು ಸದಾ ಕೊರೆಯುತ್ತಿರುವ, ಮರಳೂ ಮತ್ತು ಟಂಡ್ರಾ ಸಮುದ್ರಗಳು. ಭೂಭಾಗಗಳನ್ನು ಸುತ್ತುವರಿದ ಮರುಭೂಮಿ, ಒಂದು ಮರಳುಸಾಗರ ಮತ್ತು ಮರಗಳಿಲ್ಲದ ವಿಶಾಲ ಮೈದಾನ ಪ್ರದೇಶ. ಇದು ಅಟ್ಲಾಂಟಿಕ್ ಗಡಿ ಪ್ರದೇಶದಿಂದ ಶುರುವಾಗಿ, ಆಫ್ರಿಕಾ ಅರೇಬಿಯಾ ಮರುಭೂಮಿ, ಸಿರಿಯಾ ಮರುಭೂಮಿ, ಖರಾಕುರಂ ಮುಖಾಂತರ, ಮಧ್ಯ ಏಷ್ಯಾ ಗೋಬಿ ಮರುಭೂಮಿಯನ್ನು ಆಕ್ರಮಿಸಿದೆ. ಇನ್ನೂರು ವರ್ಷ ಹಿಂದಕ್ಕೆ ಕಣ್ಣು ಹಾಯಿಸಿದರೆ ಈ ಮರಗಳಿಲ್ಲದ ಪ್ರದೇಶ ವೋಲ್ಗಾ ಪ್ರದೇಶವನ್ನೂ ಒಳಗೊಂಡಿದ್ದು ಗೋಚರವಾಗುತ್ತದೆ. ಈ ವಿಶಾಲ ಮರಳು ಸಮುದ್ರ, ನೀರಿನ ಸಾಗರಗಳಂತೆ, ದ್ವೀಪಗಳಿಂದ ಕೂಡಿದೆ. ಇವುಗಳನ್ನು ಓಯಸಿಸ್‌ಗಳೆಂದು ಕರೆಯುತ್ತಾರೆ. ಇವುಗಳಲ್ಲಿ ಸಣ್ಣ ಪುಟ್ಟ ದೊಡ್ಡ ಎಂಬ ಪ್ರಭೇದಗಳಿವೆ. ಈಜಿಪ್ಟ್ ಎಂಬುದು ಒಂದು ದೊಡ್ಡ ಓಯಸಿಸ್, ಒಂದು ದೇಶವೇ ಆಗಿದೆ. ಪುರಾತನ ಕಾಲದಿಂದಲೂ ಕಾರವಾನ್‌ಗಳು ಈ ತೆರವಾದ ಜಾಗದಲ್ಲಿ ಬಿರುಗಾಳಿ, ಹುದುಗಿರುವ ಅಪಾಯಗಳು ಮತ್ತು ಸಾವುಗಳನ್ನು ಎದುರಿಸುತ್ತ ಸಾಗುತ್ತಿದ್ದುವು. ನಾವಿಕರು ಹಡಗುಗಳಲ್ಲಿ ಸಮುದ್ರವನ್ನು ದಾಟುವಂತೆ, ಒಂಟೆ ಮತ್ತು ಕುದುರೆಗಳ ಸವಾರರು ಈ ಮರಳು ಸಮುದ್ರಗಳನ್ನು ದಾಟುತ್ತಿದ್ದರು.

ಜಲಸಂಚಾರ ಹಡಗುಗಳು ಈ ಮರುಭೂಮಿ ಸವಾರರು ಮಾಡಿದುದಕ್ಕಿಂತ ಹೆಚ್ಚಾಗಿ ದೇಶದೇಶಗಳ ಮಧ್ಯೆ ಸಾಂಸ್ಕೃತಿಕ ಸಂಪರ್ಕಗಳನ್ನು ಮಾಡಿದುವು ಎಂದು ಹೇಳುವುದು ಚರಿತ್ರೆಗೆ ಅಪಚಾರ ಮಾಡಿದಂತಾಗುತ್ತದೆ.

ಹಬೆಯಿಂದ ಸಾಗುವ ಹಡಗುಗಳು ಬರುವವರೆಗೆ ಮರುಭೂಮಿಯ ಒಂಟೆ ಮತ್ತು ಕುದುರೆ ಸವಾರರೇ ಹೆಚ್ಚು ಹೆಚ್ಚು ಸಾಂಸ್ಕೃತಿಕ ಸಂಬಂಧ ವಾಹಕರಾಗಿದ್ದರು. ಹಬೆ ಹಡಗುಗಳು ಕೂಡ ಈ ಕಾರ್ಯವನ್ನು ಹೆಚ್ಚಾಗಿ ಮಾಡಲಾಗಲಿಲ್ಲ. ಏಕೆಂದರೆ ಹಬೆ ರೈಲುಗಳೂ ಇದೇ ಸಮಯಕ್ಕೆ ನೆಲದ ಮೇಲೆ ಹರಿದಾಡಲು ಪ್ರಾರಂಭಿಸಿದವು. ಬಾಗ್‌ದಾದ್ ರೈಲು ಕ್ಸೆರಸ್ಸ್ನ ಭೂಮಾರ್ಗವನ್ನೇ ಅನುಸರಿಸುತ್ತಿರುವುದು ತಿಳಿದಿರಬೇಕಾದ ಅಂಶ.

ಈ ರೀತಿ ನೋಡಿದಾಗ, ನೀರಿನ ಸಾಗರ ಮತ್ತು ಮರಳಿನ ಸಾಗರಗಳ ಮಧ್ಯದ ಹೆಚ್ಚುವರಿ ಭೂಭಾಗವೇ ಅವುಗಳಿಂದ ಸುತ್ತುವರಿದ ಪರಿಧಿ ಪ್ರದೇಶಗಳು, ಹೆಪ್ಪುಗಟ್ಟಿದ ಸರೋವರಗಳಿಂದ, ಮಾನ್‌ಸೂನ್‌ಗಳಿಂದ ನೀರುಂಡ ಪ್ರದೇಶಗಳು.

ಮೆಡಿಟರೇನಿಯನ್ ಸಮುದ್ರದ ಸುತ್ತಮುತ್ತಲಿನ ಪ್ರದೇಶ ನೈಲ್ ನದಿಯಿಂದ ನೀರುಣ್ಣುವ ಈಜಿಪ್ಟ್ ಯೂಫ್ರೆಟಿಸ್–ಟೈಗ್ರಿಸ್ ಕಣಿವೆ, ಸಿಂಧೂ ಗಂಗಾನದಿಗಳ ಮೈದಾನ ಪ್ರದೇಶ, ಆಗ್ನೇಯ ಏಷ್ಯಾ ಮತ್ತು ಚೀನಾ, ಇವು ನೀರು ಮತ್ತು ಮರಳು

ಸಾಗರಗಳ ಅಂಚಿನಲ್ಲಿರುವ ಪ್ರದೇಶಗಳು. ಈ ಜಾಗಗಳಲ್ಲೇ ನಾಗರಿಕತೆಗಳು ಬೆಳೆದುದು, ಬೆಳೆಯುತ್ತಿರುವುದು, ಸದಾಕಾಲ.

ನಿಶ್ಚಯವಾದ ಜೀವನ ಪದ್ಧತಿಗಳಿಗೆ ಬದ್ಧರಾದ ಜನ ಸಮುದಾಯಗಳೂ ಈ ಪ್ರದೇಶದಲ್ಲಿ ನೆಲೆಸಿ ಸದಾ ಮುಂದುವರಿಯುತ್ತಿರುವ ವ್ಯವಸಾಯ ಮತ್ತು ತಂತ್ರಕಲಾ ಕೌಶಲಗಳಿಂದ ಸಂಘಟಿತ ನಿರ್ದಿಷ್ಟ ಸಮಾಜಗಳಾಗಿ ಬೆಳೆದುವು.

ಕ್ರಿ. ಪೂ. ೨೦೦೦ ವರ್ಷಗಳ ಹಿಂದೆ, ಚರಿತ್ರೆಯು ಜನನವಾಗಿ, ಬೆಳೆಯುತ್ತಿರುವ ಈ ಜಾಗಗಳಲ್ಲೇ ಮಾನವ ಕುಲ ಅಧಿಕ ಸಂಖ್ಯೆಯಲ್ಲಿ ನೆಲೆಸಿ ಅಭಿವೃದ್ಧಿಯಾಗುತ್ತಿರುವುದು.

ಅಲೆಮಾರಿ ಗುಂಪುಗಳು, ನೆಲೆನಿಂತ ನಾಗರಿಕತೆಗಳ ಮೇಲೆ ಹೇರಿದ ಒತ್ತಡಗಳೇ ಚರಿತ್ರೆ. ಮೇಲೆ ಮೇಲೆ ಈ ಅಲೆಮಾರಿ ಗುಂಪುಗಳ ಎದುರಿಗೆ ಬಂದ ದೇಶಗಳೂ ಧ್ವಂಸವಾದವು, ತುಂಡು ತುಂಡಾದವು.

ಭೌಗೋಳಿಕ ಅಂಶಗಳಿಂದ ರಕ್ಷಿತವಾಗಿದ್ದ ಕೆಲವು ಪ್ರದೇಶಗಳು ಈ ದಾಳಿಗಳಿಂದ ಚೇತರಿಸಿಕೊಂಡು ಮರುಜೀವ ಪಡೆದುವು. ಈ ಅಲೆಮಾರಿ ಗುಂಪುಗಳಲ್ಲಿ ಮೊದಲನೆಯದೆಂದು ಹೇಳುವುದಾದರೆ, ಅದು ಆರ್ಯರ ಗುಂಪು. ಮಧ್ಯ ಏಷ್ಯಾದಿಂದ ಹೊರಟ ಈ ಆರ್ಯರು ಇರಾನನ್ನು ಮೊದಲು ಆಕ್ರಮಿಸಿದರು. ಯುರೋಪ್ ಖಂಡವನ್ನು ಆಕ್ರಮಿಸಿ ಅಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಹೀಗೆ ಹೊರಟ ಆರ್ಯರ ಸವಾರಿ ಹಿಂದೂಕುಶ್ ಪರ್ವತಗಳನ್ನು ದಾಟುವಾಗ ತಮ್ಮ ತೀವ್ರತೆಯನ್ನು ಕಳೆದುಕೊಂಡು ಭಾರತ ದೇಶಕ್ಕೆ ಕಾಲಿಟ್ಟಾಗ, ಅದೊಂದು ಸಣ್ಣ ತೊರೆಯಂತಾಗಿ ಹರಿದಾಗ, ಇಲ್ಲಿನ ಮೂಲ ನಿವಾಸಿಗಳೊಂದಿಗೆ ರಾಜಿಮಾಡಿಕೊಂಡು ಒಂದು ಹೊಸ ಸಮಾಜವನ್ನು ರಚಿಸಬೇಕಾಯಿತು. ಆದರೆ ಈ ಆರ್ಯರ ದಾಳಿ ಭಾರತದ ಮೇಲೆ ಶಾಶ್ವತ ಪರಿಣಾಮಗಳನ್ನು ಬೀರದೆ ಇರಲಿಲ್ಲ.

ಋಗ್ವೇದದಲ್ಲಿ ಉಲ್ಲೇಖವಾಗಿರುವ, ಯಮುನಾ ತಟದಲ್ಲಿ ನಡೆದ ಹತ್ತು ರಾಜರ ಯುದ್ಧವನ್ನು ಅಚ್ಚ ಆರ್ಯ ಸಂಸ್ಕೃತಿಯ ಅಂತ್ಯ, ಹಿಂದೂ ಸಂಸ್ಕೃತಿಯ ಉಗಮ, ಎರಡೂ ಸಂಸ್ಕೃತಿಗಳ ಮಿಲನ ಎಂದು ಹೇಳಬಹುದು.

ಇದೇ ಸುಮಾರಿಗೆ ಹೂಣರು ಪೂರ್ವ ಯುರೋಪಿನ ಮೇಲೆ ದಾಳಿಮಾಡಿ, ರೋಮ್ ಚಕ್ರಾಧಿಪತ್ಯದ ಅಂತ್ಯ ಸಾರಿ, ರಾಜ್ಯಾಡಳಿತ ಸ್ಥಾಪಿಸಿದರು.

ಇದೇ ಹೂಣರ ಗುಂಪೊಂದು ಭಾರತ ದೇಶದ ಕಡೆಗೆ ತಿರುಗಿ ಹಿಂದೂಕುಶ್ ಪರ್ವತ ಪ್ರದೇಶದಲ್ಲಿ ನೆಲಸಿ, ಭಾರತಕ್ಕೆ ಬರುವ ಹೊತ್ತಿಗೆ ಅದೊಂದು ನಾಮಮಾತ್ರದ ದಾಳಿಯಾಗಿತ್ತು.

ಇದೇ ರೀತಿಯ ಕಥೆ ಮಂಗೋಲರ ಮತ್ತು ತುರ್ಕಿಗಳ ದಾಳಿಯದು.

ಚಂಗೇಸ್‌ಖಾನನ ನೇತೃತ್ವದಲ್ಲಿ ಮಂಗೋಲರು ಮಧ್ಯ ಏಷ್ಯಾದಿಂದ ಹೊರಟು ತಡೆಯಲಾಗದ ಶಕ್ತಿಯಿಂದ ಖವಾರಿಜ಼ಮಿಯನ್ ಚಕ್ರಾಧಿಪತ್ಯವನ್ನು ಅಮುದಾರ್ಯ ಕಣಿವೆಯಲ್ಲಿ ನಾಶಮಾಡಿ, ಬಹುಕಾಲ ನೆಲೆಯಾಗಿ ನಿಂತಿದ್ದ ಟೈಗ್ರಿಸ್ ನಾಗರಿಕತೆಗೆ ಮಂಗಳಹಾಡಿ, ರಷ್ಯದ ಬಯಲು ಪ್ರದೇಶಕ್ಕೆ ನುಗ್ಗಿ ಅಲ್ಲಿ ೨೫೦ ವರ್ಷ ರಾಜ್ಯಭಾರ ಮಾಡಿದರು. ಹೀಗೆ ಹೊರಟ ಮಂಗೋಲರ ಸೈನ್ಯ ಚೀನಾವನ್ನು ತಲುಪುವ ಹೊತ್ತಿಗೆ ತನ್ನ ಶೌರ್ಯವನ್ನು ಕಳೆದುಕೊಂಡಿತ್ತು. ರಷ್ಯವನ್ನು ೨೦೦ ವರ್ಷ ಆಳಿದ ಮಂಗೋಲರು ತಮ್ಮ ಕಾಡುತನವನ್ನು ಕಳೆದುಕೊಂಡು ನಾಗರಿಕತೆಯೆಡೆಗೆ ದಾಪುಗಾಲು ಹಾಕುತ್ತಿದ್ದರು. ಚೀನಾವನ್ನು ಆಳಿದ ಕುಬ್ಲೈಖಾನ್‌ನು ಸ್ವರ್ಗಪುತ್ರನೆಂಬ ಬಿರುದಿನೊಡನೆ ಕವಾರಿಜ಼ಮಿಯನ್ ಮತ್ತು ಕಾಲೀಫರ ಚಕ್ರಾಧಿಪತ್ಯಗಳನ್ನು ಧ್ವಂಸಮಾಡಿದ ಮೊಗಲರಿಗಿಂತ ನೂರು ಪಾಲು ನಾಗರಿಕನಾಗಿದ್ದನು. ಹಿಂದೆ ತಿಳಿಸಿದ ಎರಡು ಸಮುದ್ರಗಳಿಂದ ಸುತ್ತುವರಿದ ಜನಾಂಗಗಳನ್ನು ಸಂಪೂರ್ಣವಾಗಿ ನಾಶಮಾಡಲು ಬರ್ಬರ ಮೊಗಲರಿಗೆ ಆಗಲಿಲ್ಲ. ಟರ್ಕಿಗಳೂ ಅಷ್ಟೇ. ಮಧ್ಯ ಏಷ್ಯಾದಿಂದ ಹೊರಟ ಇವರ ಸೈನ್ಯಗಳು ಪಶ್ಚಿಮಕ್ಕೆ ಹೊರಟು, ಏಷ್ಯಾಮೈನರಿನಲ್ಲಿ ಸ್ಥಾಪಿತವಾಗಿದ್ದ ಬೈಜಾಂಟಿಯ ಚಕ್ರಾಧಿಪತ್ಯವನ್ನು ಗೆದ್ದರೂ ಅವರ ನಾಗರಿಕತೆಗೆ ಮರುಳಾಗಿ, ಅಲ್ಲೇ ನೆಲಸಿ, ಅವರೊಡನೆ ಒಂದಾದರು. ಭಾರತವನ್ನು ಆಕ್ರಮಿಸಿದ ಖಿಲ್ಜೀ ತುಘಲಕ್ ಮುಂತಾದ ಗುಂಪುಗಳು ಕೆಲಕಾಲ ಸಾಮ್ರಾಜ್ಯಗಳನ್ನು ಕಟ್ಟಿದರೂ, ಹಿಂದೂ ನಾಗರಿಕತೆಯನ್ನು ಗಂಗಾಕಣಿವೆಯಲ್ಲಿ ಕೂಡ ನಾಶ ಮಾಡಲು ಅಶಕ್ತರಾದರು. ಜನಜೀವನದಲ್ಲಿ ಹೆಚ್ಚು ಬದಲಾವಣೆಗಳೇನೂ ಆಗಲಿಲ್ಲ.

ಸಮುದ್ರ (ಗಳ್ಳರು) ಅಲೆಮಾರಿಗಳು ಚರಿತ್ರೆಯಲ್ಲಿ ಬಹಳ ಕಾಲದವರೆಗೆ, ಎಂದರೆ ೧೫, ೧೬, ೧೭ ನೇ ಶತಮಾನದಲ್ಲಿ ಸಾಗರ ಜ್ಞಾನ ಹೆಚ್ಚಾಗುವವರೆಗೆ ಅಷ್ಟಾಗಿ ಯಾವ ಚರಿತ್ರೆಯಲ್ಲೂ ಕಾಣಿಸಿಕೊಳ್ಳಲಿಲ್ಲ. ಸಾಗರ ಅಲೆಮಾರಿಗಳು ತಮಗೆ ತಿಳಿದಷ್ಟೇ ಪ್ರದೇಶಗಳಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿದರು. ಈ ಅಲೆಮಾರಿಗಳಲ್ಲಿ ಪ್ರಸಿದ್ಧರಾದವರು ವೈಕಿಂಗ್ ಎಂಬ ಉತ್ತರ ಜನ. ಇವರು ಜೀವಿಸಲು ಅಸಾಧ್ಯವಾದ ತಮ್ಮ ತಾಣಗಳಿಂದ ಪ್ರಾರಂಭಿಸಿ ಯುರೋಪಿನ ತೀರಪ್ರದೇಶಗಳನ್ನೆಲ್ಲ ಸುಲಿದು, ಕೊಳ್ಳೆ ಹೊಡೆದು ನಾಶಮಾಡಿದರು.

ಇಂಗ್ಲೆಂಡಿನ ಚರಿತ್ರೆಕಾರನೊಬ್ಬನು ಹೀಗೆ ಬರೆಯುತ್ತಾನೆ. 'ಅನೇಕ ತಲೆಮಾರುಗಳಿಂದ ಡೆನ್ಮಾರ್ಕ್, ಮತ್ತು ಸ್ಕಾಂಡಿನೇವಿಯಾಗಳು, ದೈತ್ಯಶಕ್ತಿಯ, ಶೌರ್ಯಸಾಹಸಿಗಳಾದ, ಕರುಣೆಯೇ ಇಲ್ಲದ ಕ್ರೂರಿಗಳಾದ ಮತ್ತು ಕ್ರಿಶ್ಚಿಯನ್ ಹೆಸರುಗಳನ್ನು ದ್ವೇಷಿಸುವ ಸಮುದ್ರಗಳ್ಳರನ್ನು ಹೊರಹಾಕಿದುವು. ಇವರಿಂದ ಇಂಗ್ಲೆಂಡ್ ಅನುಭವಿಸಿದಷ್ಟು ಕಷ್ಟ ನಷ್ಟಗಳನ್ನು ಬೇರಾವ ದೇಶವೂ ಅನುಭವಿಸಲಿಲ್ಲ. ಬ್ರಿಟಿಷ್ ಕಡಲ್ಗಾಲುವೆಯ ಎರಡು ದಡಗಳೂ ಅವರ ಹಡಗಿನ ಹಾಯಿ ನೋಡೇ

ನಡುಗಿಹೋಗುತ್ತಿದ್ದುವು. ಮೇಲಿಂದ ಮೇಲೆ ಅವರ ಸಶಸ್ತ್ರಪಡೆಗಳು ಕ್ಯಾರೋಲಿಂಜಿಯನ್ ಸಾಮ್ರಾಜ್ಯದ ಮೇಲೆ ಆಕ್ರಮಣ ಮಾಡುತ್ತಿದ್ದುವು. ಪ್ಯಾರಿಸ್ ಮತ್ತು ಮೆಸಟ್ರಿಚಟ್ ನಗರಗಳ ಮೇಲೆ ದಾಳಿಮಾಡಿ ಜಯ ಸಾಧಿಸುತ್ತಿದ್ದುವು. ಅಟ್ಲಾಂಟಿಕ್‌ನಿಂದ ಡೆಡ್ ಸೀವರೆಗಿನ ಎಲ್ಲಾ ದೇಶಗಳೂ ಅವರ ಅಸಾಧಾರಣ ಶಿಸ್ತು ಕಂಡು ಬೆರಗಾಗುತ್ತಿದ್ದುವು.

೧೫, ೧೬, ೧೭ನೇ ಶತಮಾನಗಳಲ್ಲಿ ಮಹಾಸಾಗರಗಳ ಭೌಗೋಳಿಕ ಲಕ್ಷಣಗಳು ಚೆನ್ನಾಗಿ ತಿಳಿದ ಮೇಲೆ, ಸಮುದ್ರಗಳ್ಳರು ತಮ್ಮ ಚಟುವಟಿಕೆಗಳಾದ ಕೊಳ್ಳೆ, ಲೂಟಿ, ನಾಶಗಳನ್ನು ಪ್ರಪಂಚದಾದ್ಯಂತ ಪಸರಿಸಿದರು. ಭೂಗಳ್ಳರೂ ಸಮುದ್ರಗಳ್ಳರೂ ಸಾಗರಗಳ ಪರಿಧಿಯಲ್ಲಿ ನೆಲೆಸಿದ ಮೇಲೆ ನಾಗರಿಕತೆಯ ವಾಹಕರಾಗಿ ಪರಿವರ್ತನೆಗೊಂಡರು. ಹೀಗೆ ಮಂಗೋಲ್ ಮತ್ತು ಟರ್ಕರ ಮುಖಾಂತರ ಇರಾನಿಯನ್ ನಾಗರಿಕತೆ ಎಲ್ಲರ ಕಡೆಗೂ ಹಬ್ಬಿತು. ಸ್ವರ್ಗ ಸಾಮ್ರಾಜ್ಯದ ಒಡೆಯನಾದ ಕುಬ್ಲೈ ಖಾನ್ ಚೀನಾದ ನಾಗರಿಕತೆಯನ್ನು ಪರಿಧಿ ರಾಜ್ಯಗಳಿಗೆ ಪಸರಿಸಿದನು. ಫ್ರಾನ್ಸ್‌ನಲ್ಲಿ ನೆಲೆಸಿದ ಎರಡನೆ ತಲೆಮಾರಿನ ನಾರ್ಮನ್ನರು ಫ್ರಾನ್ಸ್‌ದೇಶದ ಸಂಸ್ಕೃತಿಯ ಉನ್ನತಿಗಾಗಿ ಅದನ್ನು ಕಾಪಾಡುವ ಹೋರಾಟಗಾರರಾದರು. ಮೇಲೆ ಹೇಳುವಂತೆ ಯುರೋಪಿನ ಎಲ್ಲ ರಾಷ್ಟ್ರಗಳ ರಾಜ್ಯಶಾಸ್ತ್ರ, ನಡವಳಿಕೆ ನೀತಿನಿಯಮಗಳ ಮೇಲೆ ಭಾರಿ ಪರಿಣಾಮ ಬೀರುವ ವೀರೋಚಿತ ಉತ್ಸಾಹ ನಾರ್ಮನ್ ಸರದಾರರಲ್ಲಿ ಎದ್ದು ಕಾಣುತ್ತಿತ್ತು.

ಹಾಗೆಯೇ ಪರ್ಷಿಯಾ ದೇಶದ ಸಂಸ್ಕೃತಿಯ ಮೂರ್ತಿವೆತ್ತ ಮೊಗಲ್‌ಸಾಮ್ರಾಟರು ನವರೋಸ್ ಆಚರಣೆ, ಪರ್ಶಿಯನ್ ಹಬ್ಬ ಹರಿದಿನಗಳ ಆಚರಣೆ ಮತ್ತು ಪರ್ಶಿಯನ್ ಕಲೆಗಳನ್ನು ಭಾರತದಲ್ಲಿ ಅಳವಡಿಸಿ ಜನಪ್ರಿಯಗೊಳಿಸಿದರು.

ಮಹತ್ತರವಾದ ನಾಗರಿಕತೆಗಳ ಮೇಲೆ ಅಲೆಮಾರಿಗಳು ಹೇರಿದ ಒತ್ತಡವೇ ಚರಿತ್ರೆ ಎಂಬ ಭೂರಾಜ್ಯಶಾಸ್ತ್ರಜ್ಞರ ವಾದ ಭಾಗಶಃ ಸತ್ಯ. ಭೂಮಿಯಿಂದಾಗಲಿ, ಸಮುದ್ರದಿಂದಾಗಲಿ ಬಂದ ಆ ಒತ್ತಡ ಪ್ರಪಂಚದ ಚರಿತ್ರೆಯನ್ನು ನಿರೂಪಿಸುವ ಎಳೆಗಳಲ್ಲಿ ಒಂದು ಸಾಧಾರಣ ಎಳೆ, ಮುಖ್ಯವಾದುದಲ್ಲ. ಸದಾ ಪ್ರಪಂಚದ ಮುಕ್ಕಾಲುಪಾಲು ಜನ ನದಿ ಕೊಳ್ಳಗಳಲ್ಲಿ ಕೇಂದ್ರೀಕೃತರಾಗಿದ್ದರು. ಚರಿತ್ರೆಯನ್ನು ಬಿಂಬಿಸುವ ನಾಗರಿಕತೆಗಳು ಬೆಳೆದದ್ದೆ ಈ ಜಾಗಗಳಲ್ಲಿ. ಈಜಿಪ್ಟಿನಲ್ಲಿ, ಮೆಡಿಟರೇನಿಯನ್‌ನ್ನು ಸುತ್ತುವರಿದ ಪ್ರದೇಶಗಳಲ್ಲಿ, ಟೈಗ್ರಿಸ್ ಕಣಿವೆಯಲ್ಲಿ, ಸಿಂಧೂ ಗಂಗಾ ಮೈದಾನ ಪ್ರದೇಶದಲ್ಲಿ ಮತ್ತು ಯಾಂಗ್‌ಟ್ಸಿ ಮತ್ತು ಹೊಯಾಂಗ್‌ಹೋ ಪ್ರಾಂತಗಳಲ್ಲಿ.

ತಮ್ಮ ಮರುಭೂಮಿಯ ತಾಯಿನಾಡನ್ನು ಬಿಟ್ಟು ಪಶ್ಚಿಮಕ್ಕೆ ವಲಸೆಬಂದ

ಅರಬ್ಬರ ದಾರಿಯಲ್ಲಿದ್ದ ಈಜಿಪ್ಟ್, ಮೊಗಲರ ರಾಜ್ಯವಿಸ್ತರಣೆಯ ಹಾದಿಯಲ್ಲಿದ್ದ ಟೈಗ್ರಿಸ್ ಇವೆರಡೂ ಈ ಒತ್ತಡಕ್ಕೆ ಸಿಕ್ಕಿ ತಮ್ಮತನವನ್ನು ಕಳೆದುಕೊಂಡರೂ, ಭಾರತ ಮತ್ತು ಚೀನಾ ಈ ಒತ್ತಡದಿಂದ ಪಾರಾಗಿದ್ದುವು. ಇದರಂತೆಯೇ ಈ ಪರಿಧಿನಾಡುಗಳಲ್ಲಿ ಬೆಳೆದ ಸಂಸ್ಕೃತಿಗಳ ವಿಸ್ತರಣೆ, ಬೌದ್ಧಧರ್ಮದ ಹರಡುವಿಕೆ, ಗಾಂಧಾರ ಸಂಸ್ಕೃತಿಯ ಬೆಳವಣಿಗೆ, ಗ್ರೀಸ್ ದೇಶದ ಸಂಸ್ಕೃತಿ, ಗ್ರೀಸಿನ ಹೊರಗೆ ಬೆಳೆದ ರೀತಿ, ಮೆಡಿಟರೇನಿಯನ್ ಪ್ರದೇಶದಿಂದ ಕ್ರಿಶ್ಚಿಯನ್ ಧರ್ಮ ಯುರೋಪಿನಲ್ಲೆಲ್ಲಾ ಹರಡಿದ ರೀತಿ, ಇವೆಲ್ಲಾ ಸಾಂಸ್ಕೃತಿಕ ಹೆಗ್ಗುರುತುಗಳು ಈ ಅಲೆಮಾರಿಗಳಿಂದ ದೂರವೇ ಉಳಿದವು. ಯಾವ ಶಾಶ್ವತ ಬದಲಾವಣೆಯಾಗದೆ, ಮಾನವನ ಬೆಳೆವಣಿಗೆ, ವಿಕಾಸ ಆದುದೇ ಈ ಪ್ರಾಂತ್ಯಗಳಲ್ಲಿ. ಈ ಭಾಗಗಳು ಕೆಲವು ಸಲ ಅಲೆಮಾರಿಗಳ ದಾಳಿಗೆ ಒಳಗಾಗಿದ್ದರೂ, ಚರಿತ್ರೆಯ ಮುಖ್ಯವಿಷಯ ಈ ಅಲೆಮಾರಿಗಳ ದಾಳಿಗಳಲ್ಲ.

ಈ ತಪ್ಪುವಾದದಿಂದ ಭೂರಾಜ್ಯಶಾಸ್ತ್ರವು ಮಿಥ್ಯಾವಾದ ವಿಜ್ಞಾನವೆಂಬ ಹೆಸರು ಪಡೆಯಿತು. ಜೊತೆಗೆ, ರಾಷ್ಟ್ರಗಳು ತಮಗೆ ಬೇಕಾದ ಹಾಗೇ ಬಗ್ಗಿಸಿ, ತಮ್ಮ ವಾದಕ್ಕೆ ಸರಿಹೊಂದಿಸಿಕೊಳ್ಳಬಹುದಾದ ಶಾಸ್ತ್ರವೆಂಬ ಅಪವಾದವನ್ನು ಹೊತ್ತಿತ್ತು. ಮೆಕಿಂಡರನೇ ಈ ಮಿಥ್ಯಾ ವಾದಕ್ಕೆ ಹೊಣೆಗಾರ. ಅವನ ಮುಖ್ಯ ವಿಚಾರಗಳನ್ನು ಅವನ ಮಾತಿನಲ್ಲೇ ಹೇಳಿದರೆ "ಚರಿತ್ರೆಯ ಮುಖ್ಯ ಸೆಳೆತಗಳನ್ನು ಪರಿಶೀಲಿಸಿದರೆ, ಚರಿತ್ರೆಗೂ ಭೂಗೋಳಕ್ಕೂ ಇರುವ ಕೆಲವು ಅಂಶಗಳೂ ವ್ಯಕ್ತವಾಗುವುದಿಲ್ಲವೆ? ಏಷ್ಯಾ, ಯುರೋಪ್ ಎಂಬ ಬಹು ದೊಡ್ಡ ರಾಜಕೀಯ ಕ್ಷೇತ್ರದಿಂದ ಭೂಭಾಗವನ್ನು ನೋಡಿದರೆ, ಇದು ಹಡಗುಗಳಿಗೆ ಅಗಮ್ಯವಾದ ಸಂಗತಿ. ಆದರೆ ಹಿಂದೆ ಕುದುರೆ, ಒಂಟೆ ಸವಾರರುಗಳಿಗೆ ತೆರೆದ ಮನೆಗಳಂತಿದ್ದುವು ಎಂಬ ಅಂಶವೂ ವ್ಯಕ್ತವಾಗುತ್ತದೆ. ಈ ಭಾಗ ಈಗ ರೈಲುಗಳಿಂದ ತುಂಬಿದೆ. ಮಿಲಿಟರಿ ಮತ್ತು ರಾಜಕೀಯ ಶಕ್ತಿಗಳಿಗೆ ಎಡೆಮಾಡಿಕೊಡುವ, ಕೊಡುತ್ತಿದ್ದ, ಆದರೂ ಮಿತವಾದ ಅರ್ಥದಲ್ಲಿ ಮಾತ್ರ ಅನುಕೂಲ ದಾರಿಗಳಾಗಿವೆ. ರಷ್ಯ ಮಂಗೋಲ ಚಕ್ರಾಧಿಪತ್ಯವನ್ನು ಆಕ್ರಮಿಸಿದೆ. ಪೋಲೆಂಡ್, ಟರ್ಕಿ, ಫಿನ್‌ಲ್ಯಾಂಡ್, ಸ್ಕಾಂಡಿನೇವಿಯಾ, ಭಾರತ, ಚೀನಾ ಪರ್ಶಿಯಾಗಳ ಮೇಲೆ ರಷ್ಯದ ಒತ್ತಡ ಹೆಚ್ಚುತ್ತಿದೆ. ಸ್ಟೆಪ್ಪೀಸಿನ ಜಾಗವನ್ನು ಅದು ಆಕ್ರಮಿಸಿದೆ. ಹಿಂದೆ ಜರ್ಮನಿ ಆಕ್ರಮಿಸಿದ್ದ ಮುಖ್ಯ ಸ್ಥಾನವನ್ನು ಈಗ ರಷ್ಯ ಆಕ್ರಮಿಸಿದೆ. ತನ್ನ ಮೂಲಭೂತ ಶಕ್ತಿಯ ಮೇರೆಯನ್ನು ಅರಿತು ಅಲಾಸ್ಕಾವನ್ನು ಕೈಬಿಟ್ಟಿದೆ. ಏಕೆಂದರೆ, ಬ್ರಿಟನ್ ಹೇಗೆ ತನ್ನ ಚಕ್ರಾಧಿಪತ್ಯವನ್ನು ಹೊರದೇಶಗಳ ಮೇಲೆ ಹೇರುತ್ತಿದೆಯೋ ಹಾಗೆ ರಷ್ಯ ಸಮುದ್ರದಾಚೆಯ ಪ್ರದೇಶಗಳನ್ನು, ವಸಾಹತುಗಳನ್ನು ಹೊಂದಬಾರದು ಎಂಬ ಸ್ವಯಂ ನಿರ್ಣಯಕ್ಕೆ ಕಟಿಬದ್ಧವಾಗಿದೆ. ರಷ್ಯ ಜರ್ಮನಿಗಳು ಒಂದಾದರೆ ಆಗ ತಮ್ಮ ಅಗಾಧವಾದ ಸ್ವಾಭಾವಿಕ ಸಂಪನ್ಮೂಲಗಳ ಸಹಾಯದಿಂದ ಹಡಗುಗಳನ್ನು ಕಟ್ಟಿ ಭೂಸ್ವಾಮ್ಯ ರಾಜ್ಯದ ಹಬ್ಬದ ಕನಸು ಉದ್ಭವಿಸುತ್ತದೆ. ಆಗ ಫ್ರಾನ್ಸ್ ನೌಕಾಬಲವುಳ್ಳ

ರಾಷ್ಟ್ರಗಳೊಡನೆ ಸೇರಿ, ಇಟಲಿ, ಭಾರತ, ಕೊರಿಯಾಗಳನ್ನು ತಮ್ಮ ಯುದ್ಧ ನೆಲೆಗಳಾಗಿ ಮಾಡಿಕೊಂಡು ತಮ್ಮ ಭೂ, ಜಲ ಸೈನ್ಯಗಳನ್ನು ಆ ದೇಶಗಳಲ್ಲಿ ನೆಲೆಯಾಗಿ ನಿಲ್ಲಿಸುವ ಸಾಧ್ಯತೆ ಹೆಚ್ಚುತ್ತದೆ.

ಮೆಕಿಂಡರ್ ಚರಿತ್ರೆ ಎಂದರೆ ಪರಿಧಿಯ ಜನರು ಎದುರಿಸುತ್ತಿದ್ದ ಭೂಭಾಗದ ಜನರ ಒತ್ತಡ. ಜೊತೆಗೆ ಮೆಕಿಂಡರ್ ಬರೆಯುತ್ತಿದ್ದುದು ಪ್ರಸಿದ್ಧ ನೌಕಾಬಲವುಳ್ಳ ಬ್ರಿಟಿಷ್ ಸರ್ಕಾರದ ಪರವಾಗಿ. ಟರ್ಕಿಯಲ್ಲಿ, ಪರ್ಶಿಯದಲ್ಲಿ, ಮಂಚೂರಿಯಾದಲ್ಲಿ – ಎಲ್ಲ ಭೂ ಆವೃತ ರಾಜ್ಯಗಳು ಬ್ರಿಟನ್, ರಷ್ಯದ ಹಡಗುಗಳ ಬಿಸಿ ಸಮುದ್ರಗಳ ಪ್ರವೇಶವನ್ನು ತಡೆಗಟ್ಟಲು ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿತ್ತು. ಅನುಕೂಲವಾಗುವ ಸ್ನೇಹಿತರ ಸಹಾಯದಿಂದ ಸಮುದ್ರ ಶಕ್ತಿಗಳು ಒಳನಾಡಿನ ಪ್ರದೇಶಗಳ ಮೇಲೆ ಆಧಿಪತ್ಯ ಸಾಧಿಸುವುದು ಸಾಧ್ಯವಲ್ಲದ ಸಾಹಸ ಎಂದು ಮೆಕಿಂಡರ್ ಬೇಗನೆ ಅರಿತು ಸಾರಿದನು.

೧೭, ೧೮ ಮತ್ತು ೧೯ನೇ ಶತಮಾನಗಳಲ್ಲಿ ತೀರ ಪ್ರದೇಶಗಳಲ್ಲಿ ಓಡಾಡಿ ನೌಕಾದಳಗಳು ಶಕ್ತಿಶಾಲಿ ರಾಷ್ಟ್ರಗಳಾಗಬಹುದೆಂದು ತರ್ಕಿಸಿ, ಅಡ್ಮಿರಲ್ ಮಾಹನ್ ತನ್ನ ಪುಸ್ತಕದಲ್ಲಿ ನೌಕಾಶಕ್ತಿಯನ್ನು ಉತ್ಪ್ರೇಕ್ಷಿಸಿ ಬರೆದು, ಯುರೋಪಿಯನ್ ರಾಷ್ಟ್ರಗಳನ್ನು ತಪ್ಪುದಾರಿಗೆ ಎಳೆದನು. ಹದಿನಾಲ್ಕನೇ ಲೂಯಿ ಮತ್ತು ನೆಪೋಲಿಯನ್ನರ ಸಾಮ್ರಾಜ್ಯಗಳನ್ನು ಬ್ರಿಟನ್ನಿನ ನೌಕಾಪಡೆಯು ಯಶಸ್ವಿಯಾಗಿ ಎದುರಿಸಿ ಸೋಲಿಸಬಲ್ಲುದೆಂದು ಮಾಹನ್ ನಂಬಿದ್ದನು. ಈ ಮೂರ್ಖ ನಂಬಿಕೆಗೆ ಮೊದಲು ತಿಲಾಂಜಲಿಯನ್ನು ಕೊಟ್ಟವನು ಮೆಕಿಂಡರ್. ಆದರೆ ಅವನು ಜರ್ಮನಿಯ ಹಿಡಿತ ಯುರೋಪಿನ ಒಳ ರಾಜ್ಯಗಳ ಮೇಲೆ ಹೆಚ್ಚಾಗುವ ಸಂಭವವನ್ನು ಎತ್ತಿತೋರಿಸಿದನು. ತನ್ನ ತಂತ್ರಜ್ಞಾನದಿಂದ ರಷ್ಯಾ ಬಲಶಾಲಿಯಾದ ರಾಷ್ಟ್ರವಾಗುತ್ತಿರುವ ವಿಪತ್ಕಾರಿ ಸೂಚನೆಯನ್ನು ಅವನು ಮರೆತಂತೆ ಕಾಣುತ್ತಿದೆ. ಹೌಸೋಫರ್‌ನು ಮೆಕಿಂಡರ್‌ನ ಊಹಾಸಿದ್ಧಾಂತವನ್ನು ಭೂರಾಜ್ಯ ಶಾಸ್ತ್ರಜ್ಞರ ಆಲೋಚನೆಗಳೊಡನೆ ತಾಳೆಹಾಕಿ, ಬೆಳೆಯುತ್ತಿರುವ ದೇಶಗಳೂ ತಮ್ಮ ಎಲ್ಲೆಗಳನ್ನು ವಿಸ್ತರಿಸುವ ಹಕ್ಕು ಹೊಂದಿವೆ ಎಂಬ ಸಿದ್ಧಾಂತವನ್ನು ಮಂಡಿಸಿದನು. ಸಾಕಷ್ಟು ಸ್ಥಳ ಮತ್ತು ಸಂಪನ್ಮೂಲಗಳಿಲ್ಲದಿದ್ದರೆ ನೌಕಾಶಾಹಿ ದೇಶಗಳು ತಮ್ಮನ್ನು ಹಿಸುಕಿ ಹೊಸಕಿ ಹಾಕುತ್ತವೆ ಎಂಬ ಪಾಠವನ್ನು ಜರ್ಮನಿ ಮೊದಲ ಪ್ರಪಂಚ ಯುದ್ಧದಿಂದ ಕಲಿತಿತ್ತು. ಆದ್ದರಿಂದ ಜರ್ಮನಿಯು ಮೆಕಿಂಡರ್ ಸಿದ್ಧಾಂತವನ್ನು ನ್ಯಾಯವೆಂದು ಸಮರ್ಥಿಸಿತು ಮತ್ತು ಯುರೋಪಿನ ಮಧ್ಯಭಾಗಕ್ಕೆ ಜರ್ಮನಿಯನ್ನು ವಿಸ್ತರಿಸಲು, ಅದರ ಮೇಲೆ ಹಿಡಿತ ಸಾಧಿಸಲು ನಿಶ್ಚಯಿಸಿತು.

ಮೆಕಿಂಡರ್ ಮತ್ತು ಅವನ ಶಿಷ್ಯರ ಪ್ರತಿಪಾದನೆ ಮತ್ತು ಜರ್ಮನಿಯ ಹೌಸೋಫರ್ ಮತ್ತು ಅವನ ಅನುಯಾಯಿಗಳ ವಾದ ಎರಡು ದೊಡ್ಡ ಭೂಭಾಗಗಳ

ಶಕ್ತಿಯು ನೌಕಾಶಾಹಿಗಳ ಮೃತ್ಯು ಎಂಬ ಸಿದ್ಧಾಂತವನ್ನು ಒಪ್ಪಿದುವು. ಇಂಗ್ಲಿಷ್ ಪ್ರಜೆಯೊಬ್ಬನ ಪ್ರಕಾರ ನೌಕಾದಳದ ಬಲದಿಂದ ಬ್ರಿಟನ್ನಿನ ಮಹತಿ ಹೆಚ್ಚಿಸುವುದು. ಇದೇ ತತ್ವದ ಆಧಾರದ ಮೇಲೆ ಜರ್ಮನ್ನರು ದೊಡ್ಡ ಭೂಭಾಗಗಳನ್ನು ಸಂಘಟಿಸಿ ನೌಕಾಶಾಹಿಗಳ ಒತ್ತಡದಿಂದ ಪಾರಾಗುವುದು ಹಾಗೂ ಪ್ರಪಂಚದ ವಾಣಿಜ್ಯ ವ್ಯಾಪಾರಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸಿಕೊಳ್ಳುವುದು ಸ್ವಾಭಾವಿಕ. ನೆಪೋಲಿಯನ್ ತನ್ನ ಬರ್ಲಿನ್ ಶಾಸನದಿಂದ ಇದನ್ನು ಮಾಡಲು ಪ್ರಯತ್ನಿಸಿದನು. ಇದು ಯುರೋಪ್ ಖಂಡವು ನೌಕಾಶಾಹಿ ಬ್ರಿಟನ್‌ನನ್ನು ಅಡ್ಡಗಟ್ಟಿ ಖಂಡದೊಳಕ್ಕೆ ನುಗ್ಗದಂತೆ ತಡೆದು ಅವರನ್ನು ಮುರಿಯುವ ತಂತ್ರ. ಕೈಸರ್ ವಿಲಿಯಂನೂ ಇದೇ ತಂತ್ರವನ್ನು ಅನುಸರಿಸಿದನು. ಆದರೆ ಇಬ್ಬರೂ ಈ ನಿಟ್ಟಿನಲ್ಲಿ ಸೋತಿದ್ದರು. ಕಾರಣ ಅವರಿಗೆ ಇದ್ದ ಭೂ ಸೌಲಭ್ಯಗಳು ಈ ಕಾರ್ಯಕ್ಕೆ ಬಹಳ ಕಮ್ಮಿಯಾಗಿದ್ದುವು. ಖಂಡದ ಮಧ್ಯಭಾಗ ಅವರ ವಶಕ್ಕೆ ಬರಲಿಲ್ಲ.

ನೌಕಾಬಲರಾಷ್ಟ್ರ ಮತ್ತು ನೆಲಸಾಮ್ರಾಜ್ಯವಾದಿಗಳ ಪ್ರಕಾರ ಇದು ಸರಿ ಇರಬಹುದು. ಆದರೆ ಪರಿಧಿ ರಾಷ್ಟ್ರಗಳಾದ ಭಾರತ, ಚೀನಾಗಳಿಗೆ ಈ ತತ್ವ ಅನ್ವಯವಾಗಲಿಲ್ಲ. ಏಕೆಂದರೆ ಮರುಭೂಮಿ ಮತ್ತು ಮೈದಾನ ಪ್ರದೇಶಗಳ ಜನರ ಒತ್ತಡ, ದಂಡಯಾತ್ರೆಗಳು ಈ ಪ್ರದೇಶದ ಮೇಲೆ ಹೆಚ್ಚಿನ ಪರಿಣಾಮ ಬೀರಲಿಲ್ಲ.

ಪರಿಧಿ ರಾಷ್ಟ್ರಗಳು ತಮ್ಮದೇ ಆದ ಭೂರಾಜ್ಯ ತತ್ವಗಳನ್ನು ಅನುಸರಿಸಬೇಕಾಯಿತು. ಭಾರತ ಮತ್ತು ಚೀನಾ ತಮ್ಮ ಅಪಾರ ಭೂಮಿ, ಭೂಸಂಪತ್ತು ಜನಸಂಪತ್ತುಗಳಿಂದ ತಮ್ಮವೇ ಆದ ದಾರಿಗಳನ್ನು ಕಂಡುಕೊಂಡವು. ಮೆಕಿಂಡರ್ ಮತ್ತು ಹೌಸೋಫರ್ ತತ್ವಗಳು ಭಾರತ ಮತ್ತು ಚೀನಾ ದೇಶಗಳ ಏಳಿಗೆಗೆ ಯಾವ ರೀತಿಯಿಂದಲೂ ಅನುಕೂಲಕರವಾಗಿರಲಿಲ್ಲ.

ಭೂಗೋಳವೆಂದರೆ ಪ್ರಕೃತಿ ನಿರ್ಮಿಸಿದ್ದಷ್ಟೇ ಅಲ್ಲ. ನದಿಗಳಿಗೆ ಅಣೆಕಟ್ಟುಗಳನ್ನು ಕಟ್ಟಬಹುದು, ಅವುಗಳ ಪಾತ್ರವನ್ನೇ ಬದಲಾಯಿಸಬಹುದು, ರಸ್ತೆಗಳನ್ನು ನಿರ್ಮಿಸಿ ವ್ಯಾಪಾರ ಉದ್ಯೋಗಗಳನ್ನು ಹೆಚ್ಚಿಸಬಹುದು, ತೈಲವನ್ನು ಕೊಡುವಂತೆ ಮಾಡಬಹುದು. ಚೀನಾದಲ್ಲಿ "ದಿ ಗ್ರಾಂಡ್‌ಕೆನಾಲ್" ಪೂರ್ವದಿಂದ ಪಶ್ಚಿಮಕ್ಕೆ ಹರಿಯುವ ಕೃತಕ ನದಿಯಾಗಿದೆ. ಯಾಂಗ್‌ಟ್ಸಿ ನದಿಯನ್ನು ಚುಕ್‌ಕಿಂಗ್‌ವರೆಗೆ ಹಡಗು ಸಂಚಾರಕ್ಕೆ ಬಳಸಬಹುದು. ಹೀಗೆಯೇ ಪ್ರಕೃತಿದತ್ತ, ಶಾಶ್ವತ ಪ್ರಕೃತಿಯ ಮರುಭೂಮಿ, ಪರ್ವತ, ನದಿಗಳನ್ನು ಮನುಷ್ಯ ತನ್ನ ಕೃಷಿಯಿಂದ ತನ್ನ ಉಪಯೋಗಕ್ಕೆ ತಕ್ಕಂತೆ ಬಳಸಿಕೊಳ್ಳಬಹುದು.

ಭೂಗೋಳಕ್ಕೆ ವ್ಯತಿರಿಕ್ತವಾಗಿ ಮನುಷ್ಯ ಮಾಡಿದ ಕೆಲಸಗಳಲ್ಲಿ ಅಂತರಿಕ್ಷವನ್ನು ಗೆಲ್ಲುವ ಪ್ರಯತ್ನ ಅಸದಳವಾದುದು. ಸ್ಪೆಂಗ್‌ಲರ್ ಹೇಳುವಂತೆ, ದೂರವನ್ನು ಸೈನ್ಯಬಲದಿಂದಾಗಲಿ, ರಾಜಕೀಯದಿಂದಾಗಲಿ, ಈವರೆಗೂ ಗೆದ್ದು ಸ್ವಾಧೀನ

ಪಡಿಸಿಕೊಳ್ಳಲಾಗಿಲ್ಲ. ೧೯ನೇ ಶತಮಾನಕ್ಕೆ ಮುಂಚೆ ಅಂತರಿಕ್ಷವು ಚರಿತ್ರೆಯನ್ನು ನಿರ್ದೇಶಿಸುವ ಒಂದು ಅಂಶವಾಗಿತ್ತು. ನೆಪೋಲಿಯನ್ ಮತ್ತು ಹಿಟ್ಲರ್ ರಷ್ಯವನ್ನು ಗೆಲ್ಲಲು, ಹಿದೋಯಶಿ ೧೭ನೇ ಶತಮಾನದಲ್ಲಿ ಚೀನಾವನ್ನು ಗೆಲ್ಲಲು ಸಾಧ್ಯವಾಗದಿದ್ದುದು ಇದಕ್ಕೆ ಉದಾಹರಣೆ. ಹಾಗೆಯೇ, ಮೊಗಲರು, ಬ್ರಿಟಿಷರು ಭಾರತವನ್ನು ಗೆಲ್ಲಲು ನೂರು ನೂರು ವರ್ಷ ತೆಗೆದುಕೊಂಡದ್ದು ಉದಾಹರಣೆಗಳು.

ಆದರೆ ಇತ್ತೀಚೆಗೆ ಕೆಲವು ವರ್ಷಗಳಲ್ಲಿ ದೂರ ಮತ್ತು ಅಂತರಿಕ್ಷಗಳು ಕುಗ್ಗುತ್ತಿವೆ. ತಂತ್ರಜ್ಞಾನವು ದೂರ, ಕಾಲಮಿತಿ ಮತ್ತು ಅಂತರಿಕ್ಷಗಳನ್ನು ಸಂಕುಚಿತಗೊಳಿಸುತ್ತಿದೆ. ಹೌಸೋಫರ್ ಈ ಸಂಗತಿಯನ್ನು ಗುರುತಿಸಿದ್ದಾನೆ. ಜರ್ಮನಿಯು ರಷ್ಯದೊಳಕ್ಕೆ ನುಗ್ಗಿ ಬಹುದೂರ ಹೋದುದು ಕಾಕಸಸ್ ತನಕ. ಆಫ್ರಿಕದಲ್ಲಿ ಎಲ್ ಅಲೆಮೀನ ತನಕ ಸೈನ್ಯಾಚರಣೆ ಮಾಡಿದುದು ಇದಕ್ಕೆ ಸಾಕ್ಷಿ.

ಹಿಂದೆ ಕುದುರೆ ಅಥವಾ ಒಂಟೆ ವೇಗವಾಗಿ ಚಲಿಸುವ ಸಾಧನಗಳಾಗಿದ್ದು ಸಂಪರ್ಕ ಏರ್ಪಡಿಸುತ್ತಿದ್ದುವು. ಮೋಟಾರು ಏರೋಪ್ಲೇನ್‌ಗಳು ಈಗ ಬಹುದೂರದ ಸ್ಥಳಗಳನ್ನು ಹತ್ತಿರಗೊಳಿಸಿವೆ. ರಷ್ಯಕ್ಕೆ ಪಶ್ಚಿಮದಿಂದ ಸಾಗಾಣಿಕೆಯ ಮಾರ್ಗ ಪರ್ಶಿಯನ್ ಕೊಲ್ಲಿ ಮುಖಾಂತರ ನಡೆಯುತ್ತಿದೆ.

ಸಂಪರ್ಕ ಸಾಧನೆಯಲ್ಲಿ ವೇಗವಾಗಿ ಓಡುವ ಸಾಧನಗಳು ಬಹಳ ಮುಖ್ಯ ಪಾತ್ರ ವಹಿಸುತ್ತವೆ. ಹೀಗಾಗಿ ಸಣ್ಣ ಸಣ್ಣ ರಾಷ್ಟ್ರಗಳು ತಮ್ಮ ಅಲ್ಪ ಸಂಪನ್ಮೂಲಗಳಿಂದಾಗಿ ದೊಡ್ಡದೊಡ್ಡ ರಾಷ್ಟ್ರಗಳೊಡನೆ ಸೆಣಸಾಡಲಾಗದೆ ಅಲ್ಲಿಯ ಬದುಕು ದುಸ್ಸಹವಾಗಿದೆ.

ದೂರದೂರದ ಪ್ರದೇಶಗಳನ್ನು ಹಿಡಿತದಲ್ಲಿಡಲು ಸಂಪರ್ಕ ಸಾಧನಗಳು ಬಹುಮುಖ್ಯ. ನೈಲ್ ನದಿಯಿಂದ ಈಜಿಪ್ಟ್ ಒಂದು ರಾಷ್ಟ್ರವಾಗಿ ಉಳಿದಿದೆ. ಡೇರಿಯಸ್ಸನ ಸಾಮ್ರಾಜ್ಯ ಒಂದಾಗಿ ಕೆಲಕಾಲ ಉಳಿಯಲು, ಅವನು ನಿರ್ಮಿಸಿದ ರಸ್ತೆಗಳೇ ಕಾರಣ. ಎಲ್ಲರಿಗೂ ತಿಳಿದಿರುವ ಹಾಗೆ ರೋಮನ್ನರು ಸಾರಿಗೆ ರಸ್ತೆಗಳನ್ನು ನಿರ್ಮಿಸುವುದರಲ್ಲಿ ಪ್ರವೀಣರಾಗಿದ್ದರು. ಅವರ ರಸ್ತೆಗಳೇ ರೋಮ್‌ನಿಂದ ದೂರದೂರದ ಪ್ರಾಂತ್ಯಗಳನ್ನು ಆಳಲು, ಹಿಡಿತದಲ್ಲಿ ಇಟ್ಟುಕೊಳ್ಳಲು ಸಾಧ್ಯವಾದುದು. ಮಂಗೋಲರೂ ರಸ್ತೆ ನಿರ್ಮಾಣದಿಂದ ದೂರದೂರದ ಪ್ರಾಂತ್ಯಗಳನ್ನು ಗೆದ್ದು ಹದ್ದುಬಸ್ತಿನಲ್ಲಿ ಇಟ್ಟುಕೊಂಡಿದ್ದರು. ಇವೆಲ್ಲಾ ಏರೋಪ್ಲೇನ್ ಬರುವವರೆಗೆ.

ಭಾರತದಲ್ಲಿ ಔರಂಗಜೇಬನು ದಖ್ಖನ್ನಿನ ಮೇಲೆ ದಾಳಿ ನಡೆಸಲು ಅವನಿಗಿದ್ದ ಸಾರಿಗೆ ಸಂಪರ್ಕಗಳೇ ಆಧಾರವಾಗಿದ್ದವು.

ಹಬೆಯಿಂದ ಚಲಿಸುವ ರೈಲು, ಹಡಗುಗಳು ಬಂದ ಮೇಲೆ ಸಾರಿಗೆ ಸಂಪರ್ಕಗಳು ಬಹುಬೇಗ ಬದಲಾದುವು, ಏರೋಪ್ಲೇನುಗಳು ಬಂದ ಮೇಲಂತೂ ದೂರ ಕಾಲಗಳ ಮಿತಿ ಸಂಕುಚಿತವಾಯಿತು.

ಮರಳುಗಾಡುಗಳು ಸಂಚಾರಕ್ಕೆ ಯೋಗ್ಯವಾಗಿ ಹಿಂದೆ ಹೆಸರಿಲ್ಲದ ಸ್ಥಳಗಳು

ಈಗ ಪ್ರಾಮುಖ್ಯತೆ ಪಡೆದುವು. ಭೂಗೋಳದ ಕಲ್ಪನೆ ಪೂರಾ ಬದಲಾಗಿದೆ.

ಈಗ ವಿಮಾನಗಳು ದಾಟಲಾಗದ ಪರ್ವತಗಳಲ್ಲಿ ಬಾಂಬ್ ಮಾಡಲು ಅಸಾಧ್ಯವಾದ ಜಾಗಗಳಿಲ್ಲ. ಇಂಡೋನೇಷಿಯಾದ ದ್ವೀಪಸಮುದಾಯ ಈಗ ಆಕಾರದಿಂದ ಒಂದು ಭೂಕಂಠವಾಗಿ ಕಾಣಿಸುತ್ತದೆ. ಹಡಗುಗಳು ಹೋಗಲಾಗದ ಜಾಗಗಳಿಗೆ ಈಗ ಬಾಂಬರ್‌ಗಳು ಹಾರಿ ಬಾಂಬ್‌ಗಳನ್ನು ಸುರಿಸಿ ಹಿಂದಿರುಗುತ್ತವೆ.

ಈಗ ಭೂಮಧ್ಯದ ಭಾಗಗಳೂ ಮುಚ್ಚಿಡಲಾಗದ ಜಾಗಗಳಾಗಿ ಉಳಿದಿಲ್ಲ. ಭೌಗೋಳಿಕ ಕಲ್ಪನೆಗಳು ಬಹಳ ಬದಲಾಗುತ್ತಿವೆ.

* * * *

ಅಧ್ಯಾಯ ೨

ಭಾರತದ ಭೂಗೋಳ

ಭೌಗೋಳಿಕ ಸಂಗತಿಗಳಿಗೆ ನಮ್ಮ ದೇಶದ ಜನ ಹೆಚ್ಚು ಮಹತ್ವ ಕೊಟ್ಟಿಲ್ಲವೆಂಬ ಸಂಗತಿ ಶೋಚನೀಯ. ಚರಿತ್ರೆಯ ವಿಷಯದಲ್ಲೂ ಹಾಗೆ ನಮ್ಮವರು ಹೆಚ್ಚಿಗೆ ಗಮನ ಹರಿಸಿದಂತಿಲ್ಲ. ಈ ಸಂಗತಿ ಭಾರತಕ್ಕೆ ಮಾತ್ರ ಅನ್ವಯಿಸುತ್ತದೆ. ಅರಬ್ಬರು, ಚೀನೀಯರು ಆ ಕಾಲದ ಉತ್ಕೃಷ್ಟ ಭೂವಿಜ್ಞಾನಿಗಳಾಗಿದ್ದರು. ತಮ್ಮ ದೇಶದ ಭೂಗೋಳ ವಿವರಣೆಯನ್ನು ಕೊಡುವುದರೊಂದಿಗೆ ತಾವು ಸಂಪರ್ಕ ಬೆಳೆಸಿದ, ಹೋಗಿ ನೋಡಿ ಬಂದ ದೇಶಗಳ ವಿವರಣೆಯನ್ನೂ ಬರೆದಿಟ್ಟಿದ್ದಾರೆ. ಈ ವಿಷಯದಲ್ಲಿ ಭಾರತ ಬಹಳ ಹಿಂದೆ ಉಳಿದಿತ್ತು ಎಂಬ ಸಂಗತಿ ಅಭಿಮಾನಪಡಬೇಕಾದ ವಿಚಾರವೇನಲ್ಲ. ನಮ್ಮ ಸಂಸ್ಕೃತ ಸಾಹಿತ್ಯ ಸಂಪತ್ತನ್ನೆಲ್ಲಾ ಹುಡುಕಿದರೂ ಭೌಗೋಳಿಕವಾಗಿ ಚಾರಿತ್ರಿಕವಾಗಿ ನಮಗೆ ಸಿಕ್ಕುವ ಅಂಶಗಳು ಬಹಳ ವಿರಳ. ಅವುಗಳಲ್ಲಿ ಉಲ್ಲೇಖಿಸಿರುವ ಸುಮೇರು ದಂತಕಥೆ, ಗಂಧಮಾದನ – ಬಹುಶಃ ಟಿಬೆಟ್ ಪ್ರಸ್ಥಭೂಮಿಯಾಗಿರಬಹುದೆಂದು ಊಹಿಸಬಹುದು. ಸಂಸ್ಕೃತಸಾಹಿತ್ಯದಲ್ಲಿ ಹಿಮಾಲಯ ಪರ್ವತಗಳ ವಿವರಣೆ ಸಾಕಷ್ಟು ಸಿಕ್ಕುತ್ತವೆ. ಆದರೆ ಸುಪರಿಚಿತವಾಗಿದ್ದ ವಿಂಧ್ಯ, ಆರಾವಳಿ ಬೆಟ್ಟಗಳ ವಿವರಣೆ ಇಲ್ಲವೇ ಇಲ್ಲವೆಂದು ಹೇಳಬಹುದು.

ರಾಜ್ಯಗಳು ರಾಷ್ಟ್ರದ ವಿವರಣೆ ಸಾಕಷ್ಟು ಸಿಕ್ಕಿದರೂ, ಭೌಗೋಳಿಕಾಂಶಗಳು ಬಹಳ ಕಡಿಮೆ. ಕೆಲವೆಡೆ ವಿರೋಧಾಭಾಸಗಳೂ ಇವೆ. ಕೌಟಿಲ್ಯ, ವಾತ್ಸಾಯನ ಮತ್ತು ಕಾಳಿದಾಸರಿಗೆ ಭೌಗೋಳಿಕ ಜ್ಞಾನ ಚೆನ್ನಾಗಿತ್ತೆಂದು ಕಾಣುತ್ತದೆ. ಕೌಟಿಲ್ಯನು ವಜ್ರಮಣಿಗಳನ್ನು ವಿವರಿಸುವಾಗ ಅವು ಸಿಕ್ಕುವ ಜಾಗಗಳನ್ನು ತಿಳಿಸಿದ್ದಾನೆ. ತಾಮ್ರಪರ್ಣಿ, ಪಾಂಡ್ಯಕವತ ಮತ್ತು ಕೇರಳದ ಚೂರ್ಣಿನದಿ ಪ್ರದೇಶಗಳು ಅವನು ತಿಳಿಸಿರುವ ಕೆಲವು ಹೆಸರುಗಳು. ಆದರೆ ಇವು ಎಲ್ಲಿವೆ, ಅವುಗಳ ಹವಾಮಾನ ಮುಂತಾದ ಭೌಗೋಳಿಕ ಸಂಗತಿಗಳು ಯಾವುದೂ ತಿಳಿಯುವುದಿಲ್ಲ.

ವಾತ್ಸಾಯನನು "ಕಾಮಶಾಸ್ತ್ರ"ದಲ್ಲಿ ಅನೇಕ ಭೌಗೋಳಿಕ ಸಂಗತಿಗಳನ್ನು ವಿವರಿಸಿದ್ದಾನೆ. ಜೊತೆಗೆ ಆಯಾ ಸ್ಥಳಗಳ ಜನರ ಆಚಾರ ವಿಚಾರಗಳನ್ನೂ ವಿವರಿಸಿದ್ದಾನೆ. ಆದರೆ ಅವನು ಬರೆದಿರುವ ಪೂರ್ವಪ್ರದೇಶ, ಮಧ್ಯದೇಶ ದಕ್ಷಿಣಾ ಪಥ ಭೌಗೋಳಿಕವಾಗಿ ಉಪಯೋಗಕ್ಕೆ ಬರುವುದಿಲ್ಲ. ಇದಲ್ಲದೆ ಅವನು ಅನೇಕ

ರಾಜ್ಯಗಳನ್ನು ಹೆಸರಿಸಿ ಅವುಗಳ ನಿರ್ದಿಷ್ಟ ಸ್ಥಾನಗಳನ್ನು ವರ್ಣಿಸಿದ್ದಾನೆ. ಈ ವಿವರಣೆ ಸಮಾಜ ಶಾಸ್ತ್ರಕ್ಕೆ ಹೆಚ್ಚು ಉಪಯೋಗವಾಗುವ ವಿಷಯಗಳು ಭೂಗೋಳಶಾಸ್ತ್ರಜ್ಞನಿಗೆ ಅಷ್ಟು ಪ್ರಯೋಜನಕಾರಿಯಾದವುಗಳಲ್ಲ.

ಕಾಳಿದಾಸನು ಭೌಗೋಳಿಕವಾಗಿ ಹೆಚ್ಚು ವಿವರಗಳನ್ನು ನೀಡಿದ್ದಾನೆ. ಅವನಿಗೆ ಬೆಟ್ಟ, ಗುಡ್ಡ, ಪರ್ವತಗಳ, ನದಿ, ನಾಲೆಗಳ, ಮೈದಾನ ಪ್ರದೇಶಗಳ, ಪಟ್ಟಣಗಳ ಭೂಗೋಳ ಚೆನ್ನಾಗಿ ಗೊತ್ತಿತ್ತೆಂದು ಕಾಣುತ್ತದೆ. ರಾಮಗಿರಿಯಿಂದ ಹಿಮಾಲಯದ ಬಾಗಿಲವರೆಗಿನ ಭೂಭಾಗ ಅವನಿಗೆ ಚೆನ್ನಾಗಿ ಪರಿಚಿತ ಜಾಗಗಳಾಗಿದ್ದುವು ಎಂಬ ಅಂಶ ಅವನು ಮೇಘಕ್ಕೆ ನೀಡುವ ದಾರಿಯಿಂದ ತಿಳಿಯುತ್ತದೆ. ಮೇಘದೂತ ಹೋಗಬೇಕಾದ ದಾರಿಯಲ್ಲಿ ಬರುವ ನದಿಗಳು, ಬೆಟ್ಟಗುಡ್ಡಗಳು, ಪಟ್ಟಣಗಳು, ಕಣಿವೆ ಪ್ರದೇಶಗಳು ಈ ಕವಿಗೆ ಚೆನ್ನಾಗಿ ಮನವರಿಕೆಯಾಗಿತ್ತು ಎಂಬ ಸಂಗತಿ ಆಶ್ಚರ್ಯಕರವಾದುದು. ಮೇಘದೂತನು ಬಿದಿಸವನ್ನು ತಲುಪಿದಾಗ ಅಲ್ಲಿರುವ ನದಿಗಳು, ಗುಹೆಗಳು, ತೀರ ಪ್ರದೇಶ ಇವುಗಳ ವಿವರಣೆಯನ್ನು ಚೆನ್ನಾಗಿ ಮಾಡಿದ್ದಾನೆ. ಉಜ್ಜಯಿನಿಯು ದೂತನದಾರಿಯಲ್ಲಿ ಬರದಿದ್ದರೂ, ಕಾಳಿದಾಸ ದೂತನಿಗೆ ಉಜ್ಜಯಿನಿಯನ್ನು ನೋಡಿ ಮುಂದುವರಿಯುವ ಭಾಗ್ಯವನ್ನು ಕರುಣಿಸಿದ್ದಾನೆ. ಹೀಗಾಗಿ ನಮಗೂ ಉಜ್ಜಯಿನಿಯ ದರ್ಶನವಾಗುತ್ತದೆ.

ರಘುವಂಶದಲ್ಲಿ, ದಿಗ್ವಿಜಯ ಹೊರಟ ರಘು ಯಾವ ಯಾವ ಜಾಗದಲ್ಲಿ ಮುನ್ನಡೆದನು ಎಂಬುದನ್ನು ವಿವರವಾಗಿ ವರ್ಣಿಸಿದ್ದಾನೆ, ನಮ್ಮ ಕಾಳಿದಾಸ. ಅವನು ದಕ್ಷಿಣದ ಪಾಂಡ್ಯ, ಕೇರಳ ರಾಜ್ಯಗಳ ವರ್ಣನೆಯೊಂದಿಗೆ ಅಲ್ಲಿ ಹರಿಯುವ ನದಿಗಳನ್ನೂ ನಮೂದಿಸಿದ್ದಾನೆ. ಹಾಗೇ ದಕ್ಷಿಣದ ತೀರಪ್ರದೇಶದ ನದಿಗಳನ್ನೂ ವರ್ಣಿಸಿದ್ದಾನೆ. ತಾಮ್ರಪರ್ಣಿಯಂತಹ ಮುಖ್ಯವಾದ ನದಿ ಕಾಳಿದಾಸನ ವರ್ಣನೆಗೆ ಒಳಗಾಗಿದೆ.

ಆದರೆ, ಎಲ್ಲ ಕೃತಿಗಳೂ ಸಾಹಿತ್ಯಕ್ಕೆ ಒತ್ತುಕೊಡುತ್ತವೆಯೇ ಹೊರತು ಅವು ಭೂಗೋಳ ಪುಸ್ತಕಗಳಾಗುವುದಿಲ್ಲ. ರಾಮಾಯಣ, ಮಹಾಭಾರತ, ಪುರಾಣಗಳೂ, ಕಥಾಸರಿತ್ಸಾಗರ ಮುಂತಾದ ಕೃತಿಗಳು ಅನಿಶ್ಚಿತ ಹಾಗೂ ತಪ್ಪಾದ ಭೂವಿವರಣೆಯನ್ನು ಕೊಡುತ್ತವೆ. ಕಥಾ ಸರಿತ್ಸಾಗರವು ಹೊರದೇಶಗಳ ವರ್ಣನೆಯನ್ನು ಕೊಟ್ಟಿರುವುದು ಅಚ್ಚರಿಯ ಸಂಗತಿಯೇ.

ಚೀನೀಯರು ಮತ್ತು ಅರಬ್ಬರು ಪ್ರಾರಂಭದಿಂದಲೇ ಭೂಪಟಗಳನ್ನು ರಚಿಸಿದ್ದರೂ, ಭಾರತದ ಜನ ಈ ವಿಚಾರದಲ್ಲಿ ಆಸಕ್ತಿ ತೋರಿದಂತೆ ಕಾಣುತ್ತಿಲ್ಲ. ಇವತ್ತಿಗೂ ಭೂಗೋಳ ಶಾಸ್ತ್ರವು ಒಂದು ಮುಖ್ಯ ಅಧ್ಯಯನ ವಿಷಯವಾಗಿಲ್ಲ. ನಮ್ಮ ಶಾಲಾ ಪುಸ್ತಕಗಳು ಬರಿ ಬೆಟ್ಟ, ಗುಡ್ಡ, ನದಿ, ನಾಲೆ, ಮೈದಾನಗಳ ವರ್ಣನೆಗೆ ಮಾತ್ರ ಮೀಸಲಾಗಿವೆ. ಭೂಗೋಳಶಾಸ್ತ್ರ ಸರಿಯಾದ ದಾರಿಯಲ್ಲಿ ಇನ್ನೂ ಬೆಳೆಯ ಬೇಕಾಗಿದೆ.

ಭೂಮಿಯ ಮೇಲಿನ ಒತ್ತಡ ಯುರೋಪ್ ದೇಶಗಳಲ್ಲಿರುವಂತೆ ಭಾರತದಲ್ಲಿ ಇರಲಿಲ್ಲ – ರಕ್ಷಣೆ ಮತ್ತು ಭದ್ರತೆ ವಿಚಾರದಲ್ಲಿ. ಅದರ ಆಹಾರ, ಪ್ರಾಕೃತಿಕ ಸಂಪತ್ತು ಸಮುದ್ರ ಮತ್ತು ಪರ್ವತಗಳ ಹರವು ಅದಕ್ಕೆ ರಕ್ಷಣೆ ಕೊಟ್ಟು ಅದು ಭೂವಿಸ್ತರಣೆಗೆ ತಡೆಹಾಕಿದೆ.

ಕೌಟಿಲ್ಯನ ಪ್ರಕಾರ ಚಕ್ರಾಧಿಪತಿಯ ರಾಜ್ಯ ವಿಸ್ತರಣೆ ೨೦೦ ಮಿಲಿಯನ್ ಜನರಿಗಿಂತ ಹೆಚ್ಚಾಗಬಾರದು. ಅಂದರೆ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಭಾರತ ದೇಶದ ಪ್ರಬಲ ಚಕ್ರವರ್ತಿಗಳು ಯಾವಾಗಲೂ ತಮ್ಮ ರಾಜ್ಯ ವಿಸ್ತರಣೆಯನ್ನು ದೇಶದ ಹೊರಗೆ ಒಯ್ಯಲಿಲ್ಲ. ಆದ್ದರಿಂದ ಈ ದೇಶದ ರಾಜಕೀಯ ಚಿಂತಕರು ರಾಜ್ಯ ವಿಸ್ತರಣೆಯ ವಿಚಾರವಾಗಿ ಹೆಚ್ಚು ಗಮನ ಕೊಡಲಿಲ್ಲ. ಹಿಮಾಲಯದಿಂದ ರಾಮೇಶ್ವರದವರೆಗಿನ ಪ್ರದೇಶವೇ ಭಾರತವೆಂಬ ನಂಬಿಕೆ ದೃಢವಾಗಿತ್ತು. ಚಕ್ರಾಧಿಪತ್ಯದ ಆಸೆಯುಳ್ಳ ರಾಜಮಹಾರಾಜರುಗಳೆಲ್ಲ ಈ ಆಸೇತು ಹಿಮಾಚಲ ಪ್ರದೇಶವನ್ನು ಮಾತ್ರ ತಮ್ಮ ಗುರಿಯಾಗಿಟ್ಟುಕೊಂಡಿದ್ದರು. ಅಲ್ಲಿಂದ ಹೊರಗೆ ಅವರ ಕಣ್ಣು ಬೀಳಲಿಲ್ಲ.

ಮಹಾಭಾರತವು ಆಸೇತು ಹಿಮಾಚಲ ಪ್ರದೇಶವನ್ನೇ ಭಾರತಭೂಮಿ ಎಂದು ಪರಿಗಣಿಸಿತು. ಆಂಧ್ರರು, ಮೌರ್ಯರು, ಗುಪ್ತರು ಮುಂತಾದ ಸಾಮ್ರಾಜ್ಯದಾಹಿಗಳು ಭಾರತದ ಹೊರಗೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಲು ಎಂದೂ ಪ್ರಯತ್ನಿಸಲಿಲ್ಲ.

ಚಂದ್ರಗುಪ್ತ ಮೌರ್ಯನು ಸೆಲ್ಯೂಕಸ್‌ನೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ, ಹಿಂದೂಕುಷ್ ಪರ್ವತಗಳವರೆಗೆ ತನ್ನ ರಾಜ್ಯವನ್ನು ವಿಸ್ತರಿಸಿದನು. ಆದರೆ ಪಾಟಲೀಪುತ್ರದಿಂದಲೇ ಈ ಪ್ರಾಂತಗಳನ್ನು ಆಳಿದನೋ, ಇಲ್ಲ ಅಲ್ಲಲ್ಲಿಯ ಸ್ಥಳೀಯ ರಾಜರಿಗೆ ಆಡಳಿತ ವಹಿಸಿದನೋ ಸರಿಯಾಗಿ ತಿಳಿಯದು. ಅಶೋಕನ ನಂತರ ಈ ಪ್ರದೇಶ ಮೌರ್ಯರ ಕೈಬಿಟ್ಟುಹೋಯಿತು. ಕಾನಿಷ್ಕ ಮತ್ತು ಶಹಜಹಾನ್‌ರನ್ನು ಬಿಟ್ಟರೆ ಬೇರೆ ಯಾವ ರಾಜರೂ ಈ ಪ್ರಾಂತದ ಮೇಲೆ ಆಧಿಪತ್ಯ ನಡೆಸಿದ ದಾಖಲೆ ಎಲ್ಲೂ ಇಲ್ಲ. ಈ ಭೂಭಾಗವು ಅಸ್ವಾಭಾವಿಕ, ಆದ್ದರಿಂದ ಆಳಿ ಮತ್ತೆ ಕೈಬಿಟ್ಟ ಉದಾಹರಣೆಗಳು ಸಾಕಷ್ಟಿವೆ. ಯೂರೋಪಿಯನ್ನರಿಗಿದ್ದ ಭೂದಾಹ ಭಾರತದವರಿಗೆ ಇರಲಿಲ್ಲ ಎಂಬ ಸಂಗತಿಯೂ ವ್ಯಕ್ತವಾಗುತ್ತದೆ.

ಯೂರೋಪಿಯನ್ನರಿಗೆ ಆಹಾರ ಮತ್ತು ಸಂಪನ್ಮೂಲಗಳ ಆವಶ್ಯಕತೆ ಹೆಚ್ಚಾಗಿತ್ತು. ದಿಗ್ಬಂಧನ ಮತ್ತು ಜಲಾಂತರ್ಗಾಮಿ ನೌಕಾಯುದ್ಧಗಳು ಯೂರೋಪಿನ ರಾಷ್ಟ್ರಗಳಿಗೆ ಸ್ವಾಭಾವಿಕ ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸುವ ಆಕಾಂಕ್ಷೆ ಹೆಚ್ಚಿಸಿತು. ಇದೇ ಮೆಕಿಂಡರನ ಭೂಮಧ್ಯ ಒತ್ತಡ ಮೀಮಾಂಸೆ. ಅವನ ಪ್ರಕಾರ ವಿಪುಲ ಜಾಗ ಮತ್ತು ಸ್ವಾಭಾವಿಕ ಸಂಪನ್ಮೂಲಗಳು ಭೂಮಧ್ಯ ದೇಶದಲ್ಲಿ ವಿಪುಲವಾಗಿದೆ ಎಂಬ ನಂಬಿಕೆಯ ಮೇಲೆ ಮಂಡಿಸಿದ ವಾದ.

ಫಲವತ್ತಾದ ಭೂಮಿ, ಹವಾಮಾನ, ಖನಿಜ ಸಂಪತ್ತು, ಆಯಕಟ್ಟಿನ ನೆಲೆಗಳ ದೃಷ್ಟಿಯಿಂದ ಯಾವೆರಡು ದೇಶಗಳೂ ಸಮಾನವಾಗಿಲ್ಲ. ಒಂದು ದೇಶದ ಮಹತ್ವ ಮೇಲಿನ ಅಂಶಗಳ ಮೇಲೆ ನಿರ್ಧಾರವಾಗುತ್ತದೆ. ಒಂದು ದೇಶವು ಮೇಲಿನ ಅಂಶಗಳನ್ನು ಹೇಗೆ ಉಪಯೋಗಿಸುತ್ತದೆ ಮತ್ತು ಕಾಪಾಡಿಕೊಂಡು ಬರುತ್ತದೆ ಎಂಬುದರ ಮೇಲೆ ಅದರ ಮಹತ್ವ ಚರಿತ್ರೆಯನ್ನು ನಿರ್ಧರಿಸುತ್ತದೆ. ಉದಾಹರಣೆಗೆ; ಭೂಸಾರ ಕಾಲ ಸರಿದಂತೆ ಕಡಮೆಯಾಗುತ್ತದೆ. ಇದರಿಂದ ಮಹತ್ತರವಾದ ಪರಿಣಾಮಗಳು ಆ ದೇಶದ ಮೇಲಾಗುತ್ತದೆ. ಪ್ರೊ॥ ಸಿಂಕೋವಿಚ್ ಈ ಸಂಗತಿಯನ್ನು ಸಾಕ್ಷ್ಯಾಧಾರಗಳಿಂದ ನಿರ್ಣಯಿಸಿದ್ದಾನೆ. ಮೆಡಿಟರೇನಿಯನ್ ಪ್ರದೇಶಗಳ ಭೂಸಾರ ಕಡಿಮೆಯಾದುದು ರೋಮ್ ಸಾಮ್ರಾಜ್ಯದ ಪತನವಾಗಲು ಕಾರಣಗಳಲ್ಲಿ ಒಂದು ಎಂಬಂಶವನ್ನು ಅವನು ಸಾಕ್ಷ್ಯಾಧಾರಗಳಿಂದ ಸಾಬೀತು ಮಾಡಿದ್ದಾನೆ.

ಭೂಸವಕಳಿ, ಅರಣ್ಯಗಳ ನಷ್ಟ, ಮರುಭೂಮಿಯ ಆಕ್ರಮಣ, ಭೂ ಶೋಷಣೆ ಮುಂತಾದ ಕಾರಣಗಳಿಂದ ಭೂಸಾರವು ಕಡಮೆಯಾಗುತ್ತದೆ. ಹೀಗಾದಲ್ಲಿ ಮಾನವನ ಅವನತಿ ಹತ್ತಿರವಾಗುತ್ತದೆ. ಪ್ರಕೃತಿಯ ಕೊಡುಗೆ ಪ್ರತಿ ಮಾನವನಿಗೆ ಹೇಗೆ ಮುಖ್ಯವೋ ಹಾಗೆ ರಾಷ್ಟ್ರಗಳಿಗೂ ಮುಖ್ಯವಾಗುತ್ತದೆ.

ಈ ವಿಚಾರದಲ್ಲಿ ಭಾರತವು ಅದೃಷ್ಟಶಾಲಿ ದೇಶವೆಂದೇ ಹೇಳಬೇಕು. ಇಲ್ಲಿನ ಭೂಮಿ ಫಲವತ್ತಾಗಿದೆ. ನೂರಾರು ವರ್ಷ ಅಸಡ್ಡೆಗೆ ಒಳಗಾಗಿದ್ದರೂ ಅದು ಮತ್ತೆ ಮತ್ತೆ ಚಿಕಿತ್ಸೆಗೊಳಗಾದಾಗ ಪುಟಿದೇಳುತ್ತಿದೆ. ಕಲ್ಲಿದ್ದಲು, ಕಬ್ಬಿಣ ಮುಂತಾದ ಖನಿಜಗಳು ಇಲ್ಲಿ ಹೇರಳವಾಗಿ ದೊರೆಯುತ್ತವೆ. ವಿದ್ಯುತ್ ಉತ್ಪಾದನೆಗೆ ಬೇಕಾದ ಅನುಕೂಲಗಳಿವೆ. ಹೀಗಾಗಿ ಕೈಗಾರಿಕೆ, ಉದ್ಯಮಗಳ ವಿಕಾಸಕ್ಕೆ ಬೇಕಾದ ಸೌಕರ್ಯಗಳೆಲ್ಲವೂ ಇವೆ. ಜೈವಿಕ ವಿದ್ಯುಚ್ಛಕ್ತಿ ಉತ್ಪಾದನೆಗೆ ಬೇಕಾದ ಖನಿಜಗಳೂ ಹೇರಳವಾಗಿವೆ. ಆದರೆ ಇಂಧನದ ಕೊರತೆ ಕಾಡುತ್ತಿದೆ. ಹೇಗೂ ಈ ವಿಚಾರದಲ್ಲಿ ಇನ್ನೂ ಹೆಚ್ಚಿನ ಅನ್ವೇಷಣೆ ಆಗಬೇಕಾಗಿದೆ. ಕ್ಯಾಂಬೆ ವಿಭಾಗದಲ್ಲಿ ಇಂಧನ ಎಣ್ಣೆಯ ರಾಶಿ ಜ್ವಾಲಾಮುಖದಲ್ಲಿ ಅನಿಲ ಸಂಗ್ರಹ ಭಾರತ ಈ ವಿಚಾರದಲ್ಲಿ ಯೋಚಿಸಬೇಕಾಗಿಲ್ಲವೆಂದು ಮನದಟ್ಟು ಮಾಡಿಕೊಡುತ್ತವೆ. ಹಾಗೂ ಲಿಗ್ನೈಟ್ ಗಣಿಗಳಲ್ಲಿ ಬೇಕಾದಷ್ಟು ಉರವಲು ಸಿಕ್ಕುತ್ತದೆ. ಹೀಗಾಗಿ ತೈಲಕ್ಕಾಗಿ ಹೆಚ್ಚು ಯೋಚಿಸಬೇಕಾಗಿಲ್ಲ.

ಭಾರತದ ಮುಖ್ಯ ಸಮಸ್ಯೆ ಆಹಾರದ ಕೊರತೆ. ಮುಂಗಾರಿನ ಮೇಲೆ ವ್ಯವಸಾಯ ಅವಲಂಬಿಸಿರುವುದರಿಂದ ಅವುಗಳ ವೈಪರೀತ್ಯಗಳಿಂದ ಬಳಲುತ್ತಿದೆ. ಆದರೆ ಈಚೀಚೆಗೆ ಹೆಚ್ಚು ಹೆಚ್ಚು ನೀರಾವರಿ ಸೌಲಭ್ಯಗಳಿಂದ ಮರುಪಳಿ ಪಡೆದ ಭೂಭಾಗಗಳಿಂದ, ಅಣೆಕಟ್ಟುಗಳ ನಿರ್ಮಾಣದಿಂದ, ವೈಜ್ಞಾನಿಕವಾಗಿ ಭೂಮಿಯ ಉಪಯೋಗದಿಂದ ಇಲ್ಲಿಯ ಜನರಿಗೆ ಬೇಕಾದ ಆಹಾರ ಇಲ್ಲೇ ಬೆಳೆಯಲು ಅನುಕೂಲವಾಗಿದೆ (ಮುಂದಿನ ಹತ್ತಿಪ್ಪತ್ತು ವರುಷಗಳವರೆಗೆ). ಆದರೆ ಭಾರತದ

ಜನಸಂಖ್ಯಾ ಸ್ಫೋಟ ಈ ಎಲ್ಲ ಬೆಳವಣಿಗೆಗಳನ್ನೂ ಕುಂಠಿತಗೊಳಿಸುತ್ತಿದೆ. ಜನಸಂಖ್ಯೆಯ ಸಮಸ್ಯೆ, ಜನರ ಜೀವನಮಟ್ಟ, ಅವರ ದೈಹಿಕ, ಮಾನಸಿಕ ಕಾರ್ಯ ಸಾಮರ್ಥ್ಯ ಮತ್ತು ಅವರು ಉತ್ಪತ್ತಿ ಮಾಡುವ ಶಕ್ತಿಗಳ ಮೇಲೆ ಒಂದು ದೇಶದ ಆಗುಹೋಗುಗಳು ನಿಲ್ಲುತ್ತವೆ. ಆದ್ದರಿಂದ ಪ್ರಕೃತಿದತ್ತವಾದ ಸೌಲಭ್ಯಗಳು ಹೇರಳವಾಗಿದ್ದರೂ ನಮ್ಮ ದೇಶದ ಕೆಲವು ಕುಂದುಕೊರತೆಗಳು ನಮ್ಮ ಗಮನವನ್ನು ಸೆಳೆಯುತ್ತವೆ. ಅವುಗಳ ಬಗ್ಗೆ ಯೋಚಿಸಬೇಕಾಗಿದೆ ಹಾಗೂ ಆದ್ಯ ಗಮನ ನೀಡಬೇಕಾಗಿದೆ.

ಯೂರೋಪಿಯನ್ ದೇಶಗಳಂತೆ ಭಾರತವು ಭೂವಿಸ್ತರಣೆ ಮತ್ತು ಸಂಪನ್ಮೂಲಗಳಿಗಾಗಿ ಕೆಲವು ಕಾಲವಾದರೂ ಒದ್ದಾಡಬೇಕಿಲ್ಲದಿದ್ದರೂ ಅದರ ಭೌಗೋಳಿಕ ಅಂಶಗಳನ್ನು ನಾವು ಕೂಲಂಕಷವಾಗಿ ವಿಚಾರ ಮಾಡಬೇಕು. ಅದರ ಒಳಸ್ಥಿರತೆ ಸದಾ ಬೆಳೆಯುತ್ತಿರುವ ಜನಸಂಖ್ಯೆ – ಆಹಾರ ವಿಚಾರ, ಹವಾಮಾನಗಳಲ್ಲಿ ವೈವಿಧ್ಯಗಳಿರುವ ಜನರನ್ನು ಒಂದುಗೂಡಿಸುವ ಕೆಲಸ ಬಹಳ ಪ್ರಯಾಸದ್ದು, ಜೊತೆಗೆ ಉತ್ತರದಲ್ಲಿ ಹಬ್ಬಿರುವ ಬೃಹತ್ ಹಿಮಾಲಯ ಪರ್ವತ ಶ್ರೇಣಿ, ಬಾಕಿ ಮೂರು ಕಡೆ ಹರಡಿರುವ ಸಮುದ್ರಗಳು ಈ ಕೆಲಸಕ್ಕೆ ತೊಡಕನ್ನುಂಟು ಮಾಡುತ್ತದೆ.

ಹಿಮಾಲಯ ಪರ್ವತ ಶ್ರೇಣಿಯ ದಕ್ಷಿಣಕ್ಕೆ ಹಬ್ಬಿರುವ ಬೃಹತ್ ಭೂಭಾಗವನ್ನು ಐದು ಸ್ವಾಭಾವಿಕ ವಿಭಾಗಗಳಾಗಿ ವಿಂಗಡಿಸಬಹುದು. ಬಂಗಾಳದ ಕೊಲ್ಲಿ ಸೇರಿದಂತೆ (ಗಂಗಾನದಿ ಕೊಳ್ಳ) ವಿಂಧ್ಯ ಪರ್ವತಗಳ ಹಿನ್ನೆಲೆಯಲ್ಲಿ ಪಸರಿಸಿರುವ ಮಧ್ಯ ಭಾರತದ ಎತ್ತರ ಪ್ರದೇಶಗಳು; ದಖಿನ್ ಪ್ರಸ್ಥಭೂಮಿ; ಪಂಜಾಬಿನ ದಕ್ಷಿಣಕ್ಕೆ ಗುಜರಾತಿನ ಮೈದಾನದವರೆಗೆ ಹಬ್ಬಿರುವ ಮರಳುಗಾಡು; ದಕ್ಷಿಣದಲ್ಲಿ ಹಬ್ಬಿರುವ ತೀರಪ್ರದೇಶ ಮತ್ತು ಕಾವೇರಿ ನದಿ ನೀರುಂಡ ಕೆಳಮೈದಾನ ಲಿಟರಾಲ್ ದ್ವೀಪಗಳು, ಕಛ್‌ಪ್ರಾಂತ – ಮರಳು ಸಮುದ್ರದ ವ್ಯಾಪ್ತಿಯಲ್ಲಿ ಬರುವ ಬಡಾವಣೆ – ನಮ್ಮ ಅಧ್ಯಯನದಲ್ಲಿ ಬೇಡ. ಮುಂಬರುವ ಅಧ್ಯಾಯಗಳಲ್ಲಿ ಅವುಗಳನ್ನು ಪ್ರಸ್ತಾಪಿಸೋಣ.

ಜನಸಂಖ್ಯೆಯ ಭೂಪಟವನ್ನು ನೋಡಿದರೆ ಗಂಗಾನದಿ ಗುಂಪಿನ ಪ್ರದೇಶ, ಕಾವೇರಿ ಪ್ರದೇಶಗಳಲ್ಲಿ ಜನಸಾಂದ್ರತೆ ಬಹಳ. ಲಿಟ್ಟೋರಾಲ್ ಮತ್ತು ನದೀ (ಕೊಲ್ಲಿಗಳಲ್ಲಿ) ಮಹಾನದಿ, ಗೋದಾವರಿ, ಕೃಷ್ಣ, ನರ್ಮದಾ ಮತ್ತು ತಪತಿ – ಇವುಗಳಲ್ಲಿ ಸುಮಾರು ೫೦ ಮಿಲಿಯನ್ ಹಾಗೂ ಕಾವೇರಿಕೊಳ್ಳದಲ್ಲಿ ೨೫ ಮಿಲಿಯನ್, ಬಾಕಿ ಪ್ರದೇಶಗಳಲ್ಲಿ ಜನಸಾಂದ್ರತೆ ವಿರಳ. ನರ್ಮದಾ, ಮಹಾನದಿ, ಗೋದಾವರಿ, ಕೃಷ್ಣ, ಕಾವೇರಿ ಮುಂತಾದ ಅನೇಕ ನದಿಗಳು ಹರಿದರೂ ಈ ಪ್ರದೇಶ ಏಕೆ ಹಿಂದುಳಿದಿದೆ ಎಂಬ ಪ್ರಶ್ನೆಗೆ ಸರಳವಾದ ಉತ್ತರ– ಈ ನದಿಗಳು ತಮ್ಮ ಸಂಪದ್ಭರಿತ ನೀರನ್ನು ತಮ್ಮ ಜಲಾನಯನ ಭೂಮಿಯಲ್ಲಿ ಹರಡುವುದಿಲ್ಲ. (ಡೆಲ್ಟಾಪ್ರದೇಶ ಬಿಟ್ಟು) ಗೋದಾವರಿ ಮುಖಜ ಭೂಮಿಯಲ್ಲಿ ಜನಸಾಂದ್ರತೆ

ಬಹಳ ಹೆಚ್ಚು. ಆದರೆ ಆದಿಯಲ್ಲಿ ನದಿ ಹಡಗು ಸಂಚಾರಕ್ಕಾಗಲೀ, ನೀರಾವರಿಗಾಗಲೀ ಉಪಯೋಗವಾಗಿಲ್ಲ. ಈ ನದಿ ಎತ್ತರ ಪ್ರದೇಶಗಳಲ್ಲಿ ಹರಿಯುವುದು ಇದಕ್ಕೆ ಕಾರಣ.

ಗಂಗಾ, ಯಮುನಾ ಸಮುದಾಯದ ನದಿಗಳು ಹಿಮಾಲಯ ತಪ್ಪಲು ಪ್ರದೇಶವನ್ನು ಬಿಟ್ಟ ಮೇಲೆ ಫಲವತ್ತಾದ ಮೆಕ್ಕಲು ಮಣ್ಣನ್ನು ತಮ್ಮ ದಡಗಳಲ್ಲಿ ಹರಡಿ ಭೂಮಿಯನ್ನು ಸದಾ ಸಾರವತ್ತಾಗಿ ಮಾಡುತ್ತವೆ. ಹಾಗೆಯೇ ಕಾವೇರಿ ಎತ್ತರದ ಮೈಸೂರು ಪ್ರದೇಶವನ್ನು ಬಿಟ್ಟ ಮೇಲೆ, ಮೈದಾನ ಪ್ರದೇಶವನ್ನು ಹೊಕ್ಕು ಸಂಪದ್ಭರಿತವಾದ ತನ್ನ ನೀರನ್ನು ಹರಡುತ್ತದೆ.

ಎರಡನೆಯದಾಗಿ, ಗಂಗಾ ಯಮುನಾ ಕೊಳ್ಳಗಳು ಜನಭರಿತವಾಗಿ ಮೂಲ ಸಂಪತ್ತಿನಿಂದ ತುಂಬಿರುವುದರಿಂದ, ಈ ಪ್ರದೇಶವು ರಾಜಕೀಯವಾಗಿ ಮೊದಲಿನಿಂದಲೂ ಪ್ರಧಾನ ಪಾತ್ರ ವಹಿಸಿದೆ. ಇಲ್ಲಿಂದಲೇ ಆರ್ಯಾವರ್ತಕ್ಕೆ, ವಿಂಧ್ಯಾಚಲಕ್ಕೆ ರಾಜಕೀಯ ಹಾಗೂ ಸಾಂಸ್ಕೃತಿಕ ಬೆಳವಣಿಗೆ ಹರಡಿದುದು. ಮೌರ್ಯರಿಂದ ಹಿಡಿದು ಮೊಗಲರವರೆಗೆ ಯಾರು ಈ ಪ್ರದೇಶವನ್ನು ತಮ್ಮ ಆಡಳಿತಕ್ಕೆ ವಶಪಡಿಸಿಕೊಂಡರೋ ಅವರೇ ಸಂಪೂರ್ಣ ಆರ್ಯಾವರ್ತದ ಸಾಮ್ರಾಟರಾದರು. ಗಂಗಾ ಕೊಳ್ಳದಲ್ಲೇ, ಮೌರ್ಯರು, ಕಣ್ವರು, ಭಾರಶಿವರು, ಗುಪ್ತರು, ಡೆಲ್ಲಿಯ ಮುಸ್ಲಿಂ ಸುಲ್ತಾನರು, ಮೊಗಲರು ತಮ್ಮ ಚಕ್ರಾಧಿಪತ್ಯದ ಬುನಾದಿಯನ್ನು ಸ್ಥಾಪಿಸಿದರು. ಗಂಗಾ ಯಮುನಾ ಪ್ರದೇಶ ಚಕ್ರಾಧಿಪತ್ಯದ ಮೂಲಸ್ಥಾನವಾಯಿತು.

ಗಂಗಾ ನದಿ ಕೊಳ್ಳದ ದಕ್ಷಿಣಕ್ಕೆ ಇರುವುದೇ ಮಧ್ಯಪ್ರದೇಶದ ಪ್ರಸ್ಥಭೂಮಿ. ಗುಜರಾತಿನಿಂದ ರಾಜ್‌ಮಹಲ್‌ವರೆಗಿನ ಪ್ರದೇಶ ಈ ಪ್ರಸ್ಥಭೂಮಿ ಗಂಗಾನದೀ ಕೊಳ್ಳದ ಕಡೆಗೆ ಇಳಿಜಾರಾಗಿದೆ. ಇತ್ತೀಚಿನವರೆಗೆ ಈ ಪ್ರದೇಶ ದಟ್ಟವಾದ ಕಾಡುಗಳಿಂದ ಕೂಡಿತ್ತು. ಮೊಗಲ್ ಸೈನ್ಯಗಳು ಓರ್‌ಜಾ ಕಾಡನ್ನು ದಾಟಲಾರದೆ, ಕಾಡನ್ನು ಕಡಿದೇ ದಾರಿಮಾಡಿಕೊಂಡು ಮುನ್ನಡೆಯಬೇಕಾಯಿತಂತೆ. ಮೇಲಿನ ವಿಂಧ್ಯಾಚಲ ಮತ್ತು ಅರಾವಳೀ ಬೆಟ್ಟಗಳು ಈ ಪ್ರದೇಶವನ್ನು ಎರಡು ಭಾಗವಾಗಿ ವಿಂಗಡಿಸಿರುವುದರಿಂದ ಗಂಗಾ ನದಿ ಪ್ರದೇಶದ ಜನಬಾಹುಳ್ಯ ಈ ಪ್ರದೇಶಕ್ಕೆ ಹರಿದು ಬರಲು ಮಾಳ್ವ ಮತ್ತು ಗುಜರಾತ್‌ನ ಬುಂದೇಲ್‌ಖಂಡ್ ಪ್ರದೇಶಗಳಲ್ಲಿ ನೆಲೆಸಲು ಅನುಕೂಲವಾಯಿತು. ಆದರೆ ಈ ಪ್ರದೇಶಗಳು ವಿಕಾಸ ದೃಷ್ಟಿಯಿಂದ ಹಿಂದುಳಿದಿವೆ.

ಈ ಎಲ್ಲ ದೃಷ್ಟಿಕೋನಗಳಿಂದಲೂ ಗಂಗಾನದಿ ಪ್ರದೇಶ ದೇಶದ ಅತ್ಯಂತ ಪ್ರಮುಖವಾದ ಭಾಗವಾಗಿವೆ ಎಂಬಂಶವನ್ನು ಸಾರಿ ಹೇಳುತ್ತಿವೆ. ಮೊದಲಿನಿಂದಲೂ ಹಿಂದೂಗಳಿಗೆ ಈ ಭಾಗ ಪವಿತ್ರವಾದ ಯಾತ್ರಾ ಸ್ಥಳಗಳು – ಹಿಂದೂಗಳಿಗೆ ತಲೆತಲಾಂತರಗಳಿಂದ ಇದು ಪವಿತ್ರಭೂಮಿ. ಸುತ್ತಮುತ್ತಲಿನ ಎಲ್ಲ ರಾಜ

ಮನೆತನಗಳೂ ಭೂಭಾಗದ ಒಡೆತನ ಸಾಧಿಸಲು ಯತ್ನಿಸಿವೆ. ಪ್ರತಿಷ್ಠಾನದ ಶಾತವಾಹನರು, ಅವಂತಿಯ ರಾಜರು, ದೂರದಲ್ಲಿದ್ದೂ, ಮರಾಠ ಪೇಶ್ವೆಗಳು – ಎಲ್ಲರೂ ಈ ಪ್ರದೇಶದ ಮೇಲೆ ಹಿಡಿತ ಸಾಧಿಸಿದರೆ ಮಾತ್ರ ತಮ್ಮ ಸಾಮ್ರಾಜ್ಯ ಗಟ್ಟಿಯಾಗುವುದೆಂಬ ಸಂಗತಿ ಅರಿತಿದ್ದರು. ಸಮುದ್ರ ಮಾರ್ಗವಾಗಿ ಬಂದ ಬ್ರಿಟಿಷರು ಕೂಡ ಇದೇ ನಿರ್ಧಾರಕ್ಕೆ ಬಂದಿದ್ದರು.

ಗಂಗಾನದಿ ಪ್ರದೇಶ ಆರ್ಯಾವರ್ತದ ಮೇಲೆ ಪ್ರಭುತ್ವ ಸಾಧಿಸಲು ಸಾಧನವಾದರೆ – ದಖನ್ ಪ್ರಸ್ಥಭೂಮಿ ಯಾವಾಗಲೂ ಎಲ್ಲ ರಾಜರಿಗೂ ಕಗ್ಗಂಟಾಗಿತ್ತು. ಕೆಲವರು ಕೆಲವು ಕಾಲ ದಖನ್ನಿನ ಮೇಲೆ ಅಧಿಕಾರ ನಡೆಸಿದರೂ, ಸಂಪೂರ್ಣವಾದ ಹಿಡಿತ ಅವರದಾಗಲಿಲ್ಲ. ಗಂಗಾನದಿ ಪ್ರದೇಶವು ಹೇಗೆ ಉತ್ತರದ ರಾಜ್ಯಗಳ ಮಧ್ಯಬಿಂದುವಾಯಿತೋ ಹಾಗೆ ದಕ್ಷಿಣದಲ್ಲಿ ದಖನ್ ಪ್ರಸ್ಥಭೂಮಿ ರಾಜಕೀಯ – ತನ್ನದೇ ಆದ ಭೂಸ್ವಭಾವದ ಪ್ರದೇಶವಾಗಿ ಉಳಿಯಿತು.

ಅಜಂತ ಶ್ರೇಣಿಯಿಂದ ನೀಲಗಿರಿವರೆಗೆ ಹಬ್ಬಿರುವ ಈ ಬಂಡೆ ಪ್ರದೇಶವೇ ದಖನ್ ಪ್ರಸ್ಥಭೂಮಿ. ಚರಿತ್ರೆಕಾರ ಹರೂನ್ ಖಾನ್ ಶೆರ್‌ವಾನಿ ಹೇಳುವಂತೆ ಈ ಪ್ರದೇಶದ ಮುಖ್ಯ ಭಾಗ ಲಾವಾರಸದಿಂದ ಅರ್ಧಚಂದ್ರಾಕೃತಿಯ ಬಂಡೆ ಪ್ರದೇಶ. ನಾಗಪುರ ಮತ್ತು ಗೋವಾ ಇದರ ಎರಡು ಕೊಂಬುಗಳು. ಈಗ ಬಿರಾರ್ ಎಂದು ಕರೆಯಲ್ಪಡುವ ಈ ಪ್ರದೇಶ ಉತ್ತರದ ರಾಜರುಗಳ ಭೂದಾಹದ ಭಾಗವಾಗಿತ್ತು ಸದಾಕಾಲಕ್ಕೂ! ಹಾಗೆಯೇ ಮಾಳ್ವ ಮತ್ತು ದಖನ್ ಪ್ರಾಂತ್ಯಗಳ ರಾಜರುಗಳು ನಿರಾರ್ ಅನ್ನು ವಶಪಡಿಸಿಕೊಳ್ಳಲು ಸದಾ ಹೋರಾಡುತ್ತಿದ್ದರು. ಈ ಪ್ರಸ್ಥಭೂಮಿಯು ನೀಲಗಿರಿ ಪ್ರದೇಶದ ಹತ್ತಿರ ನಿಧಾನವಾಗಿ ಇಳಿದು ಪಶ್ಚಿಮ ಘಟ್ಟಗಳಲ್ಲಿ ಮಿಲನವಾಗುತ್ತದೆ. ಮುಂದೆ ಇಳಿಜಾರು ಸಮುದ್ರತಟವನ್ನು ಮುಟ್ಟಿ ಮಾಯವಾಗುತ್ತದೆ. ದಖನ್ ಭಾರತದ ಮಧ್ಯಪ್ರದೇಶದ ರಕ್ಷಣಾಗೋಡೆಯಂತಿದ್ದು ಗಂಗಾನದಿ ಪ್ರದೇಶದ ಜನರ ಕಣ್ಣು ಇದರ ಮೇಲೆ ಯಾವಾಗಲೂ ಇರುತ್ತಿತ್ತು. ಆದರೆ ದಖನ್ನಿನ ಮೇಲೆ ಶಾಶ್ವತ ಹಿಡಿತ ಸಾಧಿಸಲೂ ಯಾರಿಗೂ ಆಗಲಿಲ್ಲ.

ಕ್ರಿಸ್ತಶಕೆಯ ಪ್ರಾರಂಭದಲ್ಲಿ ಪ್ರತಿಷ್ಠಾನದ ಶಾತವಾಹನ ರಾಜರು ಈ ಪ್ರದೇಶದ ಏಳಿಗೆಗಾಗಿ ದುಡಿದರು. ಪೈಶಾಚಿ ಭಾಷೆಗೆ ಪೋಷಣೆ ನೀಡಿದ ನಂತರ, ಈ ಶಾತವಾಹನರು ಮುಂದೆ ಸಂಸ್ಕೃತ ಸಂಸ್ಕೃತಿಯನ್ನು ಹರಡಿದ ಸಂಗತಿ ಕುತೂಹಲಕಾರಿಯಾಗಿದೆ. ಸಂಸ್ಕೃತ ಸಂಸ್ಕೃತಿಯನ್ನು ದಕ್ಷಿಣದಲ್ಲಿ ಹರಡಿದ್ದೇನೋ ನಿಜ. ಆದರೆ ಬ್ರಿಟಿಷರು ಬರುವವರೆಗೆ ಉತ್ತರ ರಾಜರ ಪ್ರಭುತ್ವಕ್ಕೆ ಎಂದೂ ದಖನ್ ಒಳಗಾಗಲಿಲ್ಲ – ಗುಪ್ತ ಸಾಮ್ರಾಟರು ಕೂಡ ಇಲ್ಲಿ ನೆಲೆಯಾಗಿ ಆಡಳಿತ ನಡೆಸಲಿಲ್ಲ. ಸಾಮ್ರಾಟ್ ಸಮುದ್ರಗುಪ್ತನು ಕೂಡ ತನ್ನ ದಂಡಯಾತ್ರೆಯಲ್ಲಿ ದಖನ್ನನ್ನು ಬಿಟ್ಟಿದ್ದನು. ಅಲಹಾಬಾದ್‌ನ ಹರಿಸೇನನ ಪ್ರಶಸ್ತಿ ಈ ಸಂಗತಿಯನ್ನು ಸ್ಪಷ್ಟಪಡಿಸುತ್ತದೆ.

ಸಮುದ್ರಗುಪ್ತನ ದಾರಿ ಸಾಗಿದುದು – ಸಂಬಲ್‌ಪುರ, ಒರಿಸ್ಸಾ ಮತ್ತು ತೀರ ಪ್ರದೇಶಗಳಲ್ಲಿ. ಈ ಎತ್ತರ ಪ್ರದೇಶದಲ್ಲಿ ಆಳಿದ ವಾಕಾಟಕರು ಗುಪ್ತರೊಡನೆ ದೇಶದ ಪ್ರಭುತ್ವವನ್ನು ಹಂಚಿಕೊಂಡಿದ್ದರು.

ಗಂಗಾತೀರದ ಸಾಮ್ರಾಟರ ಆಧಿಪತ್ಯ ಕ್ಷೀಣಿಸಿ ನಾಶವಾದರೂ ದಕ್ಷಿಣದಲ್ಲಿ, ಒಂದಾದ ಮೇಲೊಂದರಂತೆ ಪ್ರಖ್ಯಾತ ರಾಜಮನೆತನಗಳು ದಕ್ಷಿಣ ರಾಜ್ಯದ ಎಲ್ಲೆಯನ್ನು ಕಾಪಾಡಿಕೊಂಡು ಬಂದುವು.

ಮುಂದೆ ಡೆಲ್ಲಿಯಿಂದ ಆಳಿದ ಸುಲ್ತಾನರ ಸಂತತಿಗಳು ದಕ್ಷಿಣದ ಮೇಲೆ ದಂಡೆತ್ತಿ ಬಂದು ದಾಳಿ ಮಾಡಿದರೂ ಅವರ ಆಳ್ವಿಕೆ ಶಾಶ್ವತವಾಗಿ ನಿಲ್ಲಲಿಲ್ಲ.

ಅಲ್ಲಾವುದೀನ್ ಖಿಲ್ಜಿಯ ಸೇನೆಗಳು, ದೇವಗಿರಿಯ ಯಾದವರನ್ನು, ವಾರಂಗಲ್ ರಾಜರನ್ನು ಬಗ್ಗುಬಡಿದರೂ ಭೌಗೋಳಿಕ ಅಂಶಗಳು ತಮ್ಮ ಪಾತ್ರವನ್ನು ನಿರ್ವಹಿಸಿ ಈ ದಂಡಯಾತ್ರೆಗಳು, ದಂಡಯಾತ್ರೆಯಾಗಿಯೇ ಉಳಿಯುವಂತೆ ಮಾಡಿದುವು. ದಖನ್ ಡೆಲ್ಲಿಯ ಸಾಮ್ರಾಜ್ಯಕ್ಕೆ ಎಂದೂ ಸಂಪೂರ್ಣವಾಗಿ ಒಳಗಾಗಲಿಲ್ಲ. ಮುಂದೆ ಬಹಮನೀ ರಾಜರು, ಪೂರ್ವದಿಂದ ಪಶ್ಚಿಮಕ್ಕೆ, ವಿಜಯನಗರದ ಅರಸರು ಉತ್ತರದಿಂದ ದಕ್ಷಿಣಕ್ಕೆ ತಮ್ಮ ಪ್ರಭುತ್ವವನ್ನು ಸಾರಿದರು. ೧೪ನೇ ಶತಮಾನದಿಂದ ೨೫೦ ವರ್ಷಗಳವರೆಗೆ ಉತ್ತರದ ಯಾವ ರಾಜನೂ ದಕ್ಷಿಣವನ್ನು ಸಂಪೂರ್ಣವಾಗಿ ತನ್ನದಾಗಿಸಿಕೊಳ್ಳಲು ಶಕ್ತನಾಗಲಿಲ್ಲ. ಮೊಗಲ್ ಸಾಮ್ರಾಟರಿಂದ ೧೬ನೇ ಶತಮಾನದಲ್ಲಿ ಅಕ್ಬರ್ ಮತ್ತು ಔರಂಗಜೇಬರು ದಖನ್ನಿನ ಮೇಲೆ ದಂಡಯಾತ್ರೆಯ ಮೇಲೆ ದಂಡಯಾತ್ರೆ ಕೈಗೊಂಡು ಕೆಲಕಾಲ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದರೂ ಔರಂಗಜೇಬನು ಸತ್ತ ೩೦ವರ್ಷಗಳಲ್ಲಿ ದಖನ್ ತನ್ನ ಸ್ವಾತಂತ್ರ್ಯವನ್ನು ಮತ್ತೆ ಪಡೆಯಿತು. ಇದಕ್ಕೆ ದಖನ್ನಿನ ಭೌಗೋಳಿಕ ಅಂಶಗಳೇ ಕಾರಣವಾದುವು.

ದ್ರಾವಿಡ ಜನಜೀವನದ ಪ್ರಮುಖ ನೆಲೆಯಾದ ಕಾವೇರಿ ನದೀ ಮುಖಜ ಭೂಪ್ರದೇಶವು ಕೂಡ ಔತ್ತರೇಯರ ಆಡಳಿತಕ್ಕೆ ಒಳಪಡಲಿಲ್ಲ. ಉತ್ತರದಲ್ಲಿ ಚರಿತ್ರೆ ಸಾಗಿದಂತೆ ಇಲ್ಲಿ ಸಾಗಲಿಲ್ಲ. ಏಕೆಂದರೆ ಈ ಭಾಗ ಭೌಗೋಳಿಕ ಪರಿಸರ ದಖನ್ ಪ್ರಸ್ಥಭೂಮಿಯ ಪ್ರಭಾವಕ್ಕೆ ಒಳಗಾಗಿ ಸಮುದ್ರತೀರದ ಪರಿಸ್ಥಿತಿಗೆ ಹೊಂದಿಕೊಂಡು ಬೆಳೆಯಿತು.

ಭಾರತದ ದೋಣಿರಚನೆಯ ಉತ್ಪತ್ತಿ ಮತ್ತು ತಾಂತ್ರಿಕ ಮಹತ್ವದ ಮೇಲೆ ಬರೆದ ತನ್ನ ಪ್ರಬಂಧದಲ್ಲಿ ಹಾರ್‌ನೆಲ್ಲನು (ಆರಿಜನ್ ಅಂಡ್ ಟೆಕ್ನಲಾಜಿಕಲ್ ಸಿಗ್ನಿಫಿಕೆನ್ಸ್ ಆಫ್ ಇಂಡಿಯನ್ ಬೋಟ್ ಡಿಸೈನ್) ದೃಢಪಡಿಸಿರುವಂತೆ ಭಾರತದ ಕೆಲವು ಬುಡಕಟ್ಟಿನ ಜನರು ಪಾಲಿನೇಷಿಯಾದಿಂದ ವಲಸೆ ಬಂದವರು. ಹಾಗೆಯೇ ತೆಂಗಿನ ಗಿಡ ಮತ್ತು ಕೋಡುದೋಣಿಗಳೂ ಪಾಲಿನೇಷಿಯಾದಿಂದ ಬಂದವುಗಳೇ.

ಅರಿಕಮೇಡು ಉತ್ಖನನದಿಂದ ದೃಢಪಡುವಂತೆ ತಮಿಳು ಸಾಹಿತ್ಯದಲ್ಲಿ

ಮೊದಲೇ ಉಲ್ಲೇಖಿಸಿರುವಂತೆ, ದಕ್ಷಿಣದ ಜನ, ರೋಮನ್‌ರ ಕಾಲಕ್ಕೆ ಮುಂಚೆಯೇ ತಮ್ಮ ಹಡಗುಗಳಲ್ಲಿ ಯಾನ ಮಾಡಿ ಮೆಡಿಟರೇನಿಯನ್ ಜನಾಂಗಗಳೊಡನೆ ಹಾಗೂ ಈಜಿಪ್ಟ್ ಮತ್ತು ಪಶ್ಚಿಮ ದೇಶಗಳೊಡನೆಯೂ ವಾಣಿಜ್ಯ, ವ್ಯಾಪಾರ ಸಂಪರ್ಕವನ್ನು ಇಟ್ಟುಕೊಂಡಿದ್ದ ಸಂಗತಿ ವೇದ್ಯವಾಗುತ್ತದೆ.

೫ನೇ ಶತಮಾನದಿಂದ ಪಲ್ಲವರೂ, ಶಾತವಾಹನರೂ ಆರ್ಯ ಸಂಸ್ಕೃತಿಯನ್ನು ದಕ್ಷಿಣದಲ್ಲಿ ಪ್ರಚುರಗೊಳಿಸಿದರು. ಕಂಚಿ ಒಂದು ವಿದ್ಯಾಕೇಂದ್ರ ಬಿಂದುವಾಯಿತು. ಆದರೆ ಉತ್ತರದವರ ಆಳ್ವಿಕೆ ಮಾತ್ರ ಈ ಪ್ರದೇಶವನ್ನು ಸೋಂಕಲಿಲ್ಲ; ರಾಜಕೀಯವಾಗಿ ಉತ್ತರದವರ ಪ್ರಭಾವ ಈ ಭಾಗದಲ್ಲಿ ಹೆಚ್ಚಾಗಲಿಲ್ಲ, ಇರಲೇ ಇಲ್ಲವೆಂದೇ ಹೇಳಬೇಕು. ಚಾಲುಕ್ಯರ, ಕದಂಬರ ಪ್ರಭಾವ ಹೆಚ್ಚಾದರೂ ಉತ್ತರದವರ ಪ್ರಭಾವ ಬಹಳ ಕಮ್ಮಿ.

ದಕ್ಷಿಣದ ರಾಜರುಗಳು ತಮ್ಮ ತಮ್ಮಲ್ಲೇ ಹೊಡೆದಾಡಿಕೊಂಡಿರುತ್ತಿದ್ದರೂ ಅವರ ಮುಖ್ಯ ರಾಜಕೀಯ ಗುರಿ ಭಾರತದ ಹೊರಗೆ ಇರುತ್ತಿತ್ತು. ಮಲೇಷಿಯಾ, ಸಯಾಮ್, ಇಂಡೋಚೀನಾ ಮತ್ತು ಇಂಡೋನೇಶಿಯಾ ಅವರ ಗುರಿಯಾಗಿತ್ತು. ಈ ರಾಜ್ಯಗಳಲ್ಲಿ ಪಲ್ಲವರ ಪ್ರಭಾವ ಇವತ್ತಿಗೂ ಎದ್ದುಕಾಣುತ್ತಿದೆ. ಹಾಗೆಯೇ ಅಸಾಮಾನ್ಯರಾದ ಚೋಳರ ಪ್ರಭಾವ, ರಾಜಕೀಯ ಚಟುವಟಿಕೆ ಈ ಪ್ರದೇಶಗಳಲ್ಲಿ ಹಬ್ಬಿತ್ತು. ನೂರು ವರ್ಷಗಳ ಸಮುದ್ರದಾಚೆಯ ಪ್ರಭಾವ ವಿಸ್ತರಣ ಮತ್ತು ನೌಕಾಯುದ್ಧ ಚೋಳರ ಮುಖ್ಯ ಲಕ್ಷಣವಾಗಿತ್ತು. ನಮ್ಮ ದೇಶದ ಚರಿತ್ರೆಯಲ್ಲಿ ಇದಕ್ಕೆ ಸಾಟಿಯಾದ ಸಂಗತಿ ಯಾವುದೂ ಇಲ್ಲ – ಉತ್ತರ ಸಾಮ್ರಾಜ್ಯಗಳಲ್ಲಂತೂ ಕಾಣಲಿಲ್ಲ.

ರಾಜರುಗಳ ಧೋರಣೆಗಿಂತ ಜನಸಾಮಾನ್ಯರ ವಿಚಾರ ಬೇರೆಯೇ ಆಗಿತ್ತು. ಶಾಸನಗಳಿಂದ ನಿಖರವಾಗಿ ತಿಳಿಯುವ ಸಂಗತಿ ಏನೆಂದರೆ ದಕ್ಷಿಣದ ಜನ ರಾಜ್ಯ ವಿಸ್ತರಣೆಗಿಂತ ಹೆಚ್ಚಾಗಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೆಚ್ಚು ಆಸಕ್ತಿ ವಹಿಸುತ್ತಿದ್ದರು. ಕಡಲಿಗೆ ಸಂಬಂಧಿಸಿದ ವಿಚಾರಗಳಲ್ಲಿ ಹೆಚ್ಚು ನಿರತರಾಗಿದ್ದರು. ನಾನಾ ದೇಶಿಗಳ ವಲಂಗೈ ಮತ್ತು ಎಲಂಗೈಗಳ ಬಗ್ಗೆ ಮೈಸೂರಿನ "ಬಳ್ಳಿಗಾಮಿ" ಶಾಸನ ಹೀಗೆ ಹೇಳುತ್ತದೆ : "ಕೃತಯುಗ ಪ್ರಾರಂಭದಿಂದ ಕೆಚ್ಚೆದೆಯ ಧೀರರು ನಾನಾ ಪ್ರದೇಶಗಳಲ್ಲಿ ಸುತ್ತಾಡುವುದಕ್ಕೆ ಹುಟ್ಟಿದಂತಿದೆ. ಹೊರ ಆರು ಖಂಡ ಭೂ ಮತ್ತು ಜಲಮಾರ್ಗಗಳಲ್ಲಿ ಹಾದು ಕುದುರೆ, ಆನೆ, ಬೆಲೆಬಾಳುವ ವಜ್ರ, ಸುಗಂಧ ದ್ರವ್ಯಗಳು, ಔಷಧ ಮತ್ತು ಗ್ರಂಧಿಗೆ ಪದಾರ್ಥಗಳ ವ್ಯಾಪಾರದಲ್ಲಿ ನಿರತರಾಗಿದ್ದರು. ಹಾಗೇ ಮಣಿಗ್ರಾಮದ ಚೆಟ್ಟಿಗಳು ಆಗ್ನೇಯ ಏಷ್ಯಾದೇಶಗಳಲ್ಲಿ ವ್ಯಾಪಾರ – ವಾಣಿಜ್ಯಗಳಲ್ಲಿ ನಿರತರಾಗಿದ್ದರು. ಪಂಜಾಬಿನ ದಕ್ಷಿಣಕ್ಕಿರುವ ಮರುಭೂಮಿ – ಮಧ್ಯಪ್ರಾಚ್ಯದ ಒಂದು ಕೊನೆ ಎಂದೆನ್ನಬಹುದು. ಈ ಮರುಭೂಮಿ ಆರಾವಳಿ ಪರ್ವತಗಳಿಂದ ಇಬ್ಭಾಗವಾಗಿದೆ. ಪಶ್ಚಿಮಕ್ಕೆ ಗುಜರಾತ್ ಮಾರ್‌ವಾರ್ ತಗ್ಗು ಪ್ರದೇಶ, ಪೂರ್ವಕ್ಕೆ ಹರ್‌ದೋಲಿ,

ಕೊಟೆಬುಂಡಿ, ಉದಯಪುರ ಮತ್ತು ಮಾಳ್ವಗಳಿಂದ ಕೂಡಿದ ದಿಣ್ಣೆಪ್ರದೇಶ. ಈ ಪ್ರದೇಶವು ಪರರ ದಂಡಯಾತ್ರೆಗಳಲ್ಲಿ ಶರಣಾರ್ಥಿಗಳಾದವರಿಗೆ ಆಶ್ರಯಸ್ಥಾನ. ಗಂಗಾನದಿ ಕೊಳ್ಳದ ಜನರಿಂದ ರಕ್ಷಿಸುವ ಜಾಗವಾಗಿತ್ತು. ಮೊದಲು ಭಿಲ್ಲರು, ಮಿನಾಸ್ ಮುಂತಾದ ಸ್ಥಳೀಯ ಬುಡಕಟ್ಟು ಜನರ ವಾಸಸ್ಥಾನವಾಗಿತ್ತು. ಮುಸ್ಲಿಮರು ಗಂಗಾತಟದಲ್ಲಿ ನೆಲಸಿದ ಮೇಲೆ ರಜಪೂತ ರಾಜರು ಇಲ್ಲಿಗೆ ಈ ಅನಾದರಣ ಪ್ರದೇಶಕ್ಕೆ ಬಂದು ಸಣ್ಣ ಸಣ್ಣ ರಾಜ್ಯಗಳನ್ನು ಕಟ್ಟಿದರು. ಈ ಐದು ಮೂಲಭೂತ ವಿಭಾಗಗಳು ಭೌಗೋಳಿಕ ಅಂಶಗಳಾಗಿ ವಿಭಾಗಿಸಲ್ಪಟ್ಟಿದ್ದರೂ ಸಾಂಸ್ಕೃತಿಕವಾಗಿ ಒಂದಾಗಿ ಜೋಡಿಸಲ್ಪಟ್ಟಿವೆ. ಇವಲ್ಲದೆ ಛೋಟಾನಾಗ್ಪುರ ಮತ್ತು ಛತ್ತೀಸ್‌ಗಡ್ ಪ್ರಸ್ಥಭೂಮಿ ಪ್ರದೇಶಗಳು ಆರ್ಯರು, ದ್ರಾವಿಡರಿಗಿಂತ ಮುಂಚಿನಿಂದಲೂ ಕಾಡುಜನರ ಮತ್ತು ಆದಿವಾಸಿ ಗುಂಪುಗಳ ವಾಸಸ್ಥಾನವಾಗಿತ್ತು. ಅದು ಈಗಲೂ ಹಾಗೇ ಇದೆ. ಈ ಪ್ರದೇಶ ಗಂಗಾನದಿ ರಾಜರ ವಶದಲ್ಲಿ ಎಂದೂ ಬರಲಿಲ್ಲ. ಕಾಥೇವಾಡವು ಗುಜರಾತಿಯರ ವಶದಲ್ಲಿದ್ದರೂ ಭೌಗೋಳಿಕವಾಗಿ ಸಮುದ್ರದೊಳಕ್ಕೆ ಚಾಚಿದೆ ಮತ್ತು ಸಮುದ್ರಯಾನ, ವ್ಯಾಪಾರ ವ್ಯವಹಾರಗಳ ತಾಣವಾಗಿದೆ.

ಕೇರಳದ ಸಮುದ್ರತೀರ ಪ್ರದೇಶ ಫಲವತ್ತಾಗಿ ಎತ್ತರವಾದ ಬೆಟ್ಟಗಳಿಂದ, ಭೇದಿಸಲಸಾಧ್ಯವಾದ ಕಾಡುಗಳಿಂದ ಭಾರತದ ಚರಿತ್ರೆಯ ಅಲಂಕಾರ ಪಟ್ಟಿಯಾಗಿ ಉಳಿದಿದೆ.

ಉತ್ತರದಿಂದ ದಕ್ಷಿಣಕ್ಕೆ ನೇರವಾದ ಮಾರ್ಗವಿಲ್ಲದೆ ವ್ಯಾಪಾರ ವ್ಯವಹಾರಗಳ ದೃಷ್ಟಿಯಿಂದ ಒಂದಾಗಲು ಸಾಧ್ಯವಿಲ್ಲವಾಗಿದೆ. ಉತ್ತರದಿಂದ ದಕ್ಷಿಣಕ್ಕೆ ಹರಿಯುವ ನದಿಗಳೂ ಇಲ್ಲ. ಹೀಗಾಗಿ ಸಮುದ್ರಗುಪ್ತ ಮುಂತಾದ ರಣಧೀರರು ಪೂರ್ವಸಮುದ್ರ ತಟದ ಮುಖಾಂತರ ದಂಡಯಾತ್ರೆ ನಡೆಸಿದರು. ರಘುವಂಶದಲ್ಲೂ ಈ ವಿಚಾರ ಪ್ರಸ್ತಾಪವಾಗಿದೆ. ತೀರ್ಥಯಾತ್ರೆಯ ದಾರಿಗಳೂ ಸೆರಗು ಭಾಗಗಳಾಗಿ ಸಾಗುತ್ತವೆ.

ಗಂಗಾನದಿ ಪ್ರದೇಶದಲ್ಲಿ ನದಿಗಳು ಪಶ್ಚಿಮದಿಂದ ಪೂರ್ವಕ್ಕೆ ಹರಿಯುವುದರಿಂದ ದೇಶದ ಭೂಭಾಗಗಳನ್ನು ಅಡ್ಡಡ್ಡವಾಗಿ ಪರಿಗಣಿಸಬೇಕಾಗಿದೆ. ಬಂಗಾಳ ಕೊಲ್ಲಿಗೆ ದೇಶದ ಭೂಭಾಗಗಳನ್ನು ಪಶ್ಚಿಮದಿಂದ ಪೂರ್ವಕ್ಕೆ ಅಗಲವಾಗಿ ಪರಿಗಣಿಸಬೇಕಾಗಿದೆ. ಇದರಿಂದ ಉತ್ತರದಿಂದ ದಕ್ಷಿಣಕ್ಕೆ ನೇರಮಾರ್ಗ ರಚಿಸುವುದು ದುಸ್ತರ.

ಹಾಗೆಯೇ ಗಂಗಾನದಿ ಮತ್ತು ಅದರ ಉಪನದಿಗಳು ಪಶ್ಚಿಮದಿಂದ ಪೂರ್ವಕ್ಕೆ ಹರಿಯುವುದರಿಂದ ಈ ಪ್ರದೇಶದ ಆರ್ಯಾವರ್ತ ಎಂದು ಹೆಸರಾಗಿ ಚರಿತ್ರೆಯಲ್ಲಿ ಬಹುಮುಖ್ಯ ನಿರ್ಣಾಯಕ ಪಾತ್ರವನ್ನು ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಮತ್ತು ಇತರೆಲ್ಲ ದೃಷ್ಟಿಗಳಿಂದ ವಹಿಸಿದೆ. ಕುರು ಪಾಂಚಾಲ ಯುಗದಿಂದ ಇಲ್ಲಿಯವರೆಗೆ ಇದೇ ಆಡಳಿತದ ಕೇಂದ್ರವಾಗಿದೆ ನಮ್ಮ ಭಾರತದ ಇತಿಹಾಸದಲ್ಲಿ.

ಒಂದು ದೇಶವು ದಕ್ಷಿಣಕ್ಕೆ ಹಬ್ಬಿದ್ದರೆ, ಹವಾಮಾನ ವೈಪರೀತ್ಯಗಳಿಂದ ಆ

ದೇಶವನ್ನು ಸಂಘಟಿಸುವುದು ದುಸ್ತರವಾಗುತ್ತದೆ. ಅಂದರೆ ಪೂರ್ವ ಪಶ್ಚಿಮವಾಗಿದ್ದ ದೇಶವನ್ನು ಏಕೀಕರಿಸುವುದು ಸುಲಭ ಎಂದಾಗುತ್ತದೆ. ಏಕೆಂದರೆ ಹವಾಮಾನ ಬದಲಾವಣೆ ಬಹಳ ಕಡಿಮೆ. ಇಲ್ಲವೇ ಇಲ್ಲವೆಂದೂ ಹೇಳಬಹುದು. ಹವಾಮಾನ ಸಾಮಾನ್ಯವಾಗಿ ಭೂ ಮಧ್ಯರೇಖೆಯಿಂದ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಬದಲಾಗುತ್ತಾ ಹೋಗುತ್ತದೆ. ಇದರಿಂದ ಒಂದೊಂದು ಪ್ರದೇಶದಲ್ಲಿ ಒಂದೊಂದು ವಿಧವಾದ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ಆಚಾರ ವಿಚಾರಗಳ, ಉಡಿಗೆ ತೊಡಿಗೆಗಳು ಆಚರಣೆಗಳು ಬೆಳೆದು ಬರುತ್ತವೆ. ಇದರಿಂದಾಗಿ ಈ ಬೇರೆ ಬೇರೆ ಭಾಗಗಳನ್ನು ಒಂದುಗೂಡಿಸುವುದು ಸುಲಭವಾಗುವುದಿಲ್ಲ. ಗ್ರೇಟ್ ಬ್ರಿಟನ್ನಿನಲ್ಲಿ ಇಂಗ್ಲೆಂಡು ಇಂಗ್ಲೆಂಡಾಗಿ, ಸ್ಕಾಟ್‌ಲೆಂಡು ಸ್ಕಾಟ್‌ಲೆಂಡಾಗಿ, ಐರ್ಲೆಂಡು ಐರ್ಲೆಂಡಾಗಿ ಇವತ್ತಿಗೂ ಏಕೀಕರಣಕ್ಕೆ ಅಡ್ಡಿಯಾಗಿವೆ. ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲೂ ಇದೇ ಪರಿಸ್ಥಿತಿ. ದಕ್ಷಿಣದ ವ್ಯವಸಾಯಿಕ ಸಂಸ್ಕೃತಿಯು ಉತ್ತರದ ಔದ್ಯೋಗಿಕ ಸಂಸ್ಕೃತಿಗೆ ಇಂದಿಗೂ ಹೊಂದಿಕೊಂಡಿಲ್ಲ. ಇದಕ್ಕಾಗಿ ಒಂದು ಅಂತರಯುದ್ಧವೇ ನಡೆಯಿತು. ಆದರೂ ದೃಷ್ಟಿಕೋನಗಳೂ ಬದಲಾಗಲಿಲ್ಲ. ಎರಡೂ ಒಂದಾದರೂ ಸ್ವಭಾವ ಬೇರೆಬೇರೆಯಾಗಿಯೇ ಉಳಿದಿದೆ. ಇಟಲಿಯಲ್ಲಿ ದಕ್ಷಿಣ ಮತ್ತು ಲಂಬಬಾರ್ಡಿ ಮೈದಾನದ ಜನಗಳ ಮಧ್ಯೆ ಇವತ್ತಿಗೂ ವ್ಯತ್ಯಾಸಗಳು ಕಾಣಬರುತ್ತವೆ, ಸಾಮಾಜಿಕವಾಗಿ, ಯೋಚಿಸುವ ರೀತಿಯಲ್ಲಿ.

ಚೀನಾದಲ್ಲೂ ಈ ಸಮಸ್ಯೆ ಎದ್ದುಕಾಣುತ್ತದೆ. ಜನಾಂಗೀಯವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಚೀನಾ ಜನ ಒಂದಾಗಿದ್ದರೂ, ದಕ್ಷಿಣ ಚೀನಾಕ್ಕೂ ಉತ್ತರದ ಬರಡು ಪ್ರದೇಶಕ್ಕೂ ಇವತ್ತಿಗೂ ಹೆಚ್ಚು ಹೊಂದಾಣಿಕೆ ಇಲ್ಲವೆಂಬ ಅಂಶ ಎದ್ದು ಕಾಣುತ್ತದೆ.

ಭಾರತದಲ್ಲಿ ಈ ವ್ಯತ್ಯಾಸಗಳು ಉತ್ಪ್ರೇಕ್ಷೆ ಎನಿಸುತ್ತದೆ. ಸಂಸ್ಕೃತಿ, ಹಿಂದೂ ಸಾಮಾಜಿಕ ವ್ಯವಸ್ಥೆಗಳು ಒಂದು ವಿಧದಲ್ಲಿ ದೇಶವನ್ನು ಒಂದುಗೂಡಿಸಿದ್ದರೂ, ಜನಾಂಗೀಯವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಭಾರತವು ಮೂರು ಅಂತಸ್ತಿನ ಭೇದ ಭಾವಗಳಿಂದ ಒಂದಾಗದೇ ಉಳಿದಿವೆ. ಬ್ರಿಟಿಷರು ದೇಶವನ್ನು ರಾಜಕೀಯವಾಗಿ, ಆರ್ಥಿಕವಾಗಿ ಒಂದುಗೂಡಿಸಿದರೂ, ದಕ್ಷಿಣದಲ್ಲಿ ದ್ರಾವಿಡರೂ ಮತ್ತು ಉತ್ತರದ ಸಂಕರಗೊಂಡ ಆರ್ಯರೂ ಎಂಬ ಭೇದ ಇನ್ನೂ ಹೋಗಿಲ್ಲ. ದ್ರಾವಿಡರ ಭಾಷೆಗಳಲ್ಲಿ ಸಂಸ್ಕೃತದ ಪ್ರಭಾವ ಬಹಳವಾದರೂ, ಅವರ ಭಾಷೆಗಳು ಬೇರೆ ಬೇರೆಯಾಗಿಯೇ ಉಳಿದಿವೆ. ಉದಾಹರಣೆಗೆ ಕನ್ನಡ, ತೆಲುಗು, ತಮಿಳು ಇತ್ಯಾದಿ. ಸಂಸ್ಕೃತ ಸಂಸ್ಕೃತಿ ದೇಶದಲ್ಲಿ ವ್ಯಾಪಕವಾಗಿ ಹರಡಿದರೂ, ಭೌಗೋಳಿಕ ಕಾರಣಗಳಿಂದ ಸಂಪೂರ್ಣ ಸಂಘಟನೆ ಸಾಧ್ಯವಾಗಿಲ್ಲ. ಭಾರತದ ಚರಿತ್ರೆ ದಕ್ಷಿಣದ ದಖನ್ ಮತ್ತು ಉತ್ತರದ ಗಂಗಾನದಿ ಪ್ರದೇಶ ಚರಿತ್ರೆಯಾಗಿಯೇ ಉಳಿದುಬಿಟ್ಟಿದೆ.

ಅಧ್ಯಾಯ ೩

ಭಾರತದ ಜನಜೀವನದಲ್ಲಿ ಹಿಮಾಲಯದ ಪಾತ್ರ

ಭಾರತದ ಮೇಲ್ಮೈ ಲಕ್ಷಣಗಳಲ್ಲಿ ಬಹು ಮುಖ್ಯವಾದುದು ಹಿಮಾಲಯ ಪರ್ವತ ಶ್ರೇಣಿ. ಇಲ್ಲಿನ ಜನಜೀವನ ಮೇಲೆ ಇಷ್ಟು ಪರಿಣಾಮ ಬೀರಿರುವ ಈ ಪರ್ವತಶ್ರೇಣಿಗಳಂತೆ ಯಾವ ಪರ್ವತ ಶ್ರೇಣಿಯೂ ಪ್ರಪಂಚದಲ್ಲಿಲ್ಲ. ಈ ದೇಶದ ರಾಜಕೀಯ ಜೀವನದ ಮೇಲಲ್ಲದೆ, ಇಲ್ಲಿನ ಧರ್ಮ, ಪುರಾಣ, ಕಲೆ, ಸಾಹಿತ್ಯಗಳ ಮೇಲೂ ಅಪಾರ ಪ್ರಭಾವವನ್ನು ಈ ಪರ್ವತ ಶ್ರೇಣಿ ಬೀರಿದೆ. ಹಿಂದೂಗಳಿಗೆ ಈ ಪರ್ವತಗಳು ಪೂಜ್ಯ, ಆರಾಧನೀಯ, ವಿಸ್ಮಯಕಾರಕ, ದಕ್ಷಿಣ ವಾಸಿಗಳಿಗೆ, ತೀರ ಪ್ರದೇಶ ವಾಸಿಗಳಿಗೆ, ರಾಜಾಸ್ತಾನದ ಜನರಿಗೆ, ಗಂಗಾ ತೀರದವರಿಗೆ ಎಷ್ಟೋ ಅಷ್ಟೆ ಅದರ ಭಕ್ತಿ – ದೇಶದ ಲಾಂಛನ ದೂರದಿಂದಲೇ ಕಾಣುವ ಹಿಮಾಚ್ಛಾದಿತ ಶಿಖರಗಳಿಂದ ತಲುಪಲಾರದ ಶ್ರೇಣಿಗಳು, ರಾಕ್ಷಸಾಕಾರದ ಹಿಮರಾಶಿಗಳು ಹಿಮನದಿಗಳು, ಇಲ್ಲಿ ಕಣಿವೆಗಳಿಂದ ಹರಿಯುವ ನದಿಗಳ ಭವ್ಯತೆ, ಪ್ರಪಂಚದಲ್ಲಿ ಮತ್ತಾವ ಪರ್ವತವೂ ಪಡೆಯದಷ್ಟು ಸುಂದರ ಭವ್ಯತೆಯನ್ನು ಹಿಮಾಲಯ ಪಡೆದಿದೆ. ಹಿಂದೂಗಳು ಇದಕ್ಕೆ ದೈವತ್ವವನ್ನು ಕೊಟ್ಟು ಪೂಜಿಸುತ್ತಾರೆ. ಇದು ಹಿಂದೂ ದೇವತೆಗಳ ಆವಾಸಸ್ಥಾನ. ಶಿವ ಇಲ್ಲಿ ತಲುಪಲಾರದ ಎತ್ತರದಲ್ಲಿ ವಾಸಿಸುತ್ತಾನೆ. ಅಮರನಾಥ, ಜ್ವಾಲಾಮುಖಿ, ಹರಿದ್ವಾರ, ಕೇದಾರನಾಥ ಬದರೀನಾಥ, ಪಾಶುಪತ್, ಶಿವನ ವಾಸಸ್ಥಳವಾದ ಕೈಲಾಸವೆಂಬ ಪವಿತ್ರ ಯಾತ್ರಾಸ್ಥಳಗಳೆಲ್ಲಾ ಇಲ್ಲಿವೆ. ಹಿಮವಂತನ ಮಗಳು, ಈಶ್ವರನ ಅರ್ಧಾಂಗಿ, ಪಾರ್ವತಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಿಕೊಳ್ಳುತ್ತಿರುವ ಭಕ್ತಿದೇವತೆಯ ವಾಸ ಇಲ್ಲಿ. ಗೌರೀಶಂಕರ ಶಿಖರದಲ್ಲಿ ಎವರೆಸ್ಟ್–ಗೌರಿ ತಪಸ್ಸು ಮಾಡಿದಳೆಂಬ ಪ್ರತೀತಿ ಇದೆ. ಪಾವನೆ ಗಂಗೆ, ಗಂಗೋತ್ರಿಯಲ್ಲಿ ಹುಟ್ಟಿ ೫೦೦ ಮೈಲಿ ಪರ್ವತ ಪ್ರದೇಶದಲ್ಲಿ ಹರಿದು ಹರಿದ್ವಾರದ ಬಳಿ ಬಯಲಿಗೆ ಇಳಿದು ಪ್ರಶಾಂತವಾಗಿ ಹರಿದು ಮೆಕ್ಕಲು ಮಣ್ಣನ್ನು ಹರವಿ ಈ ಪ್ರದೇಶವನ್ನು ಫಲವತ್ತಾಗಿ ಮಾಡಿದ ದೈವಸ್ವರೂಪಿಣಿ. ಯಮುನಾ, ಸಿಂಧೂ, ಸರಸ್ವತಿ, ಬ್ರಹ್ಮಪುತ್ರಾ ನದಿಗಳೂ ಇವುಗಳ ಉಪನದಿಗಳೂ ಎಲ್ಲದರ ಉಗಮಸ್ಥಾನ ಹಿಮಾಲಯ. ಓವನ್ ಲಟ್ಟಿಮೋರ್ ತನ್ನ "ಇನ್ನರ್ ಏಷ್ಯನ್ ಫ್ರಾಂಟಿಯರ್ಸ್

ಆಫ್ ಚೀನ" ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾನೆ: "ಟಿಬೆಟ್ಟು ಒಂದು ಎತ್ತರವಾದ ಪ್ರಸ್ಥಭೂಮಿ. ಇಲ್ಲಿಂದ ಯಾಂಗಟ್ಸೆ–ಹಳದಿ ನದಿ ಚೀನಾಕ್ಕೆ ಹರಿಯುತ್ತದೆ. ಸಿಂಧೂ, ಬ್ರಹ್ಮಪುತ್ರ ನದಿಗಳು ಭಾರತಕ್ಕೆ ಹರಿಯುತ್ತವೆ. ಮೆಕಾಂಗ್ ನದಿ ಸಿಯಾಮ್‌ಗೆ ಮತ್ತು ಸಲವೀನ್ ನದಿ ಬರ್ಮಾಗೆ ಹರಿಯುತ್ತವೆ." ಹೀಗಾಗಿ ಇಲ್ಲಿಂದ ಹರಿಯುವ ನದಿಗಳು ಪ್ರಪಂಚದ ಅರ್ಧ ಭಾಗದಷ್ಟು ಜನರ ಜೀವನದಿಗಳಾಗಿವೆ ಮತ್ತು ನದೀ ಕೊಳ್ಳಗಳ ನಾಗರಿಕತೆಯ ಬೆಳವಣಿಗೆಗೆ ಕಾರಣವಾಗಿವೆ. ಗೀತೆಯಲ್ಲಿ ಕೃಷ್ಣನು ಹೇಳುವಂತೆ "ಪರ್ವತಗಳಲ್ಲಿ ನಾನು ಹಿಮಾಲಯ."

ಗಂಗಾನದಿಯು ಹೇಗೆ ಭಾರತ ದೇಶದ ರಾಷ್ಟ್ರೀಯ ನದಿಯೋ ಹಾಗೆ ಹಿಮಾಲಯ ನಮ್ಮ ದೇಶದ ರಾಷ್ಟ್ರೀಯ ಪರ್ವತ ನಿಜ. ಮಧ್ಯದಲ್ಲಿ ಟಿಬೆಟ್ ಪ್ರಸ್ಥಭೂಮಿ ಇದೆ. ಇದರ ಜನಸಾಂದ್ರತೆ ವಿರಳ. ನಮಗೆ ಅದರ ಪ್ರಯೋಜನ ಹೆಚ್ಚಾಗಿಲ್ಲ– ಅದರ ವಿಸ್ತಾರ ನಿಗೂಢತೆಗಳನ್ನು ಬಿಟ್ಟರೆ ಜನ ಸಾಮಾನ್ಯರಲ್ಲಿ, ಭಾರತದಲ್ಲೇ ಅಲ್ಲ ಹೊರಗೂ, ಹಿಮಾಲಯ ಎಂದರೆ ಭಾರತ ಎಂಬ ಭಾವನೆ ಇದೆ. 'ಹಿಮವತ್ ಸೇತು ಪರ್ಯಂತಂ' ಎಂಬ ಪರಿಗಣನೆ ಪುರಾತನ ಕಾಲದಿಂದಲೂ ಬಂದಿದೆ.

ಭಾರತದ ಚರಿತ್ರೆಯ ಪ್ರಾರಂಭದಿಂದಲೂ, ಹಿಮಾಲಯದ ಕೆಳಭಾಗಗಳ ಆಕ್ರಮಣ ಮತ್ತು ಅನ್ವೇಷಣೆ, ಧೈರ್ಯ ಸಾಹಸಗಳ ಯಶೋಗಾಥೆಗಳಾಗಿವೆ. ನಮ್ಮ ದೇಶದ ಚರಿತ್ರೆ ಪ್ರಾರಂಭವಾಗುವಾಗಲೇ ಹಿಮಾಲಯದ ತಪ್ಪಲಿನ ಕಣಿವೆಗಳಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದ ಹಿಂದೂ ರಾಜ್ಯಗಳಾದ ದ್ವಿಗರ್ತ, ತ್ರಿಗರ್ತಾ ಮತ್ತು ಮದ್ರ ರಾಜ್ಯಗಳು, ಕಾಶ್ಮೀರ, ನೇಪಾಳ ರಾಜ್ಯಗಳೂ ಬೆಳಕಿಗೆ ಬಂದಿದ್ದುವು, ಮಹಾಭಾರತದ ಕಾಲದಲ್ಲಿ. ರಾಮಾಯಣ ಕಾಲದಲ್ಲಿ ಹಿಮಾಲಯದ ವಿಶ್ಲೇಷಣೆ ಬಹಳ ಕಮ್ಮಿ. ಲಕ್ಷ್ಮಣ ತಪಸ್ಸು ಮಾಡಿದ ಹರಿದ್ವಾರಕ್ಕೆ ಕೆಲವು ಮೈಲಿ ದೂರ ಪ್ರದೇಶದ ವರ್ಣನೆಯನ್ನು ಬಿಟ್ಟರೆ, ಹಿಮಾಲಯದ ಬೇರಾವ ವಿವರಗಳೂ ರಾಮಾಯಣದಲ್ಲಿ ಇಲ್ಲ. ಆದರೆ ಮಹಾಭಾರತದಲ್ಲಿ ಹಿಮಾಲಯ ವಿವರಣೆ ಬಹಳ ಇದೆ. ಆದ್ದರಿಂದ ಹಿಂದೂಗಳೂ ಹಿಮಾಲಯ ಪ್ರದೇಶವನ್ನು ವಶಪಡಿಸಿಕೊಂಡ ಚರಿತ್ರೆ, ರಾಮಾಯಣಕ್ಕೂ, ಮಹಾಭಾರತದ ಕಾಲಕ್ಕೂ ಮಧ್ಯಂತರ ಕಾಲವಾಗಿರಬೇಕೆಂದು ಊಹಿಸಬಹುದು. ಪಾಂಡವರು ರಾಜ್ಯತ್ಯಾಗ ಮಾಡಿ ಉತ್ತರಕ್ಕೆ ಪ್ರಯಾಣ ಬೆಳಸಿ ಸ್ವರ್ಗಸಮಾನವಾದ ಹಿಮವತ್ ಪರ್ವತವನ್ನು ನೋಡಿದರು, ಎಂಬ ಉಲ್ಲೇಖವಿದೆ. ಮಹಾಭಾರತದಲ್ಲಿ ಮುಂದೆ ಅವರು ಒಂದು ಅಗಾಧವಾದ ಮರಳುಕಾಡನ್ನು ದಾಟಿ, ಟಿಬೆಟ್ಟಿನ ಭಾಗದಲ್ಲಿದ್ದ ಮಾನಸ ಸರೋವರ ಮತ್ತು ಕೈಲಾಸ ಪರ್ವತವನ್ನು ತಲುಪಿದರು. ಇದರಿಂದ ನಮ್ಮ ದೇಶದ ಜನರಿಗೆ ಟಿಬೆಟ್ಟಿನ ಪ್ರದೇಶಗಳ ಪರಿಚಯವಿತ್ತೆಂಬ ಸಂಗತಿ ವೇದ್ಯವಾಗುತ್ತದೆ. ಕ್ರಿ.ಶ. ಮೊದಲನೇ

ಶತಮಾನಕ್ಕಿಂತ ಮುಂಚೆಯೇ ಕಾಶ್ಮೀರದ ಅಮರನಾಥ್ (೧೪೦೦೦ ಅಡಿ), ನೇಪಾಳದ ಪಶುಪತಿ ಮತ್ತು ಇವುಗಳ ಮಧ್ಯದಲ್ಲಿರುವ ಅನೇಕ ಯಾತ್ರಾ ಸ್ಥಳಗಳು ಪ್ರಸಿದ್ಧವಾಗಿದ್ದುವು, ಜನಾದರಣೀಯವಾಗಿದ್ದವು, ಪವಿತ್ರ ಸ್ಥಳಗಳಾಗಿದ್ದುವು. ಈ ಪ್ರದೇಶದಲ್ಲಿ ಅನೇಕಾನೇಕ ಋಷ್ಯಾಶ್ರಮಗಳಿದ್ದುವು. ಪ್ರಶಾಂತವಾದ ವಾತಾವರಣ, ಜನಜಂಗುಳಿಯಿಂದ ಬಹುದೂರದಲ್ಲಿದ್ದ ಈ ಆಶ್ರಮಗಳು ತಪಸ್ಸಿಗೆ ಹೇಳಿ ಮಾಡಿಸಿದಂತಿದ್ದುವು.

ರಾಮಾಯಣದ ಕಾಲದಲ್ಲಿ ಮೈದಾನ ಪ್ರದೇಶಗಳು ಇನ್ನೂ ಆಕ್ರಮಿಸಲ್ಪಟ್ಟಿರಲಿಲ್ಲ ಎಂಬ ಸಂಗತಿ ವಿಶದವಾಗುತ್ತದೆ. ದಂಡಕ ಮತ್ತು ಪಂಚವಟಿ ಎಂಬ ಕಾಡು ಪ್ರದೇಶಗಳು ಹಿಂದೂಸ್ಥಾನದ ಹೃದಯಭಾಗದಲ್ಲಿ ಅಡಗಿದ್ದವು. ಆದರೆ ಮಹಾಭಾರತದ ಕಾಲದಲ್ಲಿ ಆರ್ಯಾವರ್ತವು ಸಂಪೂರ್ಣವಾಗಿ ಆಕ್ರಮಿಸಲ್ಪಟ್ಟ ಜನವಸತಿ ಪ್ರದೇಶಗಳೆನಿಸಿದ್ದವು. ತಪಸ್ವಿಗಳಾದ ಋಷಿಮುನಿಗಳು, ತಲುಪಲು ದುಸ್ಸಾಧ್ಯವಾಗಿದ್ದ ಹಿಮಾಲಯದ ಎತ್ತರವಾದ ಪ್ರದೇಶಗಳಿಗೆ ಹೋಗಿ ತಮ್ಮ ಆಶ್ರಮಗಳನ್ನು ಕಟ್ಟಿದ್ದರು.

ಹೀಗೆ ಹಂತಹಂತವಾಗಿ ಎಲ್ಲೆಲ್ಲಿ ಜನವಸತಿ ಸಾಧ್ಯವೋ ಅಲ್ಲೆಲ್ಲಾ ಪವಿತ್ರ ಯಾತ್ರಾಸ್ಥಳಗಳನ್ನು ನಿರ್ಮಿಸಲಾಯಿತು. ಇಂಥ ಪವಿತ್ರ ಸ್ಥಳಗಳಲ್ಲಿ ಬದರೀನಾಥ್ (೧೫೦೦೦ ಅಡಿ) ಮುಖ್ಯವಾಯಿತು. ವರ್ಷ ವರ್ಷವೂ ಸಾವಿರಾರು ಯಾತ್ರಿಕರು ಇಲ್ಲಿಗೆ ಬಂದು ಹೋಗಲು ಪ್ರಾರಂಭ ಮಾಡಿದರು. ಬದರೀನಾಥ ಮತ್ತು ಹರಿದ್ವಾರಗಳ ನಡುವೆ ನೂರಾರು ಪವಿತ್ರ ಸ್ಥಳಗಳು ಉಗಮವಾದುವು. ಅನೇಕಾನೇಕ ದಂತಕಥೆಗಳು ಈ ಸ್ಥಳಗಳ ಪಾವಿತ್ರ್ಯವನ್ನು ಸಾರಿದುವು. ಕಲ್ಕಾದಿಂದ ಶಿಮ್ಲಾವರೆಗಿನ ೫೦ ಮೈಲಿ ರಸ್ತೆಯಲ್ಲಿ ಪ್ರತಿಯೊಂದು ಮುಖ್ಯ ತಾಣವು ದೇವಿಗೆ ಸಮರ್ಪಿತವಾದ ಜಾಗಗಳಾಗಿವೆ.

ಈ ವೇಳೆಗೆ ಹಿಮಾಲಯದ ಮೂಲಕ ಸಾಗುವ ದಾರಿಗಳು, ಹಳ್ಳಕೊಳ್ಳಗಳು ಪರಿಚಿತವಾಗಿದ್ದುವು.

ಮೇಘದೂತದಲ್ಲಿ ಕಾಳಿದಾಸನು ಮೇಘವು ಕೈಲಾಸದ ಹತ್ತಿರ ಇರುವ ಅಲಕಾಪಟ್ಟಣಕ್ಕೆ ಸಾಗಬೇಕಾದರೆ ದಾರಿಯನ್ನು ವಿವರಿಸುವಾಗ ಈ ಅನೇಕ ಹಳ್ಳಕೊಳ್ಳ ಕಣಿವೆ, ಹಿಮಾಚ್ಛಾದಿತ ಪ್ರದೇಶಗಳ ವರ್ಣನೆಯನ್ನು ಕೊಟ್ಟಿದ್ದಾನೆ.

೬, ೭ ಮತ್ತು ೮ನೇ ಶತಮಾನಗಳಲ್ಲಿ ಭಾರತದ ರಾಜರು ಹಿಮಾಲಯದ ರಾಜ್ಯಗಳನ್ನು ಗೆದ್ದು ಸೇರಿಸಿಕೊಂಡ ಸಂಗತಿ ಸಂಸ್ಕೃತ ಸಾಹಿತ್ಯದಲ್ಲಿ ಹೇರಳವಾಗಿ ಸಿಕ್ಕುತ್ತವೆ. ಬಾಣನ ಹರ್ಷಚರಿತ್ರೆಯಲ್ಲಿ, ಶ್ರೀಹರ್ಷನು ಕಾಶ್ಮೀರ ಮತ್ತು ನೇಪಾಳಗಳನ್ನು ಗೆದ್ದು ವಶಪಡಿಸಿಕೊಂಡ ಸಂಗತಿಯ ಉಲ್ಲೇಖವಿದೆ. ಹಿಂದೂಗಳ ದೃಷ್ಟಿಕೋನದಲ್ಲಿ ಕಾಶ್ಮೀರ ಮತ್ತು ನೇಪಾಳಗಳು ಹಿಂದೂ ಸಂಸ್ಕೃತಿಯ ನೆಲೆಗಳಾಗಿದ್ದ ಸಂಗತಿ ವ್ಯಕ್ತವಾಗುತ್ತದೆ.

ಅಗಾಧವಾದ ಹಿಮಾಲಯದ ತಪ್ಪಲನ್ನು ಅನ್ವೇಷಣೆ ಮಾಡಲು, ಅಲ್ಲಿ ಎಲ್ಲೆಲ್ಲಿ ವಾಸಯೋಗ್ಯವಾದ ಸ್ಥಳಗಳಿದ್ದುವೋ ಅವುಗಳನ್ನು ಗುರುತಿಸಿ, ಅಲ್ಲಲ್ಲಿ ವಸಾಹತುಗಳನ್ನು ಸ್ಥಾಪಿಸಲು ನೂರಾರು ವರ್ಷಗಳೇ ಬೇಕಾಯಿತು. ಈ ಕೆಲಸವನ್ನು ಮಾಡಿದ ಧೀರಾಧಿಧೀರರ ವೀರಗಾಥೆ ಒಂದು ಪುರಾತನ ಮಹಾಕಾವ್ಯವೇ ಆದೀತು. ಅತ್ಯಂತ ಎತ್ತರವಾದ ಕೆಲವು ಶಿಖರಗಳನ್ನು ಬಿಟ್ಟರೆ ಉಳಿದೆಲ್ಲಾ ಪ್ರದೇಶಗಳನ್ನು ಈಗಲೂ, ಅತ್ಯಾಧುನಿಕ ಉಪಕರಣಗಳೊಂದಿಗೆ ಈ ಪ್ರದೇಶಗಳನ್ನು ಮುಟ್ಟಲು, ಏರಲು ಬಹಳ ಕಷ್ಟಕರವಾಗಿರುವಾಗ ನಮ್ಮ ಹಿಂದೂ ಜನ ಬಹಳ ಹಿಂದೆಯೇ ಈ ಭಾಗಗಳನ್ನು ಸಂಶೋಧಿಸಿದ್ದರು ಎಂಬ ಸಂಗತಿ ಹೆಮ್ಮೆಪಡಬೇಕಾದದ್ದೇ. ಹಿಂದೂಗಳ ಸ್ಮೃತಿಯ ಮೇಲೆ ಹಿಮಾಲಯವು ಬೀರಿರುವ ಪ್ರಭಾವ ದಿನೇ ದಿನೇ ಹೆಚ್ಚುತ್ತಿದೆ. ಅವರ ಮಹಾಕಾವ್ಯಗಳು ಪರ್ವತದ ಉಜ್ವಲ ಸೌಂದರ್ಯವನ್ನು ವಿಧವಿಧವಾಗಿ ಬಣ್ಣಿಸಿವೆ. ಪುರಾಣಗಳು ಅದರ ಭೀಕರ ಗಾಂಭೀರ್ಯವನ್ನು ಗೌರವದಿಂದ ವರ್ಣಿಸಿವೆ. ದಂತಕಥೆಗಳು ಇದರ ವರ್ಣನೆಯನ್ನು ಬಣ್ಣಬಣ್ಣಗಳಿಂದ ತುಂಬಿವೆ. ಕಾಲಿದಾಸನ ಅಮರಕೃತಿಗಳಾದ ಕುಮಾರಸಂಭವ ಹಾಗೂ ಮೇಘದೂತಗಳಲ್ಲಿ ವಿವರವಾದ ಹಿಮಾಲಯದ ವರ್ಣನೆಗಳಿವೆ. ಕುಮಾರಸಂಭವದ ಮೊದಲನೇ ಸರ್ಗ ಹಿಮಾಲಯದ ಅದ್ಭುತ ವಿವರಣೆಯನ್ನು ಕೊಟ್ಟಿದೆ. ಈ ಕಾವ್ಯದ ಉದ್ದಕ್ಕೂ ಹಿಮಾಲಯದ ವರ್ಣನೆಗಳೇ ತುಂಬಿವೆ.

ಇನ್ನು ಮೇಘದೂತ – ವಿಂಧ್ಯಾಚಲದಲ್ಲಿ ಶಾಪಗ್ರಸ್ತನಾದ ಯಕ್ಷನೊಬ್ಬನು, ಕೈಲಾಸದ ಹತ್ತಿರ ಇರುವ ಅಲಕಾಪುರಿಯಲ್ಲಿರುವ ತನ್ನ ಪ್ರಿಯತಮೆಗೆ, ಮೇಘ ಒಂದರ ಮೂಲಕ ತನ್ನ ಅಳಲನ್ನು ಹೇಳಿಕಳುಹಿಸುತ್ತಾನೆ. ಈ ದೂತ ಹಿಮಾಲಯ ಪ್ರದೇಶದಲ್ಲಿ ಬಹಳ ದೂರ ಸಾಗಬೇಕಾಗಿದೆ. ಅವನಿಗೆ ಹೇಗೆ ಹೇಗೆ ಹೋಗಬೇಕೆಂಬ ಸೂಚನೆಗಳನ್ನು ಯಕ್ಷನು ದೂತನಿಗೆ ಕೊಡುತ್ತಾನೆ. ಸವಿಸ್ತಾರವಾಗಿ ಈ ಕಾವ್ಯದ ಅನೇಕ ಸುಂದರವಾದ ಶ್ಲೋಕಗಳು ಹಿಮಾಲಯದ ಅದ್ಭುತ, ಬೀಭತ್ಸ, ಸುಂದರ ವರ್ಣನೆಯನ್ನು ಒಳಗೊಂಡಿವೆ. ಭಾರವಿಯ ಕಿರಾತಾರ್ಜುನೀಯದಲ್ಲೂ ಹಿಮಾಲಯದ ವರ್ಣನೆ ಬರುತ್ತದೆ. ಕಥಾಸರಿತ್ಸಾಗರದಲ್ಲೂ ಹಿಮಾಲಯದ ಅದ್ಭುತ ಸೌಂದರ್ಯದ ವರ್ಣನೆ ಬರುತ್ತದೆ. ಇಷ್ಟೇ ಅಲ್ಲ ಎಲ್ಲೆಲ್ಲಿ ಹಿಂದೂಗಳು ಹೋಗಿ ನೆಲೆಸಿದರೋ ಅಲ್ಲಲ್ಲಿ ಹಿಮಾಲಯದ ನೆನಪುಗಳನ್ನು ಮೆಲಕು ಹಾಕಿದರು – ಹಾಕುತ್ತಾ ಇದ್ದಾರೆ.

ಜಾವಾದ ಕವಿಸಾಹಿತ್ಯದಲ್ಲೂ ಹಿಮಾಚ್ಛಾದಿತ ಪರ್ವತಗಳ ಸುಂದರ ವರ್ಣನೆ ಇದೆ. ಉದಾಹರಣೆಗೆ 'ಸ್ಮಾರದಹನ'ದಲ್ಲಿ – ಹಿಮಾಲಯಕ್ಕೆ ಅನ್ವಯವಾಗುವಂತಹ– ಹಿಮಶಿಖರಗಳ ವಿವರ ವರ್ಣನೆಗಳಿವೆ. ಇವತ್ತಿಗೂ ಸಯಾಮಿನ ರಾಜರ ಪಟ್ಟಾಭಿಷೇಕವಾಗುವ ದೇಗುಲದ ಹೆಸರು 'ಕೈಲಾಸ' ಪರ್ವತ.

ಸಿಂಧೂನದಿಯಿಂದ ಬ್ರಹ್ಮಪುತ್ರ ನದಿಯವರೆಗೆ ಹಿಮಾಲಯ ೧೫೦೦ಮೈಲಿ ಉದ್ದವಿದೆ. ಆದರೆ ಪಶ್ಚಿಮದಲ್ಲಿ ಹಿಂದೂಕುಶ್, ಪೂರ್ವದಲ್ಲಿ ಲುಶೈ ಬೆಟ್ಟಗಳು ಹಿಮಾಲಯದ ಚಾಚಿದ ಕೈಗಳಂತೆ, ಇವೆ. ಇದನ್ನು ಈಗಿನ ತಜ್ಞರು ಹಿಮಾಲಯವೆಂದೇ ಎಣಿಸುತ್ತಾರೆ. ಸರಾಸರಿ ಅಗಲ೧೫೦ ಮೈಲಿ. ಈ ವಿಶಾಲ ಪ್ರದೇಶದ ಮಧ್ಯೆ ಸದಾ ಹಿಮದಿಂದ ಮುಚ್ಚಲ್ಪಟ್ಟ ಶ್ರೇಣಿಗಳು, ಸುಮಾರು ೨೦,೦೦೦ಅಡಿ ಎತ್ತರದವರೆಗೆ ಎದ್ದು ನಿಂತಿವೆ. ಈ ದೊಡ್ಡ ಕೋಟೆಯ ಮೇಲೆ ಅಲ್ಲಲ್ಲಿ ಎದ್ದು ಕಾಣುವ, ಎವರೆಸ್ಟ್ ಗಾಡ್‌ವಿನ್, ಆಸ್ಟಿನ್, ನಂದಾಪ್ರಭಾತ್, ಕಾಂಜನಗುಂಗ ಮತ್ತು ಧವಳಗಿರಿ ಶೀಖರಗಳು ಮನುಷ್ಯನು ಏರಲು ಸವಾಲೆಸಗಿದಂತೆ ಎದ್ದು ನಿಂತಿವೆ. ಈಚೀಚೆಗೆ ಈ ಕೆಲವು ಶಿಖರಗಳನ್ನು ಮಾನವರು ಹತ್ತಿ ಜಯ ಸಾಧಿಸಿದ್ದಾರೆ. ಈ ಶ್ರೇಣಿಗಳು ದಕ್ಷಿಣಕ್ಕೆ ೧೨ ರಿಂದ ೧೫ ಸಾವಿರ ಅಡಿ ಎತ್ತರದ ಪರ್ವತ ಶ್ರೇಣಿಗಳು ಹವ್ಯಾಸಿಗಳಿಗೆ, ಅನ್ವೇಷಕರಿಗೆ ಹೆಚ್ಚು ಸ್ನೇಹಪರವಾಗಿದೆ. ಮುಂದೆ ಹೊರಗಿನ ಹಿಮಾಲಯದ ಶ್ರೇಣಿಗಳಾದ ಶಿವಾಲಿಕ್ ಪರ್ವತ ಶ್ರೇಣಿ, ಕಾಡುಗಳಿಂದ ಕೂಡಿ, ತಂಪಾದ ಹವಾಮಾನದಿಂದ ಮಾನವನ ವಾಸಕ್ಕೆ ಅನುಕೂಲಕರವಾಗಿದೆ. "ಗಿಲ್‌ಗಿಟ್, ರುಪ್‌ಶೂ, ಸ್ಪಿತಿ ಮುಂತಾದ ಪ್ರದೇಶಗಳ ಸಾಮಾನ್ಯ ಸ್ಥಳವರ್ಣನೆ ಒಂದು ದೊಡ್ಡ ಗ್ರಂಥವಾಗುತ್ತದೆ" ಎಂದು ಸ್ಪೇಟ್ ಹೇಳುತ್ತಾನೆ. ಸುಂದರ ಕಣಿವೆ ಕಾಶ್ಮೀರ ದೇವತೆಗಳ ಕಣಿವೆಯಾದ ಕೆಲವು ಪವಿತ್ರ ಹರಿದ್ವಾರದ ಡೂನ್ ಕಣಿವೆ ಪೂಜ್ಯ ತಪೋವನ ಮತ್ತು ನೇಪಾಳಗಳು ಈ ಪರ್ವತಖಂಡದ ಸ್ನೇಹಪರ ಮತ್ತು ಆಹ್ಲಾದಕರ ತಾಣಗಳಾಗಿವೆ. ಗುಲ್‌ಮಾರ್ಗದಿಂದ ಡಾರ್ಜಿಲಿಂಗ್‌ವರೆಗಿನ ಈಚೀಚೆಗೆ ಬೆಳೆದ ಪಟ್ಟಣಗಳು ಅತಿಥಿಗೃಹಗಳಾಗಿವೆ. (ಸ್ಪೇಟ್ : ಇಂಡಿಯ ಅಂಡ್ ಪಾಕಿಸ್ತಾನ್, ಪು. ೩೬೪)

ಈ ಹಿಮನದಿಗಳು, ಪುರಾತನ ಕಾಡುಗಳು ಭೋರ್ಗರೆದು ನುಗ್ಗುತ್ತಿರುವ ನದಿಗಳು, ಭಯ ಹುಟ್ಟಿಸುವ ಹಿಮಕಣಿವೆಗಳೂ ಇವೆಲ್ಲಾ ಹಿಮಾಲಯದ ಭಾಗಗಳು. ಇಲ್ಲಿಯ ಹವಾಮಾನ ವೈಪರೀತ್ಯಗಳೂ ವಿವರಿಸಲಸಾಧ್ಯ.

ಒಬ್ಬ ಇಂಗ್ಲಿಷ್ ಬರಹಗಾರ ಹೇಳಿರುವಂತೆ "ಈ ಭೂಮಿಯ ಅತ್ಯುನ್ನತ ಪರ್ವತ ಶ್ರೇಣಿಗಳು, ಅನಾದಿ ಕಾಲದಲ್ಲಿ ಭೂಚಲನೆಗಳಿಂದ ಮೇಲಕ್ಕೆ ತಳ್ಳಲ್ಪಟ್ಟು, ಅಲುಗಾಡಲಾಗದಂತೆ ನಿಂತಿರುವ ಘನೀಭವಿಸಿರುವ ಲಾವಾರಸದಿಂದ ಆವರಿಸಿರುವ ಶಿಖರಗಳು ದಿಗಂತದ ಅಂಚಿನಲ್ಲಿ ಪಸರಿಸಿರುವ ಶಿಖರಗಳ ಅಭೇದ್ಯ, ಅಗೋಚರವಾದ ಜಾಗಗಳು – ಕಲ್ಲುಬಂಡೆಗಳಿಂದಾದ ಕಣಿವೆಗಳು, ದಟ್ಟವಾದ ಕಾಡುಗಳಿಂದ ಆವೃತವಾದ ಈ ಅದ್ಭುತ ಪರ್ವತಗಳು ಮಾನವನ ಆಕರ್ಷಣೆಗೆ ಒಳಗಾಗದೆ ಇಂದಿಗೂ ನಿಂತಿವೆ – ಅಭೇದ್ಯ, ಅಗೋಚರವಾಗಿ.

ನಲವತ್ತಕ್ಕೂ ಹೆಚ್ಚು, ೨೩೦೦೦ ಅಡಿಗಳಿಗಿಂತ ಎತ್ತರವಾಗಿ ನಿಂತಿರುವ ಶಿಖರಗಳು – ಈ ಪರ್ವತಖಂಡ ತನ್ನದೇ ಆದ ಹವಾಮಾನ ವೈಪರೀತ್ಯಗಳಿಂದ

ಕೂಡಿದೆ. ಅತ್ಯಂತ ಚಳಿಪ್ರದೇಶ, ಗಾಳಿಯೇ ಇಲ್ಲದ ಎತ್ತರ ಪ್ರದೇಶಗಳು ಸೂರ್ಯನ ಬೆಳಕೇ ಬೀಳದ ಕಣಿವೆಗಳು – ಗಂಗಾ, ಬ್ರಹ್ಮಪುತ್ರಾ, ಸಿಂಧೂ, ಅಲಕಾನಂದ ಮುಂತಾದ ನದಿಗಳು ಎತ್ತರದ ಶಿಖರಗಳಿಂದ ಧುಮುಕಿ ಹಳ್ಳ ಕೊಳ್ಳಗಳಲ್ಲಿ ಭೋರ್ಗರೆದು ನೂರಾರು ಮೈಲಿ ಸಾಗಿ ಕೊನೆಗೆ ಮೈದಾನದ ಒಣಗಿನಿಂತಿರುವ ಪ್ರದೇಶಗಳಿಗೆ ನೀರುಣಿಸಿ, ಕೋಟಿ ಜನರ ಜೀವನಾಧಾರವಾಗಿ ಸಮುದ್ರವನ್ನು ಸೇರುತ್ತವೆ. (ಮೆಕಿಂಟ್ವೆರ್ : ಅಟಾಕ್ ಆನ್ ಎವರೆಸ್ಟ್, ಪು. ೧೦)

ಭೂಗರ್ಭಶಾಸ್ತ್ರಜ್ಞರ ಪ್ರಕಾರ ಭೂಮಿಯ ಸಂಕೋಚನದಿಂದಾದ ಪದರಗಳೇ ಈ ಹಿಮಾಲಯ ಪರ್ವತಗಳು. ಈ ತಜ್ಞರ ಪ್ರಕಾರ ಈ ಪರ್ವತಗಳ ತಳ ಬಹಳ ಹಿಂದೆ–ಅತಿ ಪುರಾತನ ಕಾಲದಲ್ಲಿ ಸಮುದ್ರದಲ್ಲಿ ಮುಳುಗಿದ್ದುವಂತೆ. ಭೂಗೋಳ ಶಾಸ್ತ್ರದ ಪ್ರಕಾರ ಈ ಪ್ರದೇಶ ಟಿಬೆಟ್ ಪ್ರಸ್ಥಭೂಮಿಯಿಂದ ಕೂಡಿದ ಅತ್ಯಂತ ಎತ್ತರವಾದ ಪ್ರದೇಶ. ಸಮುದ್ರ ಮಟ್ಟದಿಂದ ಸರಾಸರಿ ೧೫೦೦೦ ಅಡಿ ಎತ್ತರ ಪ್ರದೇಶ.

ಹಿಮಾಲಯವನ್ನು ಭಾರತ ದೇಶದ ರಕ್ಷಣಾಗೋಡೆ ಎಂದು ಭಾವಿಸಿದರೆ ಆಗ ಈ ಸಂಗತಿಗಳನ್ನು ಗಮನಿಸಬೇಕಾಗುತ್ತದೆ.

(1) ಟಿಬೆಟ್ ಪ್ರಸ್ಥಭೂಮಿ :– ಉತ್ತರದಲ್ಲಿ ಕೂಯನ್‌ಲುನ್ ಪರ್ವತಗಳು, ಕಾರಾಕುರಂ ಪಶ್ಚಿಮಕ್ಕೆ, ಹಿಮಾಲಯದ ದಕ್ಷಿಣಕ್ಕೆ, ಪೂರ್ವಕ್ಕೆ ಬೆಟ್ಟಗಳ ಸಾಲುಗಳೇ.

(೨) ಭಾರತದ ಪರ್ವತ ಪ್ರದೇಶ ಒಂದು ಆಯಕಟ್ಟಿನ ಪ್ರದೇಶ–ಇದರ ಮಧ್ಯ ಪ್ರದೇಶ ಒಂದು ಪ್ರಸ್ಥಭೂಮಿ ಸಮುದ್ರ ಮಟ್ಟದಿಂದ ೧೫೦೦೦ ಅಡಿ ಎತ್ತರದಲ್ಲಿದೆ. ಪರ್ವತಗಳ ಸರಾಸರಿ ಎತ್ತರ ೨೦,೦೦೦ ಅಡಿ, ವಿಸ್ತೀರ್ಣ ೫೦೦,೦೦೦ ಚ.ಮೈ. ಇಲ್ಲಿ ಮರಗಳು ಬೆಳೆಯುವುದಿಲ್ಲ. ನೀರಿಲ್ಲ. ಹಿಮಾಚ್ಛಾದಿತ ಹುಲ್ಲುಗಾವಲು ಮನುಷ್ಯನಿಗೆ ಅಭೇದ್ಯ.

ಇಲ್ಲಿಯವರೆಗಿನ ಸರ್ವೇಕ್ಷಣೆಯಿಂದ ತಿಳಿದು ಬಂದ ವಿಷಯ ಹೀಗಿದೆ:

24,000 ಅಡಿಗಳಿಗಿಂತ ಎತ್ತರದ 74 ಶಿಖರಗಳು
25,000 ಅಡಿಗಳಿಗಿಂತ ಎತ್ತರದ 48 ಶಿಖರಗಳು
26,000 ಅಡಿಗಳಿಗಿಂತ ಎತ್ತರದ 16 ಶಿಖರಗಳು
27,000 ಅಡಿಗಳಿಗಿಂತ ಎತ್ತರದ 5 ಶಿಖರಗಳು
28,000 ಅಡಿಗಳಿಗಿಂತ ಎತ್ತರದ 3 ಶಿಖರಗಳು

ಒಟ್ಟು 146 ಶಿಖರಗಳು

ಮೆಸಿಂಟೈರ್ ಹೇಳುವಂತೆ "ಈ ೨೦೦೦ ಮೈಲಿ ಪರ್ವತಗಳ ಹರವು 'ಕೆಲೈ' ಇಂದ 'ಕ್ಯಾಸ್ಪಿಯನ್' ಸಮುದ್ರದವರೆಗೆ ಹರಡಬಹುದು. ಕಣಿವೆ, ಪ್ರಸ್ಥಭೂಮಿ, ಶಿಖರಗಳು, ಪ್ರಕೃತಿ ತನ್ನ ಕ್ರೂರ ಮತ್ತು ಸರಳ ಸ್ವಭಾವಗಳ ಬಿಸಿಯಿಂದ

ಕುದಿಯುತ್ತಿರುವ ನರಕಸದೃಶವಾದ ಜಾಗಗಳು–ಕಾಡುಪ್ರದೇಶಗಳು ಛಳಿಯಿಂದ ನಡುಗಿಸುವ ಎತ್ತರ ಪ್ರದೇಶಗಳು, ಸುಂದರವಾದ ಹೂವಿನ ಹರವುಗಳು, ಬೋಳಾದ, ಬಣ್ಣವೇ ಇಲ್ಲದ, ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿರುವ, ಆಳವಾದ ೧೦೦೦೦ ಅಡಿ ದಪ್ಪದ ಹಿಮದಿಂದ, ಕೂಡಿದ ತಗ್ಗು ಪ್ರದೇಶಗಳು, ಹಿಮಚಾಚು ಬಂಡೆಗಳಿಂದ ಜೋತಾಡುತ್ತಿರುವುದು, ಕೆಲವು ಸಾರಿ ತಮ್ಮ ಜಾಗದಿಂದ ಜಾರಿ ಭಯಂಕರ ಧ್ವನಿಯೊಡನೆ ಸಾವಿರಾರು ಅಡಿ ಕೆಳಕ್ಕೆ ಬೀಳುವುದು, ಹವಾಮಾನದ ವ್ಯತ್ಯಾಸಗಳು, ವೈಪರೀತ್ಯಗಳು ಹೇಳಲಸದಳವಾದ ವಾತಾವರಣ" ಇದು ಹಿಮಾಲಯ, ರುದ್ರರಮಣೀಯ.

ಇಲ್ಲಿಯವರೆಗೂ ಈ ಹಿಮಾಲಯವು ಇದರ ದಕ್ಷಿಣ ಗೋಡೆಯಾಗಿರುವ, ಪ್ರಪಂಚದ ಛಾವಣಿ ಎಂದು ಹೆಸರಾಗಿರುವ ಚತುರ್ಭುಜದ ವರ್ಣನೆಯನ್ನು ಸಂಪೂರ್ಣವಾಗಿಯೂ ಯಾವ ಭೂಶಾಸ್ತ್ರಜ್ಞನೂ ಮಾಡಿಲ್ಲ. ಸ್ವನ್ ಹೇಡನ್ನಿನ "ಟ್ರಾನ್ಸ್ ಹಿಮಾಲಯ"ದಲ್ಲಿ ಈ ಪ್ರದೇಶದ ಹೆಚ್ಚು ವಿವರಣೆಗಳನ್ನು ಕೊಟ್ಟಿದ್ದಾನೆ. ೭೯ ದಿನ ಹೇಡನ್ ಮತ್ತು ಸಂಗಡಿಗನು ಓಡಾಡಿದ ಮೇಲೆ ಮೊದಲ ಬಾರಿಗೆ ಒಬ್ಬ ಮನುಷ್ಯನನ್ನು ಕಂಡುದು. ಈ ಸಾಹಸಗಾಥೆ ನಂಬುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಕೊಳಗಳ ಅಳುವ ದನಿಯ ಅರಚಾಟ, ಕಾಡು ಯಾಕ್ ಆಕ್ರಮಣ, ಹವಾಮಾನದ ಬದಲಾವಣೆ–ಅತಿ ಹೆಚ್ಚು ಸೆಕೆಯಿಂದ ನಡುಗಿಸುವ ಕೊರೆತ–೭೯ ದಿನ ಯಾವ ಮಾನವ ಸಂಪರ್ಕವೂ ಇಲ್ಲದ ಈ ರುದ್ರ ರಮಣೀಯ ಟಿಬೆಟ್‌ನಲ್ಲಿ, ನಾವು ಕಳೆದ ಒಂದು ದಿನದ ವಿವರಣೆ– "ನಾವು ಆಗ್ನೇಯ ಮುಖವಾಗಿ ಹೊರಟಾಗ ನೈರುತ್ಯ ಮಾರುತ ಬಂದು ಭರ್ರನೆ ಧೂಳಿನ ಅಲೆಗಳೊಡನೆ ಬೀಸುತ್ತಿತ್ತು. ಆ ಗಾಳಿಯ ಚಂಡಮಾರುತದ ಹೊಡೆತಕ್ಕೆ ಸಿಕ್ಕಿ ನಾವು ತತ್ತರಿಸಿಹೋದೆವು. ಉಸಿರಾಡುವುದೂ ಕಷ್ಟವಾಯಿತು. ನಾವು ತಂದಿದ್ದ ಭೂಪಟ ಹರಿದು ಚಿಂದಿಯಾಗಿತ್ತು. ನಮ್ಮ ಕೈಗಳು ಕೊರೆತದಿಂದ ಸೆಟೆದುಕೊಂಡಿದ್ದುವು. ಮುಂದಿನ ಕ್ಯಾಂಪಿಗೆ ನಾವು ತಲುಪುತ್ತೇವೋ ಇಲ್ಲವೋ ಎಂಬ ಸಂಶಯ ನಮ್ಮನ್ನಾವರಿಸಿತು. ನಮ್ಮ ಮುಖಚರ್ಯೆಯೇ ಬದಲಾಗಿತ್ತು. ಕೆಂಪಗಿದ್ದ ನಮ್ಮ ಕಣ್ಣುಗಳಿಂದ ಹರಿದ ನೀರು ಕೆನ್ನೆಯ ಮೇಲೆ ಹೆಪ್ಪುಗಟ್ಟುತ್ತಿತ್ತು, ಧೂಳಿನೊಡನೆ ಸೇರಿ ತುಟಿಗಳು ಊದಿ ಒಡೆದ ಉಗುರಿನ ಸುತ್ತಿನ ಚರ್ಮ ಬಿರುಕುಬಿಟ್ಟು ರಕ್ತಸ್ರಾವವಾಗುತ್ತಿತ್ತು. ಕೊನೆಗೆ ಸತ್ತಂತೆ ಆಗಿ ನಮ್ಮ ಕ್ಯಾಂಪನ್ನು ತಲುಪಿದೆವು. ನಾವು ರಕ್ತ ಪರಿಚಲನೆಗೆ ಬೇಕಾದ ವ್ಯಾಯಾಮ ಮಾಡಿದ ಮೇಲೆ ನಮ್ಮ ಮುಖಗಳೂ ಸ್ವಲ್ಪಸ್ವಲ್ಪವಾಗಿ ತಮ್ಮ ಮೊದಲ ಸ್ಥಿತಿಗೆ ಬಂದವು." (ಟ್ರಾನ್ಸ್ ಹಿಮಾಲಯಾಸ್, ಪು. ೧೯೭)

ಈ ಅಗಾಧ ಹರವು ಹಿಮಾಲಯದ ಉತ್ತರಕ್ಕೆ ಚಾಚಿದೆ. ಇಲ್ಲಿಗೆ ಪ್ರಾಣಿಗಳಾಗಲೀ, ಮನುಷ್ಯನಾಗಲೀ ಹೋಗಲಸಾಧ್ಯ. ಉತ್ತರಕ್ಕೆ ಕುನ್‌ಲುಮ್

ಪರ್ವತಗಳು ಹಿಮಾಲಯದಷ್ಟೆ ಭಯ ನಡುಕ ಹುಟ್ಟಿಸುತ್ತವೆ. ಅಲ್ಲಿಂದ ಮುಂದೆ ಇರುವುದೇ ಮಂಗೋಲಿಯಾ ಮತ್ತು ಗೋಬಿ ಮರುಭೂಮಿ. ಪ್ರಪಂಚದ ಇನ್ನಾವ ದೇಶಕ್ಕೂ ಇಲ್ಲದ ಹಿಮಾಲಯದಿಂದ ಸಾವಿರಾರು ಮೈಲಿ ಉತ್ತರಕ್ಕೆ ಹರಡಿರುವ ಈ ಪ್ರದೇಶ ದೊಡ್ಡ ರಕ್ಷಕನಾಗಿದೆ.

ವ್ಯಾಪಾರಕ್ಕೆಂದು ಬಂದ 'ಈಸ್ಟ್ ಇಂಡಿಯಾ ಕಂಪೆನಿ' ಮೊದಲು ಮೊದಲು ಲೂಟಿಯಲ್ಲಿ ತೊಡಗಿ, ಹೆಚ್ಚಾಗಿ ಹಿಮಾಲಯದ ಕಡೆ ಗಮನ ಹರಿಸಲಿಲ್ಲ. ಆದರೆ ಮುಂದೆ ಸಾಮ್ರಾಜ್ಯ ಕಟ್ಟುವ ಸಾಧ್ಯತೆಗಳು ಹೆಚ್ಚಿ, ೧೭೭೪ರಲ್ಲಿ ವಾರನ್ ಹೇಸ್ಟಿಂಗ್ಸ್‌ನು ಬೋಗರ್ ಎಂಬುವವನನ್ನು ಟಿಬೆಟ್‌ಗೆ ಕಳುಹಿಸಿದನು. ಹೀಗೆ ಮೊದಲ ಬಾರಿಗೆ ಹಿಮಾಲಯದ ಮುಖಾಂತರ ವ್ಯವಹಾರ ಪ್ರಾರಂಭವಾಯಿತು. ೧೮೧೪–೧೮೧೬ರಲ್ಲಿ ನಡೆದ ಘೂರ್ಕಾಯುದ್ಧ ಬ್ರಿಟಿಷರನ್ನು ನಿಜವಾಗಿ ಟಿಬೆಟ್‌ಗೆ ತಂದಿತು. ೧೯ನೇ ಶತಮಾನ ಆದಿಭಾಗದಲ್ಲಿ ಘೂರ್ಕಾರಾಜ್ಯ ಮಧ್ಯ ಹಿಮಾಲಯವನ್ನು ಪೂರ್ತಿ ಆಕ್ರಮಿಸಿತ್ತು. ಪೂರ್ವದಲ್ಲಿ ಸಿಕ್ಕಿಂನಿಂದ ಪಶ್ಚಿಮದಲ್ಲಿ ಶಿಮ್ಲಾದವರೆಗೆ, ಹರಿದ್ವಾರ, ಡೆಹರಾಡೂನ್‌ಗಳು ಈ ಹಿಂದೂ ರಾಜ್ಯಕ್ಕೆ ಸೇರಿದ್ದವು. ಯುದ್ಧ ಒಪ್ಪಂದದ ಪ್ರಕಾರ ಘರ್‌ವಾಲ್, ಕುಮಾಯೂನ್ ಮತ್ತು ಕಾಂಗ್ರಾದವರೆಗಿನ ಪ್ರದೇಶ ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿತು. ಸಿಕ್ಕಿಂ ಬ್ರಿಟಿಷರಿಂದ ರಕ್ಷಿಸಲ್ಪಟ್ಟ ಪ್ರದೇಶವಾಯಿತು.

ಶಿಮ್ಲಾದ ಮೇಲೆ ಹಿಡಿತ ಬಂದ ಮೇಲೆ ಹಿಮಾಲಯ ಪ್ರದೇಶದ ಅನ್ವೇಷಣೆ ಪ್ರಾರಂಭವಾಯಿತು. ಶಿಮ್ಲಾ ಬ್ರಿಟಿಷರ ಬೇಸಿಗೆ ರಾಜಧಾನಿಯಾಯಿತು. ೧೮೧೮ರಲ್ಲಿ ಸಟ್‌ಲೆಜ್ ಕಣಿವೆಗಳ ಅನ್ವೇಷಣೆ ಶುರುವಾಯಿತು. ಅಲೆಗ್ಸಾಂಡರ್ ಗೆರಾಡ್ ಎಂಬುವನು ಈ ಪ್ರದೇಶದ ಮೂಲಕ ಟಿಬೆಟ್ಟನ್ನು ಸೇರಿದನು. ಈ ಮಾರ್ಗವೇ ಮುಂದೆ ಅದ್ಭುತ ಹಿಂದೂಸ್ತಾನ – ಟಿಬೆಟ್ ರಸ್ತೆಯಾಗಿ ಅಭಿವೃದ್ಧಿ ಹೊಂದಿತು. ಟಿಬೆಟ್ಟನ್ನು ಹಿಂದೂಸ್ತಾನದೊಡನೆ ಸಂಪರ್ಕಿಸುವ ಮೊದಲ ಸಾಹಸ ಇದಾಗಿತ್ತು. ಈ ಮಾರ್ಗ ಹಿಂದೆ ಮನುಷ್ಯರಿಗೆ ತಲುಪಲಾರದ ಜಾಗವಾಗಿತ್ತು. ಇದರಲ್ಲಿ ನಾಲ್ಕು ಸ್ವಾಭಾವಿಕ ವಿಭಾಗಗಳಿವೆ. ಶಿಮ್ಲಾದಿಂದ ನರ್ ತಂಡದವರೆಗಿನದು ಮೊದಲನೆಯದು. ಎರಡನೇ ಹಂತದಲ್ಲಿ ಇದು ಸಟ್‌ಲೆಜ್ ಕಣಿವೆ ಮುಖಾಂತರ ಹಾದು ರಾದುವನ್ನು ಮುಟ್ಟಿ ಗೌರಾಡವರೆಗೆ ಏರುತ್ತವೆ. ಮೂರನೇ ಹಂತದಲ್ಲಿ, ಪರ್ವತ ತಪ್ಪಲಿನಲ್ಲಿ ಸಾಗಿ ದಿಯೋದರ ಕಾಡುಗಳ ಮುಖಾಂತರ ವಾಂಗ್‌ಚು ಬಳಿ ಸಟ್‌ಲೆಜ್ ನದಿಯನ್ನು ಸೇತುವೆಯ ಮೇಲೆ ದಾಟಿ ಊರ್‌ನಿ ತಲುಪುತ್ತದೆ. ಊರ್‌ನಿಯಿಂದ ಪರಿಗೆ – ೨೫ ಮೈಲಿ. ಈ ರಸ್ತೆ ೯೦೦೦ ಅಡಿ ಎತ್ತರದಲ್ಲಿ ಸಾಗುತ್ತದೆ. ಈಗ ಒಳ್ಳೆಯ ರಸ್ತೆಯೊಂದು ಪಶ್ಚಿಮ ಟಿಬೆಟ್ಟನ್ನು ಶಿಮ್ಲಾದೊಡನೆ ಸಂಪರ್ಕಿಸುತ್ತದೆ.

"ಸಟ್‌ಲೆಜ್ ಮತ್ತು ಸ್ಪಿತಿ ನದಿಗಳ ಸಂಗಮ ಅಗಮ್ಯವಾದ ಪರ್ವತ ಪ್ರದೇಶದಲ್ಲಿ

ಆಗುತ್ತದೆ. ಭಾರತ ಮತ್ತು ಟಿಬೆಟ್ಟಿನ ವಿಭಾಗ ರೇಖೆ ಲಿಯೋ ಪೊರಗೈಲ್ ಶಿಖರದ ಮುಖಾಂತರವಾಗುತ್ತದೆ. ಇದೊಂದು ರಮಣೀಯ ಪ್ರದೇಶ. ಕೈಲಾಸಕ್ಕಿಂತ ಹೆಚ್ಚು ಮನಸ್ಸಿನ ಮೇಲೆ ಪರಿಣಾಮ ಮಾಡುವ ಈ ಪರ್ವತ ಶ್ರೇಣಿ ದೇವಾಧಿದೇವರುಗಳು ನೆಲಸಿರುವ ಜಾಗ– ಅಗಮ್ಯ, ಕಾಣದ ಕೈಯಿಂದ ಮಾಡಿದಂತಿದೆ. ಹಗಲಲ್ಲಿ ಈ ಪ್ರದೇಶ ರಮಣೀಯವಾಗಿದ್ದರೆ ರಾತ್ರಿಯಲ್ಲಿ ಮೈಮರೆಸುತ್ತದೆ. ಕಣ್ಣಿಗೆ ಗೋಚರಿಸದಿದ್ದದ್ದೆಲ್ಲಾ ಚಂದ್ರನ ಬೆಳಕು ಹರಡಿ, ಬೆಳ್ಳಿಯ ಬೆಟ್ಟಗಳೇನೋ ಎಂಬ ಭ್ರಮೆಯನ್ನುಂಟುಮಾಡುತ್ತದೆ. ಈ ಸ್ಪಿತಿ ನದೀ ಪ್ರದೇಶ ಯಾವ ಹೊರಗಿನ ಬೆಳಕು ಬೀಳುವಂತೆ ಕಾಣದಿದ್ದರೂ ಲಿಯೋಪೊಳ್‌ಗುಯಲ್‌ನ ಬಳಪದ ಕಲ್ಲುಗಳು ಒಂದು ನಿಗೂಢ ಪ್ರಕಾಶವನ್ನು ಚೆಲ್ಲುತ್ತವೆ. ಒಳಗಿನಿಂದಲೇ ಈ ಬೆಳಕು ಹರಿದುಬಂದಂತೆ ಕಾಣುತ್ತದೆ. ಈ ಮಾನವಾತೀತವಾದ ಪ್ರತಿಭೆ ಅಚ್ಚರಿಗೊಳಿಸುವಂತಹದು" ಎಂದು ಒಬ್ಬ ಪ್ರಯಾಣಿಕ ವಿವರಿಸಿದ್ದಾನೆ.

ಹಿಮಾಲಯದ ಮುಖಾಂತರ ಹಾದುಹೋಗುವ ಎರಡನೆ ದಾರಿಯೇ ಲೆ–ಕಾಶಘರ್ ರಸ್ತೆ. ಈ ರಸ್ತೆಯ ಮುಖಾಂತರವೇ ಸಿಂಕಿಯಾಂಗ್‌ನಿಂದ ಬರುತ್ತಿದ್ದ ಕಾರ್ವಾನ್‌ಗಳು– ಪಂಡಿತ ಮನ್‌ಫೂಲ್ ತನ್ನ ವರದಿಯಲ್ಲಿ "ಈ ಮಾರ್ಗರಚನೆಯಾದರೆ ಖಾಸ್‌ಗರ್‌ನೊಡನೆ ವ್ಯಾಪಾರ ವಹಿವಾಟುಗಳು ನಡೆಯಲು ಸುಲಭವಾಗುತ್ತದೆ" ಎಂದು ಉಲ್ಲೇಖಿಸಿದ ಮೇಲೆ ಈ ಮಾರ್ಗರಚನೆಯನ್ನು ಕೈಗೆತ್ತಿಕೊಳ್ಳಲಾಯಿತು.

ಯಾಕುಬ್ ಬೇಗ್ ದಂಗೆ ಎದ್ದು ಅಲ್ಪಾಯುವಾದ ಕಾಶಘರಿಯಾ ರಾಜ್ಯ ಉದಯವಾದ ಮೇಲೆ ಕಲ್ಕತ್ತಾ ಮತ್ತು ಲಾಹೋರಿನ ಪ್ರಭೃತಿಗಳಿಗೆ ತಮ್ಮ ಸಾಮ್ರಾಜ್ಯವನ್ನು ಇಲ್ಲಿಗೆ ವಿಸ್ತರಿಸುವ ಯೋಚನೆ ಬಂತು. ಈ ಕನಸು ನನಸಾಗಲಿಲ್ಲವಾದರೂ ಲೇ–ಕಾಸ್‌ಗರ್ ರಸ್ತೆ ೧೯೫೧ರ ವರೆಗೆ ಜನೋಪಯೋಗಿಯಾಗಿತ್ತು, ಚೀನಾದ ಕೇಂದ್ರ ಸರ್ಕಾರವು ಸಿಂಕಿಯಾಂಗ್ ಪ್ರದೇಶಗಳು ಮುಚ್ಚಲ್ಪಟ್ಟವೆಂದು ಆದೇಶ ಹೊರಡಿಸುವವರೆಗೆ.

ಶ್ರೀನಗರ ಲ್ಹೇ ರಸ್ತೆ ತೆರೆಯುವವರೆಗೆ ಚೀನಾದಿಂದ ಟರ್ಕಿಸ್ತಾನಕ್ಕೆ ಹೋಗಲು ಇದ್ದ ಮಾರ್ಗ ಶಿಮ್ಲಾ, ಕುಲೂ ಕಣಿವೆ ಮುಖಾಂತರ ರೋಲ್ಯಾಂಡ್ ಕಣಿವೆ ಮುಖಾಂತರವಾಗಿ ಲಾಹೋಲ್ ಮತ್ತು ಬರಾಲಾಚಾ ಕಣಿವೆಗಳ ಮೂಲಕವೇ ಇದ್ದ ರಸ್ತೆ.

೧೯ನೇ ಶತಮಾನದಲ್ಲಿ ಸಿಕ್ಕಿಂಅನ್ನು ಬ್ರಿಟಿಷ್ ರಾಜ್ಯಾಡಳಿತದಲ್ಲಿ ಸೇರಿಸಿದಾಗ ೧೮೮೬ರಲ್ಲಿ ಟಿಬೆಟನ್ನರು ಸಿಕ್ಕಿಂ ಮೇಲೆ ದಾಳಿ ಮಾಡಿದಾಗ ಒಂದು ಸಂದೇಶವನ್ನು ಕೊನೆ ಎಚ್ಚರಿಕೆಯಾಗಿ ಅವರ ಸೈನ್ಯಾಧಿಪತಿಗೆ ಕಳುಹಿಸಲಾಯಿತು. ೧೮೮೬ರಲ್ಲಿ ಟಿಬೆಟನ್‌ರ ಸೈನ್ಯ ಹಿಂದೆಗೆಯಿತು. ಹೀಗಾಗಿ ಭಾರತ ಸರ್ಕಾರಕ್ಕೆ ಈ ಕಣಿವೆದಾರಿಗಳ

ಪ್ರಾಮುಖ್ಯತೆ ಮನದಟ್ಟಾಯಿತು. ಯತುಂಗ್‌ನಲ್ಲಿ ಒಂದು ವಾಣಿಜ್ಯ ಕೇಂದ್ರವನ್ನು ತೆರೆಯಿತು. ಆದರೆ ಹಿಮಾಲಯದ ಮೂಲಕ ಸಂಪರ್ಕ ಬಹಳ ಕಾಲ ತೆಗೆದು ಕೊಳ್ಳುತ್ತಿತ್ತು. ಇಪ್ಪತ್ತನೇ ಶತಮಾನದ ಆದಿಯಲ್ಲಿ ಲಾರ್ಡ್ ಕರ್ಜನ್‌ನ ಆಳ್ವಿಕೆಯಲ್ಲಿ ಯಂಗ್‌ಹಸ್‌ಬೆಂಡ್‌ನ ಮುಂದಾಳತ್ವದಲ್ಲಿ–೧೯೦೪ರಲ್ಲಿ ನಡೆದ ಒಪ್ಪಂದದ ಪ್ರಕಾರ ಜಿಂಗ್‌ಟ್ಸೆಕೇ ಮತ್ತು ಗಾಂಕಾಕದಲ್ಲಿ ಮತ್ತೆರಡು ವ್ಯಾಪಾರ ಕೇಂದ್ರಗಳು ಸ್ಥಾಪಿತವಾದುವು. ಈ ದಾರಿಗಳಲ್ಲದೆ ಅನೇಕಾನೇಕ ಸಣ್ಣ ಪುಟ್ಟ ರಸ್ತೆಗಳೂ ಹುಟ್ಟಿಕೊಂಡವು. ಮಾನಸ ಸರೋವರದಲ್ಲಿ ಮೀಯಲು, ಕೈಲಾಸ ಪರ್ವತ ಶಿಖರವನ್ನು ಪೂಜಿಸಲು ಹೋಗುವವರಿಗೆ ಹಿಂದಿನಿಂದಲೂ ಅನೇಕ ಒಳದಾರಿಗಳಿದ್ದವು. ರಾಮ್‌ಪುರ್‌ಲುಸ್ಸೇರ್, ತೆಹರಿ ಘರ್‌ವಾಲ್, ಸಿಕ್ಕಿಂ ಮೂಲಕ ಭೂತಾನ, ಮತ್ತು ನೇಪಾಳ ರಾಜ್ಯಗಳು ತಮ್ಮ ವ್ಯಾಪಾರ ಮಾರ್ಗಗಳು ಟಿಬೆಟ್ಟಿನೊಂದಿಗೆ ಸಂಬಂಧ ಕಲ್ಪಿಸುವ ಸಂಗತಿ ತಿಳಿದಿತ್ತು. ವ್ಯಾಪಾರಸ್ತರು, ಯಾತ್ರಿಕರು ಟಿಬೆಟ್ಟಿಗೆ ಬೇರೆ ಬೇರೆ ದಾರಿಗಳಿಂದ ತಲುಪುತ್ತಿದ್ದರು.

ಟಿಬೆಟ್ಟಿನ ಕಡೆಯ ಕೆಳಗಿನ ಹಿಮಾಲಯ ಪ್ರದೇಶಗಳು ಟ್ರಿಗ್ನೊಮಿಟ್ರಿಕಲ್ ಸರ್ವೆಯಿಂದ ಬ್ರಹ್ಮಪುತ್ರಾ ನದಿಯ ಮೂಲವನ್ನು ಮತ್ತು ಟಿಬೆಟ್ಟಿನ ಮೂಲಕ ಅದರ ಹರಿವನ್ನು ಗುರುತಿಸಿ ಭೂಪಟಗಳನ್ನು ತಯಾರಿಸಿದ ಕೀರ್ತಿ ಈ ಸಮೀಕ್ಷೆಗೆ ಸೇರಬೇಕು. ಈ ಚಾರಿತ್ರಿಕ ಸಮೀಕ್ಷೆಯನ್ನು ಮಾಡಿದ ವೀರಕಲಿಗಳ ಹೆಸರುಗಳು ಈ ಇಲಾಖೆಯ ಕಡತಗಳಲ್ಲಿ ಸೇರಿಹೋಗಿವೆ. ಕೆಲವು ರಹಸ್ಯ ಪತ್ರಗಳಿಂದ ಕೆಲವು ಹೆಸರುಗಳು ಜನಜನಿತವಾಗಿವೆ.

೧೯ನೇ ಶತಮಾನವು ಕಂಡ ಇನ್ನೊಂದು ಅದ್ಭುತ – ಗಿರಿಧಾಮಗಳ ಬೆಳವಣಿಗೆ. ನೇಪಾಳದ ಯುದ್ಧವಾದ ಮೇಲೆ ಗಂಗೋತ್ರಿ, ಕೇದಾರ್‌ನಾಥ, ಬದರೀನಾಥ ಮುಂತಾದ ಪವಿತ್ರ ಯಾತ್ರಾಸ್ಥಳಗಳ ಪ್ರದೇಶ ಬ್ರಿಟಿಷರ ಆಳ್ವಿಕೆಗೆ ಒಳಗಾದುವು. ಲಾರ್ಡ್ ಆಮ್ ಹರ್ಸ್ಟ್ ಶಿಮ್ಲಾವನ್ನು ಗಿರಿಧಾಮವನ್ನಾಗಿ ಮಾಡಿದ ಮೊದಲಿಗ. ಹೀಗೆ ಡಾಲ್‌ಹೌಸಿ ಇಂದ ಡಾರ್ಜಿಲಿಂಗ್‌ವರೆಗೆ ಅನೇಕ ಗಿರಿಧಾಮಗಳ ಉಗಮವಾಗಿ ಸಟ್‌ಲೆಜ್ ನದಿಯ ತೀರಗಳ ಅನ್ವೇಷಣೆಯೂ ಆಯಿತು. ಬಹಳ ವರ್ಷಗಳವರೆಗೆ ಶಿಮ್ಲಾ ಬೇಸಿಗೆಯ ರಾಜಧಾನಿಯಾಗಲಿಲ್ಲ. ಲಾರ್ಡ್ ಆಕ್‌ಲ್ಯಾಂಡ್‌ನಿಂದ ಡಾಲ್‌ಹೌಸಿಯವರೆಗೆ ಶಿಮ್ಲಾ ಬ್ರಿಟಿಷರ ವಾಸಸ್ಥಾನವಾಗಿತ್ತು. ಲಾರ್ಡ್ ಲಾರೆನ್ಸ್ ಇದನ್ನು ಬೇಸಿಗೆಯಲ್ಲಿ ಪೂರ್ತಿ ವಾಸಸ್ಥಾನವಾಗಿ ಮಾಡಿದನು.

ಹೀಗೆ ಕಾಲಾನುಕಾಲಕ್ಕೆ ಮುಸ್ಸೋರಿ, ನೈನಿತಾಲ್ ಮತ್ತು ಡಾರ್ಜಿಲಿಂಗ್ ಬೇಸಿಗೆಯ ಶಿಬಿರಗಳಾಗಿ ಬೆಳೆದು ಪಟ್ಟಣಗಳ ರೂಪ ಪಡೆದುವು. ಅವುಗಳ ಸೌಕರ್ಯಗಳೊಂದಿಗೆ ಪರ್ವತಗಳ ಕೋಟೆಯೊಳಗೆ ಬೆಳೆದ ಈ ಶಿಬಿರಗಳು ಮುಂದೆ ರೈಲು, ಹೆದ್ದಾರಿ ಮುಂತಾದ ಸಾರಿಗೆ ಸೌಕರ್ಯದ ಲಾಭ ಪಡೆದುವು

ಮತ್ತು ಅಭಿವೃದ್ಧಿ ಹೊಂದಿದುವು. ಕಾಲ್ಕಾ– ಸಿಮ್ಲಾಗಳ ಮಧ್ಯೆ ರದೌಲಿ, ಸುಖಾಕು, ಡಾಗ್‌ಶಾಯಿ ದಂಡು ಪ್ರದೇಶಗಳು, ಧರ್ಮಪುರಿ ಮುಂತಾದ ಆರೋಗ್ಯ ಕೇಂದ್ರಗಳೂ, ಸೋಲನ್, ಕಾಂದೇಘಾಟ್, ಪಾಟಿಯಾಲ ಮಹಾರಾಜನ ಬೇಸಿಗೆ ಶಿಬಿರ ಚೈಲ್ ಮುಂತಾದ ಸಣ್ಣ ಸಣ್ಣ ಸ್ಥಳಗಳೂ ಕಾಣಿಸಿಕೊಂಡವು. ಪ್ರಾರಂಭದಲ್ಲಿ ಈ ಪ್ರದೇಶದಲ್ಲಿ ಸಣ್ಣಪುಟ್ಟ ರಾಜರುಗಳು ಆಳ್ವಿಕೆ ನಡೆಸುತ್ತಿದ್ದುದರಿಂದ ಹೆಚ್ಚಿನ ಅಭಿವೃದ್ಧಿ ಕಾಣಲಿಲ್ಲ. ಈಚೀಚೆಗೆ ಈ ಪ್ರದೇಶಗಳಲ್ಲಿ ದೇಶದ ಆರ್ಥಿಕ ವಲಯದಲ್ಲಿ ಸೇರಿ ಮುಂದೆ ಬರುತ್ತಿವೆ.

ಈ ಬೇಸಿಗೆ ಶಿಬಿರಗಳು ೬೦೦೦ ಅಡಿ ಸರಾಸರಿ ಎತ್ತರದಲ್ಲಿದ್ದು ೨೦/೩೦ ಮೈಲಿ ಅಗಲವಾದ ಪ್ರದೇಶದಲ್ಲಿ ಬೆಳೆದು ಭಾರತದ ಒಂದು ಭಾಗವಾದುವು. ಆದರೆ ಇಲ್ಲಿನ ಆರ್ಥಿಕ ಬೆಳವಣಿಗೆ ಬೇರೆ ತರಹದ್ದೇ ಆಗಿ ಉಳಿದಿದೆ. ನೇಪಾಳದಿಂದ ಕುಲೂ ಕಣಿವೆಯವರೆಗೆ ಟೀ ಮುಖ್ಯ ಬೆಳೆಯಾಗಿದೆ. ಕುಲೂ ಕಣಿವೆ ಭಾರತದ ಹಣ್ಣಿನ ತೋಟವಾಗಿ, ಇಲ್ಲಿ ಬೆಳೆಯುವ ಸೇಬು ಕ್ಯಾಲಿಫೋರ್ನಿಯಾ ಸೇಬುಗಳಿಗಿಂತಲೂ ಹೆಸರುವಾಸಿಯಾಗಿವೆ. ಜೊತೆಗೆ ಇಲ್ಲಿ ದ್ವಿದಳಧಾನ್ಯ, ಆಲೂಗೆಡ್ಡೆಗಳೂ ಹೇರಳವಾಗಿ ಬೆಳೆಯುತ್ತವೆ. ಒಂದೇ ಸಮನೆ ಬೆಳವಣಿಗೆಯನ್ನು ಕಂಡ ಪ್ರದೇಶ ಡೆಹರಾಡೂನ್ ಕಣಿವೆ ಗಂಗಾ–ಯಮುನಾ ನದಿಗಳ ಮಧ್ಯೆ ೬೦ ಮೈಲಿ ಉದ್ದ ೨೦ ಮೈಲಿ ಅಗಲಕ್ಕೆ ಬೆಳೆದಿರುವ ಈ ಪ್ರದೇಶವನ್ನು ಸಂಪೂರ್ಣವಾಗಿ ಯುರೋಪಿಯನ್ನರ ವಸಾಹತುವನ್ನಾಗಿ ಮಾಡಬೇಕೆಂಬ–ಕಿನ್ಯಾಯದ ಎತ್ತರ ಪ್ರದೇಶಗಳಂತೆ–ಯೋಜನೆ ಸಲಹೆಯಾಗಿಯೇ ಉಳಿಯಿತು. ಸೆವ್ವಾಲಿಕ್ ಮತ್ತು ಹಿಮಾಲಯಗಳ ಮಧ್ಯೆ ಹರಡಿರುವ ಡೂನ್ ಕಣಿವೆ, ಹಿತಕರವಾದ ಹವಾಮಾನದಿಂದ ವಿವಿಧ ಬೆಳೆಗಳಿಂದ ಬೆಳವಣಿಗೆಗೆ ಅನುಕೂಲವಾದ ಪ್ರದೇಶವಾಗಿ ಬಿ.ಪಿ. ಫ್ರಾನ್ಸಿಸ್‌ನ ನೇರ ಆಡಳಿತಕ್ಕೆ ಒಳಗಾಗಿದ್ದರಿಂದ, ಬಹಳ ಬೇಗ ಬೆಳವಣಿಗೆಯನ್ನು ಹೊಂದಿತು. ರಸ್ತೆ, ರೈಲು ಸೌಕರ್ಯ ಒದಗಿದ ಮೇಲೆ ಇಲ್ಲಿ ೧೮೪೪ರಲ್ಲಿ ರೂರ್ಕಿ ಕಾಲೇಜು ಪ್ರಾರಂಭವಾಯಿತು. ಡೆಹರಾಡೂನ್ ಹೀಗೆ ವಿದ್ಯಾಕೇಂದ್ರವಾಯಿತು. ಇಲ್ಲಿ ಮಿಲಿಟರಿ ಅಕಾಡೆಮಿಯೂ ಸ್ಥಾಪಿತವಾಯಿತು. ಹಾಗೆಯೇ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಫಾರೆಸ್ಟ್ ರಿಸರ್ಚ್, ಡೂನ್ ಪಬ್ಲಿಕ್ ಸ್ಕೂಲ್ ಮತ್ತು ಅನೇಕ ಶಾಲೆಗಳು ಉತ್ತಮವಾದವಿದ್ದು ವಿದ್ಯಾದಾನ ಕೇಂದ್ರಗಳಾಗಿ ಬೆಳೆದುವು. ಹೀಗಾಗಿ ಡೂನ್ ಕಣಿವೆ ಸಂಸ್ಕೃತಿಯ, ವಿದ್ಯಾ ಬೆಳವಣಿಗೆಗೆ ಪ್ರಸಿದ್ಧವಾಯಿತು.

೧೯ನೇ ಶತಮಾನದಲ್ಲಿ ಹಿಮಾಲಯವು ವ್ಯವಸಾಯಕ್ಕೆ ನೀರುಣಿಸುವ ಮೂಲ ಸಂಪತ್ತಾಯಿತು. ಯಮುನಾ ನಾಲೆ ಹಾಗೂ ಸಟ್‌ಲೆಜ್ ಮತ್ತು ಇತರ ಪಂಜಾಬಿನ ನದಿಗಳನ್ನು ವ್ಯವಸಾಯಕ್ಕೆ ಬಳಸಲು ಪ್ರಾರಂಭವಾಗಿ, ಪಂಜಾಬ್ ಮತ್ತು ರಾಜಾಸ್ತಾನ ಮರಳು ಪ್ರದೇಶಗಳು, ಹಿಮಾಲಯದಿಂದ ಹರಿಯುವ ನದಿಗಳ

ಆಧಾರದ ಮೇಲೆ ನಿಂತವು.

ಸ್ವಾತಂತ್ರ್ಯಾನಂತರ ನಮಗೆ ಹಿಮಾಲಯದಲ್ಲಿ ಅಡಗಿರುವ, ಹೇಳಲಸದಳವಾದ, ವಿಪುಲ ಜಲರಾಶಿ, ವಿದ್ಯುಚ್ಛಕ್ತಿ ಮುಂತಾದ ಮೂಲಭೂತ ಸಂಪತ್ತು ಅಡಗಿರುವುದು ಗೊತ್ತಾದುದು. ಇಲ್ಲಿಯವರೆಗೂ ಎಲ್ಲವನ್ನೂ ನಾಶ ಮಾಡುತ್ತಿದ್ದ ನದೀ ಪ್ರವಾಹವನ್ನು ಹೇಗೆ ತಡೆಗಟ್ಟಿ, ಶಕ್ತಿ, ನೀರು ಗೊಬ್ಬರಗಳಾಗಿ ಪರಿವರ್ತಿಸಬಹುದು ಎಂಬಂಶ ವೇದ್ಯವಾದುದು. ನದಿಗಳಿಗೆ ಅಣೆಕಟ್ಟು ಕಟ್ಟಿ – ೧೫೦೦ ಅಡಿ ಎತ್ತರದಲ್ಲಿ ಕೋಸೀ ನದಿಗೆ ಕಟ್ಟಿರುವಂತೆ – ಮನುಷ್ಯನ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ಮಾಡಬಹುದು. ನೀರ್ಗಲ್ಲುಗಳನ್ನು ಇಲ್ಲಿಯವರೆಗೆ ಭಯ, ಗೌರವಗಳಿಂದ ಪೂಜಿಸಲ್ಪಡುತ್ತಿದ್ದ ಎತ್ತರದ ಬೆಟ್ಟಗಳನ್ನು ಮನುಷ್ಯನ ವಿವಿಧ ಉಪಯೋಗಗಳಿಗೆ ಬಳಸಬಹುದೆಂಬಂಶ ಗೊತ್ತಾದುದು.

೧೯ನೇ ಶತಮಾನದಲ್ಲಿ ಹಿಮಾಲಯದಲ್ಲಿ ನೀರನ್ನು ಹೆಚ್ಚಾಗಿ ಬಳಸುತ್ತಿರಲಿಲ್ಲ. ಜೋಗೇಂದ್ರ ನಗರದಲ್ಲಿ ೧೯೨೧ರಲ್ಲಿ ಸ್ಥಾಪಿಸಿದ ಮಂಡಿ ವಿದ್ಯುತ್ ಯೋಜನೆ ಈ ದೆಶೆಯಲ್ಲಿ ಮೊದಲನೆಯದು. ಸ್ವಾತಂತ್ರ್ಯ ಬಂದ ಮೇಲೆ ರೂಪುಗೊಂಡ ನಂಗಲ್, ಗಂಗಾ, ಕೋಸೀ ಅಣೆಕಟ್ಟು ಮುಂತಾದ ಯೋಜನೆಗಳಿಂದ ವಿದ್ಯುತ್ ಶಕ್ತಿಯನ್ನು ಉತ್ಪಾದಿಸಲಾಗುತ್ತಿದೆ – ಮುಖ್ಯವಾಗಿ.

ಹಿಮಾಲಯ ಪ್ರದೇಶದಲ್ಲಿ ಜನ ನೆಲಸಲು, ಅಭಿವೃದ್ಧಿಪಡಿಸಲು ಬೇಕಾದಷ್ಟು ಅವಕಾಶಗಳಿರುವುದು ಅನೇಕರಿಗೆ ಗೊತ್ತಿಲ್ಲ. ನಾಗಾಬೆಟ್ಟಗಳಿಂದ ಚಂಬಾವರೆಗಿನ ಪ್ರದೇಶದಲ್ಲಿ ಜನವಾಸ ವಿಸ್ತಾರ–ಸಾಂದ್ರತೆ ಅತಿ ಕಮ್ಮಿ. ಡೆಹರಾಡೂನ್ ಪ್ರದೇಶವನ್ನು ಬಿಟ್ಟರೆ ಬಾಕಿ ಈ ಪ್ರದೇಶಗಳ ಅಭಿವೃದ್ಧಿ ಕಡಮೆ. ಇದಕ್ಕೆ ಮುಖ್ಯ ಕಾರಣ, ಕಾಶ್ಮೀರದಿಂದ ತೆಹರಿವರೆಗಿನ ಪ್ರದೇಶದಲ್ಲಿ ಸಣ್ಣಪುಟ್ಟ ರಾಜರುಗಳು ಆಳುತ್ತಿದ್ದರು. ಇವರ ಹಕ್ಕುಗಳು ಬ್ರಿಟಿಷರಿಂದ ರಕ್ಷಿಸಲ್ಪಟ್ಟಿತ್ತು. ಹಾಗಾಗಿ ಗಂಗಾನದಿ ಪ್ರದೇಶದಲ್ಲಿ, ಆಗುತ್ತಿದ್ದ ಸ್ವರಾಜ್ಯಕ್ಕಾಗಿ ಆಂದೋಳನ ಈ ಪ್ರದೇಶಗಳಿಗೆ ಹರಡುವುದು ಈ ಸಣ್ಣಪುಟ್ಟ ರಾಜರಿಗೆ ಹಿಡಿಸಲಿಲ್ಲ. ಎಲ್ಲಿ ಈ ಪ್ರದೇಶಗಳು ತಮ್ಮ ಕೈಬಿಟ್ಟು ಹೋಗುವುದೋ ಎಂದು ಆತಂಕವಾಗಿತ್ತು. ಹೀಗಾಗಿ ಈ ರಾಜ್ಯಗಳು ಅಭಿವೃದ್ಧಿ ಕಾಣಲಿಲ್ಲ.

ಸ್ವಾತಂತ್ರ್ಯ ಬಂದ ಮೇಲೆ ರಾಜ್ಯಗಳ ಏಕೀಕರಣವಾಗಿ ಇದೆಲ್ಲಾ ಬದಲಾಗಿದೆ. ಶಿಮ್ಲಾ ಸುತ್ತಮುತ್ತಲಿನ ರಾಜ್ಯಗಳನ್ನೆಲ್ಲಾ ಒಂದುಗೂಡಿಸಿ ಹಿಮಾಚಲವೆಂಬ ಹೊಸರಾಜ್ಯ ಅಸ್ತಿತ್ವಕ್ಕೆ ಬಂತು. ಒಬ್ಬ ಉಪರಾಜ್ಯಪಾಲರ ಆಳ್ವಿಕೆಯಲ್ಲಿ, ಈಗ ಪಂಜಾಬ್ ಮತ್ತು ಹರ್ಯಾಣ ರಾಜ್ಯಗಳಲ್ಲಿ ಇವೆಲ್ಲಾ ಸೇರಿಹೋಗಿವೆ. ಈ ಪ್ರದೇಶಗಳನ್ನು ಸರಿಯಾಗಿ ಅಭಿವೃದ್ಧಿಪಡಿಸಿದರೆ ದೇಶದ ಆರ್ಥಿಕ ವಲಯಗಳಲ್ಲೊಂದು ಪ್ರಮುಖ ಪಾತ್ರವನ್ನು ನಿರ್ವಹಿಸುತ್ತದೆ. ೧೯೩೬–೩೭ರಲ್ಲಿ ಪಾಟಿಯಾಲಾ ಮಹಾರಾಜನು ಅಮೆರಿಕ ತಜ್ಞನೊಬ್ಬನನ್ನು ಈ ಪ್ರದೇಶದ ಸಬ್‌ಟ್ರಾಪಿಕಲ್ ಹಣ್ಣುಗಳ ಬೆಳೆಗಳ

ವಿಚಾರವಾಗಿ ಸಂಶೋಧನೆ ಮಾಡಲು ನೇಮಿಸಿದನು. ಆ ವರದಿಯ ಪ್ರಕಾರ ಕ್ಯಾಲಿಫೋರ್ನಿಯಾದಲ್ಲಿ ಬೆಳೆಯುವ ಎಲ್ಲಾ ಹಣ್ಣುಗಳನ್ನು ಇಲ್ಲಿ ಬೆಳೆಯಬಹುದೆಂಬ ಸಂಗತಿ ತಿಳಿಯಿತು. ಹಿಮಾಚಲ ಪ್ರದೇಶದ ಕಣಿವೆಗಳು ಪಾಟಿಯಾಲ ಹತ್ತಿರದ ಕೋಹಿಸ್ಥಾನ್ ಪ್ರದೇಶಕ್ಕಿಂತ ರುಚಿಯಾದ ದ್ರಾಕ್ಷಿ, ಪೀಚ್, ಪೆಯಸ್ ಬೆಳೆಗಳಿಗೆ ಉತ್ತಮವಾಗಿದೆ. ಆದರೆ ಬುಷಿತ್ ರಾಂಪುರ ಪ್ರದೇಶದ ಬೆಳೆಗಳು ಕೊಳ್ಳುವವರಿಲ್ಲದೆ ನಷ್ಟವಾಗುತ್ತಿವೆ. ಕಾರಣ ಈ ಭಾಗಗಳು ಅಭೇದ್ಯ. ಇಲ್ಲಿ ರೇಷ್ಮೆ ಹುಳುಗಳನ್ನು ಸಾಕಬಹುದು.

ರಾಜ್ಯಗಳ ಏಕೀಕರಣವಾದ ಮೇಲೆ ಈ ಪ್ರದೇಶಕ್ಕೆ ರಸ್ತೆ, ರೈಲು ಮಾರ್ಗಗಳಾದರೆ, ವೈಜ್ಞಾನಿಕ ನೀರಾವರಿ ವ್ಯವಸ್ಥೆಯಾದರೆ, ಚಳಿ ಪ್ರದೇಶವಾದರೂ ಈ ಭಾಗ ಮುಂದೆ ಬರುವುದರಲ್ಲಿ ಸಂಶಯವಿಲ್ಲ. (ಈಚೆಗೆ ಇದೆಲ್ಲಾ ಆಗಿದೆ).

ಘೂರ್ಖಾ ರಾಜ್ಯದ ದಕ್ಷಿಣಕ್ಕಿರುವ ತೆರೈ ಪ್ರಾಂತವೂ ಈಗ ಜನಸಂಚಾರವನ್ನು ಕಾಣುತ್ತಿದೆ. ಬೇಟೆಗಾರರಿಗೆ ಮೀಸಲಾಗಿದ್ದ ಈ ಜಾಗ ಈಗ ಸೆಣಬು ಬೆಳೆಯುವ ಪ್ರದೇಶ ಬೇರೆಯಾದ ಮೇಲೆ, ಪೂರ್ವ ಬಂಗಾಳ ಕೈಗಾರಿಕಾಭಿವೃದ್ಧಿ ಪ್ರದೇಶವಾಗಿದೆ. ಹಾಗೆ ಪಂಜಾಬಿನಿಂದ ಬಂದ ನಿರಾಶ್ರಿತರಿಗೆ ಈ ತೆರೈ ಪ್ರದೇಶ ಪುನರ್ವಸತಿಗೆ ಅನುಕೂಲವಾಗಿದೆ.

ಮುಂದಿನ ಕಾಲು ಶತಮಾನದಲ್ಲಿ ಭೂತಾನ್ ಮತ್ತು ಸಿಕ್ಕಿಂಗಳಿಂದ ದಕ್ಷಿಣ ಪ್ರದೇಶ, ಮೆಕ್‌ಮೋಹನ್ ರೇಖೆಯ ಹಿಂಭಾಗ ಪ್ರದೇಶಗಳು ಅಭಿವೃದ್ಧಿಗಾಗಿ ಕಾದಿವೆ. ಇಲ್ಲಿಯವರೆಗೂ ಅನಾದರಣೆಗೆ ಗುರಿಯಾಗಿದ್ದ ಈ ಪ್ರದೇಶ ಈಗೀಗ ಆಯಕಟ್ಟಿನ ಜಾಗಗಳಾಗಿ ಚಾರಿತ್ರಿಕವಾಗಿ ಪ್ರಾಮುಖ್ಯತೆ ಪಡೆಯುತ್ತಿವೆ. ಮುಂದೆ ತಿಳಿಸುವಂತೆ ಈ ಪ್ರದೇಶಗಳು ಚಾರಿತ್ರಿಕವಾಗಿ ಹೆಚ್ಚು ಹೆಚ್ಚು ಪ್ರಾಮುಖ್ಯತೆ ಪಡೆಯುವುದರಿಂದ, ಇದು ರಸ್ತೆ, ಸೇತುವೆಗಳ ಆಗರವಾಗಲಿದೆ. ಇಲ್ಲಿಯವರೆಗೂ ಈ ಪ್ರಾಂತ್ಯ ಕಲಬೆರಕೆ ಬುಡಕಟ್ಟುಗಳ ವಾಸಸ್ಥಾನವಾಗಿ ಗಡೀ ಪ್ರದೇಶವಾಗಿತ್ತು. ಇತ್ತೀಚೆಗೆ ಭಾರತದೊಡನೆ ಹೆಚ್ಚು ಹೆಚ್ಚು ಸಂಪರ್ಕಹೊಂದಿ, ವಿದ್ಯಾಭ್ಯಾಸ, ವ್ಯಾಪಾರ ಮತ್ತು ಆರ್ಥಿಕವಾಗಿ ಮುಂದುವರೆಯುವ ಸಾಧ್ಯತೆ ಹೆಚ್ಚಾಗುತ್ತಿದೆ. ಹಾಗೂ ವಸಾಹತುಗಳಾಗುವ ಸಾಧ್ಯತೆಗಳೂ ಎದ್ದು ಕಾಣುತ್ತಿದೆ. ಮುಂದಿನ ಕೆಲವು ವರ್ಷಗಳಲ್ಲಿ ಈ ಕಣಿವೆಯು ಅಭಿವೃದ್ಧಿ ಕಾರ್ಯಗಳ ಬೆಳವಣಿಗೆಗೆ ಬುನಾದಿಯಾಗುತ್ತದೆಂದು ಭವಿಷ್ಯ ನುಡಿಯಬಹುದು.

ಹಿಮಾಲಯಗಳು ಭಾರತದ ಚರಿತ್ರೆಯನ್ನು ರೂಪಿಸುವುದರಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತಿವೆ. ಹೀಗೆ ಇದು ಭಾರತಕ್ಕೆ ಉತ್ತರ ಪೂರ್ವ ಪಶ್ಚಿಮ ದೇಶಗಳೊಡನೆ ಸಂಪರ್ಕಕ್ಕೆ ತಡೆಗೋಡೆಯಾಗಿತ್ತು ಹಾಗೂ ರಕ್ಷಣಾ ಕೋಟೆಯಾಗಿತ್ತು. ಇದರ ಉತ್ತರಕ್ಕೆ ಇರುವ ಟಿಬೆಟ್ಟಿನ ಆಚೆಗಿನ ಪ್ರದೇಶಗಳೂ, ಬಂಜರುಭೂಮಿಗಳೆಂದರೆ ಜನರ ತಿಳಿವಳಿಕೆಯಾಗಿತ್ತು. ಚೀನಾ ಸಾಮ್ರಾಜ್ಯ ಭಾರತದಿಂದ ಬೇರ್ಪಟ್ಟ

ಪ್ರದೇಶವಾಗಿತ್ತು. ಯಾವ ಸಂಪರ್ಕಗಳೂ ಇಲ್ಲದೆ ಟಿಬೆಟ್ಟಿನ ಉತ್ತರದಲ್ಲಿ ಆಗುತ್ತಿದ್ದ ಯಾವ ಘಟನೆಗಳೂ ಭಾರತದ ಮೇಲೆ ಪರಿಣಾಮ ಬೀರುತ್ತಿರಲಿಲ್ಲ ಹಿಂದೆ.

ಸಮುದ್ರಗಳು ವ್ಯಾಪಾರ ಸಂಪರ್ಕಗಳ ರಾಜಮಾರ್ಗಗಳಾಗಿದ್ದು, ವಿದೇಶಗಳೊಡನೆ ವ್ಯಾಪಾರ ವ್ಯವಹಾರ ನಡೆದಿದ್ದರೂ ಭಾರತವನ್ನು ನಿಯಂತ್ರಣದಲ್ಲಿಟ್ಟಿದ್ದುವು–ಹೊರಸಂಪರ್ಕದಿಂದ. ಆದರೆ ಹಿಮಾಲಯ ಪರ್ವತ ದಾಟಲಸಾಧ್ಯವಾದ ಗೋಡೆಯಾಗಿತ್ತಾದ್ದರಿಂದ ದೂರವಾಗಿ ಭಾರತ ತನ್ನ ಒಳಚಿಂತನೆಯಲ್ಲೇ ಉಳಿಯಿತು. ವಿದೇಶಗಳ ಆಗುಹೋಗುಗಳು ಒಂದು ವಿಧದಲ್ಲಿ ವದಂತಿಗಳಾಗಿ ದೇಶದ ಮೇಲೆ ಯಾವ ಪರಿಣಾಮವನ್ನು ಬೀರದೆ ಹಾಗೇ ಉಳಿದುವು.

ಸಾಂಸ್ಕೃತಿಕ ಸಂಬಂಧಗಳು ದೇಶದೇಶಗಳ ನಡುವೆ ಸ್ನೇಹ ಸಂಬಂಧ ಬೆಳಸುತ್ತವೆ. ಇತರರ ಆಚಾರ–ವಿಚಾರಗಳ ವಿನಿಮಯದಿಂದ–ಸಾಂಸ್ಕೃತಿಕವಾಗಿ ಸಹಬಾಳ್ವೆ ಮಾಡಲು ಸಹಕಾರಿಯಾಗುತ್ತವೆ, ಸಾಂಸ್ಕೃತಿಕ ವಿನಿಮಯವಾಗುತ್ತದೆ. ಬದಲಾವಣೆಗಳಿಗೆ ಹೊಂದಿಕೊಳ್ಳುವಂತಾಗುತ್ತದೆ. ಆದರೆ ಭಾರತ ಇವೆಲ್ಲದರಿಂದ ಹೊರಗೇ ಉಳಿಯಿತು. ಚೀನದ ಬೆಳವಣಿಗೆ ಭಾರತೀಯರಿಗೆ ಒಂದು ಅಗೋಚರ ಸಂಗತಿಯಾಗಿಯೇ ಉಳಿಯಿತು. ಇಂದಿಗೂ ಅದೇ ಸ್ಥಿತಿ – ಹೊರಗಿನವರಾಗೇ ಉಳಿದರು. ಹೀಗಾಗಿ ಭಾರತದ ಸಂಪರ್ಕ ಪಶ್ಚಿಮ ರಾಷ್ಟ್ರಗಳಾದ ಗಾಂಧಾರ, ಪರ್ಷಿಯಾ ಮತ್ತು ಅರಬ್ ರಾಷ್ಟ್ರಗಳಿಗೆ ಸೀಮಿತವಾಯಿತು. ಕ್ರಿ.ಶ. ೬೩೭ರಲ್ಲಿ ಟಿಬೆಟ್ಟಿನ ಮೂಲಕ ಚೀನೀ ಸೇನಾಪತಿಯೊಬ್ಬನು ತಿರ್‌ಹಟ್ ಸುತ್ತಮುತ್ತಲಿನ ಪ್ರದೇಶದ ಮೇಲೆ ದಂಡಯಾತ್ರೆ ಮಾಡಿದ ಒಂದಂಶವನ್ನು ಬಿಟ್ಟರೆ ಉತ್ತರದಿಂದ ಬೇರಾವ ಸೈನಿಕಾಚರಣೆಯಾಗಲಿ ಆಕ್ರಮಣವಾಗಲಿ ನಡೆಯಲಿಲ್ಲ. (೧೯೬೧ರವರೆಗೆ).

ಹಿಂದೂಗಳನ್ನು, ಹಿಂದುತ್ವವನ್ನು ಹಿಮಾಲಯ ಪರ್ವತಗಳು ರಕ್ಷಿಸುತ್ತಿರುವುದು ನಿಜವಾದರೂ, ಇದರಿಂದ ಕೆಲವು ಅನಾನುಕೂಲಗಳೂ ಆಗಿವೆ. ಈ ಪ್ರತ್ಯೇಕೀಕರಣ ಹೊರಗಿನವರನ್ನು ತಿರಸ್ಕಾರ ಭಾವದಿಂದ ನೋಡುವಂತೆ ಆಗಿದೆ. ಹಿಂದೂಗಳಿಗೆ ಪ್ರಪಂಚದ ಉಳಿದಾವ ಭಾಗವೂ ಗಮನಕ್ಕೇ ಬರಲಿಲ್ಲ. ಅದಾವುವೂ ಇಲ್ಲವೇ ಇಲ್ಲ ಎಂಬ ಭಾವ. ಇದರಿಂದಾಗಿ ತಾವು ಸದಾ ಸುರಕ್ಷಿತರು ಎಂಬ ದೃಢ ನಂಬಿಕೆ ಬೆಳೆಯಿತು. ಮ್ಯಾಜಿನೋ ಮನೋಭಾವ – ಹೀಗಾಗಿ ದಾಳಿಗಳೂ ನಡೆದಾಗ ಅವರಿಗೆ ಅಚ್ಚರಿಯಾದುದು ಸ್ವಾಭಾವಿಕ. ಬೇರೆ ದೇಶಗಳ ನಿರ್ಧಾರಕ ಕದನಗಳು ದೇಶದ ಹೊರಗೆ ನಡೆಯಿತು–ಉದಾ: ಜಾಪನೀಸ್, ಲೀಪ್‌ನಿಕ್, ವಾಟರ್‌ಲೂ ಮುಂತಾದುವು. ಆದರೆ ಭಾರತದಲ್ಲಿ ದೇಶದ ಮಧ್ಯದಲ್ಲಿರುವ ಪಾಣಿಪಟ್ಟಿನಲ್ಲಿ ಈ ಕದನ ನಡೆಯಿತು. ಇದಕ್ಕೆ ಕಾರಣ ಮುಖ್ಯವಾಗಿ ಭಾರತದ ಜನ ದಂಡಯಾತ್ರೆಗಳಿಗೆ ಸಿದ್ಧವಾಗಿರಲಿಲ್ಲ. ದಂಡಯಾತ್ರೆಗಳು ನಡೆಯುವುದೇ ಇಲ್ಲ ಎಂದು ಅವರು ನಂಬಿದ್ದರು. ಹಿಂದೂಕುಷ್ ಕಡೆಯಿಂದ ಪಂಜಾಬಿನ ಮೂಲಕ ವಿದೇಶದ ಸೈನ್ಯಪಡೆ ದೇಶದೊಳಕ್ಕೆ

ನುಗ್ಗಿದಾಗ ಇಲ್ಲಿನ ಜನ ಎಚ್ಚೆತ್ತರು; ರಕ್ಷಣೆಗೆ ಸನ್ನದ್ಧರಾಗಲು ಪ್ರಾರಂಭಿಸಿದರು. ಈ 'ಮ್ಯಾಜಿನೋ ಗೆರೆ' ಮನೋಭಾವ ನಮ್ಮನ್ನು ನಿದ್ದೆ ಮಾಡುವಂತೆ ಮಾಡಿತು. ಎಚ್ಚೆತ್ತದ್ದು ಹೊರರಾಷ್ಟ್ರಗಳು ದೇಶದೊಳಕ್ಕೆ ನುಗ್ಗಿದಾಗಲೇ. ಮೂರನೆಯದಾಗಿ ಭಾರತ ಅಂತರರಾಷ್ಟ್ರೀಯ ವ್ಯವಹಾರಗಳನ್ನು ಕ್ರೋಢೀಕರಿಸಲಿಲ್ಲ. ಪಕ್ಕದ ರಾಜ್ಯವಾದ ಆಫ್ಘಾನೀಸ್ತಾನ ಎಂದೂ ಒಂದು ರಾಷ್ಟ್ರವಾಗಿರದಿದ್ದರೂ ಅದರೊಡನೆ ನಮ್ಮ ಸಂಬಂಧ ಹೇಳಿಕೊಳ್ಳುವಂತಹದಾಗಿರಲಿಲ್ಲ. ಪರ್ಷಿಯಾದೊಡನೆ ಕೂಡ ನಮ್ಮ ಸಂಬಂಧ ಸುಭದ್ರವಾಗಿರಲಿಲ್ಲ. ಚೀನಾ ಜೊತೆಗಂತೂ ಇರಲೇ ಇಲ್ಲ. ಹೀಗಾಗಿ ನಮ್ಮ ದೇಶವು ಚೀನಾದೇಶ ತನ್ನ ಅಕ್ಕಪಕ್ಕದ ಅಷ್ಟು ಮಿತ್ರರಲ್ಲದ ರಾಜ್ಯಗಳೊಡನೆ ಬೆಳೆಸಿದ ರಾಜನೀತಿ ತಂತ್ರವನ್ನು ಬೆಳಸಿಕೊಳ್ಳಲೇ ಇಲ್ಲ. ಚೀನ ತನ್ನ ಅಂತರ್ರಾಷ್ಟ್ರೀಯ ಬಿರುಗಾಳಿಗೆ ಸಿಕ್ಕಿ ಪ್ರಾರಂಭದಿಂದಲೂ ಗ್ರೀಸ್, ರೋಮ್ ಮತ್ತು ಬೈಜಾಂಟೈನ್‌ಗಳೊಡನಾಟದಲ್ಲಿ ನಿಸ್ಸೀಮವಾಗಿತ್ತು. ಹತ್ತರಲ್ಲಿ ನಾವೂ ಒಬ್ಬರು ಎಂಬ ರಾಜಕೀಯ ಭಾವ ಭಾರತದಲ್ಲಿ ಬೆಳೆಯಲೇ ಇಲ್ಲ. ಭರತವರ್ಷವನ್ನು ಗೆದ್ದು ಚಕ್ರಾಧಿಪತಿ ಎನಿಸಿಕೊಳ್ಳುವುದೊಂದೇ ನಮ್ಮ ದೇಶದ ರಾಜರುಗಳ ಗುರಿಯಾಗಿತ್ತು. ಅವರ ಗಮನ ದೇಶದ ಹೊರಗೆ ಹೋಗಲೇ ಇಲ್ಲ. ಹೊರರಾಜ್ಯಗಳೊಡನೆ ಸಂಪರ್ಕವನ್ನು ಸ್ಥಾಯಿಯಾಗಿ ಎಂದೂ ದೇಶ ಹೊಂದಲಿಲ್ಲ.

ಹಿಮಾಲಯ ಅಡ್ಡಗೋಡೆಗಳು ಉತ್ತರದಿಂದ ಬರಬಹುದಾದ ಆಕ್ರಮಣಗಳಿಂದ ನಮ್ಮನ್ನು ರಕ್ಷಿಸಿದುದು ನಿಜವಾದರೂ, ದಿನದಿಂದ ದಿನಕ್ಕೆ ಹೆಚ್ಚು ದೂರ, ಎತ್ತರಗಳಿಗೆ ಹಾರುವ ವಿಮಾನಗಳು ಬಂದ ಮೇಲೆ, ನಮ್ಮ ಸುತ್ತಮುತ್ತಲಿನ ರಾಜ್ಯಗಳಲ್ಲಿ ವಿಪ್ಲವಗಳಾಗುತ್ತಿರುವಾಗ, ನಾವು ಇನ್ನೆಷ್ಟು ದಿನ ಹಿಮಾಲಯವನ್ನು ನೆಚ್ಚಿಕೊಂಡು ಕೂತಿರಲು ಸಾಧ್ಯ? ರಕ್ಷಣೆಯಲ್ಲದೆ ಬೇರೆ ಏನಾದರೂ ಉಪಯೋಗಗಳಿವೆಯೇ ಈ ಪರ್ವತಗಳಿಂದ ಎಂದು ಯೋಚಿಸಬೇಕಾಗಿದೆ.

ವಾಯುಸೈನ್ಯವು ಚಾಲ್ತಿಗೆ ಬಂದ ಮೇಲೆ ತಡೆಗಟ್ಟೆಯ ವಿಚಾರವಾಗಿ ಯೋಚಿಸಬೇಕಾಗಿದೆ. ನಮ್ಮ ದೇಶದ ರಕ್ಷಣಾ ವ್ಯವಸ್ಥೆಯಲ್ಲಿ, ವಾಯುಶಕ್ತಿಯು ಹೆಚ್ಚಳಿಕೆಯನ್ನು ಮಾಡಬೇಕಾಗಿದೆ. ವಾಯುಪಡೆಯ ದೃಷ್ಟಿಯಲ್ಲಿ ಒಂದು ನದಿ ಕೊಡುವ ರಕ್ಷಣೆಯು ಎಷ್ಟೇ ಸ್ವಾಭಾವಿಕವಾದರೂ, ಅಪ್ರಯೋಜಕ. ನಮ್ಮ ರಕ್ಷಣೆಯ ವಿಚಾರವಾಗಿ ನಾವು ಸ್ವಾಭಾವಿಕ ಸಮುದ್ರ, ಪರ್ವತಮಾಲೆಯ ರಕ್ಷಣೆಯನ್ನು ಬದಿಗಿಟ್ಟು ಯೋಚಿಸಬೇಕು. ವಿಮಾನ ನಾವಿಕನ ಮಾನದಂಡದಿಂದ, ನಾವು ಭೌಗೋಳಿಕ ಲಕ್ಷಣಗಳನ್ನು ಅಳೆಯಬೇಕಾಗುತ್ತದೆ. ಸಮುದ್ರಾಧಾರಿತ ಭೌಗೋಳಿಕ ವಿದ್ಯಮಾನಗಳನ್ನು ಪುನಃ ಪರಿಶೀಲಿಸಬೇಕಾಗುತ್ತದೆ.

ಈ ಬದಲಾದ ಸನ್ನಿವೇಶದಲ್ಲಿ ೧೫೦೦ ಮೈಲಿ ಅಗಲವಿರುವ (ಟಿಬೆಟ್ ಮೈದಾನವನ್ನು ಬಿಟ್ಟು) ಹಿಮಾಲಯ ಪ್ರದೇಶದ ಎತ್ತರವಾದ ಪರ್ವತ ಶ್ರೇಣಿಗಳಿಂದ ಕೂಡಿದ್ದರೂ, ಈ ವಿಮಾನ ಯುಗದಲ್ಲಿ ಪ್ರಯೋಜನಕಾರಿಯಾದ ರಕ್ಷಣಾ

ಗೋಡೆಯಾಗಿ ನಿಂತಿಲ್ಲ. ಆದರೆ ಈ ಪರ್ವತಗಳಂತೆ ಹರಡಿರುವ ೧೫,೦೦೦ ಅಡಿ ಎತ್ತರವಾದ ಮಟ್ಟಸವಾದ ಬಂಜರು ಭೂಮಿ ಒಂದು ವಿಧದಲ್ಲಿ ರಕ್ಷಣೆ ಕೊಡುತ್ತದೆ. ಈ ಬಂಜರು ಭೂಪ್ರದೇಶದಲ್ಲಿ ಯಾವ ಪ್ರಬಲವಾದ ಸಾಮ್ರಾಜ್ಯವನ್ನೂ ಶಾಶ್ವತವಾಗಿ ಕಟ್ಟಲಾಗುವುದಿಲ್ಲ. ಆದರೂ ಒಂದು ವಿಧದಲ್ಲಿ ಈ ಅತಿ ಉದ್ದವಾದ ಪರ್ವತ ಪ್ರದೇಶ ಮಾನವರು ನಿರ್ಮಿಸಲಾರದ ಅಗಾಧ ರಕ್ಷಣಾ ವ್ಯವಸ್ಥೆಯಾಗಿದೆ. ಆದರೂ ಯಾವುದಾದರೊಂದು ಪ್ರಬಲ ರಾಷ್ಟ್ರವು ಮನಸ್ಸು ಮಾಡಿದರೆ ಈ ಅಭೇದ್ಯ ಪ್ರದೇಶ ಭೇದ್ಯವಾಗುತ್ತದೆ. ಹಿಂದೂಕುಶ್ ಪರ್ವತ ಶ್ರೇಣಿ ಒಂದು ವಿಧದಲ್ಲಿ ರಕ್ಷಣೆ ಕೊಟ್ಟರೂ ಬಲವಾದ ರಾಜಕೀಯ ಶಕ್ತಿಯೊಂದು ಆಫ್ಘಾನಿಸ್ಥಾನ ಅಥವಾ ಮಧ್ಯ ಏಷ್ಯಾದಲ್ಲಿ ಸಂಘಟಿತವಾದಾಗಲೆಲ್ಲಾ, ಈ ಪರ್ವತಗಳು ತಮ್ಮ ರಕ್ಷಣಾ ಶಕ್ತಿಯನ್ನು ಕಳೆದುಕೊಂಡಿವೆ. ಹೀಗೇ ಹಿಮಾಲಯ ಪರ್ವತ ಪ್ರದೇಶವೂ ಶಕ್ತಿಶಾಲಿ ರಾಷ್ಟ್ರ ಒಂದು ಮನಸ್ಸು ಮಾಡಿದರೆ (೧೯೬೧ರಲ್ಲಿ ಆದ ಹಾಗೆ) ನುಗ್ಗಲಸಾಧ್ಯವಾದುದೇನೂ ಅಲ್ಲ. ಇಲ್ಲಿಯವರೆಗೂ ಯಾವ ರಾಷ್ಟ್ರವೂ ಈ ಹೆದರಿಕೆಯನ್ನುಂಟುಮಾಡುವ ಪ್ರದೇಶದ ಮುಖಾಂತರ ದಂಡೆತ್ತಿ ಬಂದಿಲ್ಲವೇಕೆಂದರೆ ಟಿಬೆಟ್ ಒಂದು ಬಲಶಾಲಿ ರಾಜ್ಯವಾಗಿ ಸಂಘಟಿತವಾಗಿರಲಿಲ್ಲ. ಹಾಗೇನಾದರೂ ಆಗಿದ್ದರೆ ಇಲ್ಲಿರುವ ಅನೇಕಾನೇಕ ಕಣಿವೆಗಳ ಮುಖಾಂತರ ನಮ್ಮ ದೇಶದ ಮೇಲೆ ದಾಳಿ ನಡೆಯುತ್ತಿತ್ತು.

ಚೀನೀಯರು ಟಿಬೆಟ್‌ನಲ್ಲಿ ಬಲಶಾಲಿಗಳಾದ ಮೇಲೆ ಆಕ್ರಮಣಕಾರಿ ಸೈನ್ಯ ವ್ಯವಸ್ಥೆಯನ್ನು ಇಲ್ಲಿಯವರೆಗೆ ಮಾಡಲಾಗಿಲ್ಲ ಎಂದೂ ಅವರು ಮುಂದೆ ಹಾಗೆ ಮಾಡುವುದಿಲ್ಲ ಎಂದೂ ನಂಬಲಾಗುವುದಿಲ್ಲ. ಸುವ್ಯವಸ್ಥಿತವಾಗಿ ರೂಪುಗೊಂಡ ಟಿಬೆಟ್ ಹಿಮಾಲಯ ಪ್ರದೇಶದ ಚರಿತ್ರೆಯನ್ನು ಬದಲಾಯಿಸುವುದಲ್ಲದೇ ಅಕ್ಕಪಕ್ಕ ರಾಜ್ಯಗಳಿಗೂ ಭಯಭೀತಿ ಹುಟ್ಟಿಸುವ ಕಾಲ ಬರಬಹುದು (ಈಗ ಬಂದೇ ಇದೆ). ಆದರೆ ಸತ್ತಂತೆ ಮಲಗಿರುವ ಈ ಹಿಮಾಲಯ ಪರ್ವತಗಳು ಮುಂದೆ ನಮ್ಮ ರಕ್ಷಣೆಗೆ ಬರುತ್ತವೆ ಎಂದು ನಂಬಿ ಕುಳಿತಿರಲಾಗದು.

ಭವಿಷ್ಯತ್ ಕಾಲದಲ್ಲಿ ಈ ರಣಭೀಭತ್ಸ ಪರ್ವತ ಶ್ರೇಣಿಗಳು ರಾಜಕೀಯವಾಗಿ, ಆರ್ಥಿಕವಾಗಿ ಪ್ರಪಂಚದ ಗಮನ ಸೆಳೆಯುವುದು ಖಚಿತ. ಭಾರತದೇಶದ ಹಿತರಕ್ಷಣೆಯಲ್ಲಿ ಈಗಿನಿಂದಲೇ ಈ ಹಿಮಾಲಯ ಪ್ರದೇಶದ ಭೂಗೋಳ, ಭೂವಿಜ್ಞಾನ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ ಮತ್ತು ಹವಾಮಾನಗಳ ಸಂಶೋಧನೆಗೆ ನಾವು ಮುಂದಾಗಬೇಕು.

* * * *

ಅಧ್ಯಾಯ ೪

ಸಮುದ್ರ

ಹಿಮಾಲಯಗಳನ್ನು ಬಿಟ್ಟರೆ, ಬೇರೆ ಯಾವ ಭೌಗೋಳಿಕ ಅಂಶವೂ ನಮ್ಮ ಚರಿತ್ರೆಯ ಮೇಲೆ ಮಾಡದಷ್ಟು ಪರಿಣಾಮವನ್ನು ಹಿಂದೂ ಮಹಾಸಾಗರ ಮಾಡಿದೆ. ಮೂರು ಕಡೆಗಳಿಂದ ದೇಶವನ್ನು ಬಳಸಿರುವ ಈ ಸಮುದ್ರ ಮಾಡಿರುವ ಪರಿಣಾಮಗಳು ಹೀಗಿವೆ: ಹಿಂದೂಮಹಾಸಾಗರ ತೀರವನ್ನು ಬಿಟ್ಟರೆ ಬೇರೆಲ್ಲೂ ಬಂದರುಗಳಿಲ್ಲ. ಸುಮಾರು ಶೇಕಡ ೮೫ ರಷ್ಟು ವ್ಯಾಪಾರವು ಸಮುದ್ರದ ಮೇಲಿನಿಂದಲೇ ಬರುತ್ತವೆ. ಇತರ ದೇಶಗಳೊಳಗಿನ ವ್ಯವಹಾರಗಳೆಲ್ಲಾ ಮುಖ್ಯವಾಗಿ ಸಮುದ್ರದ ಮೇಲೆ ನಡೆಯುತ್ತದೆ. ಇತ್ತೀಚೆಗೆ ವಾಯುಮಾರ್ಗವಾಗಿಯೂ ಕೆಲವು ಸಂವಹನಗಳು ನಡೆಯುತ್ತಿವೆ. ಒಳದೇಶದ ಹೆಚ್ಚು ವ್ಯಾಪಾರವು ಸಣ್ಣ ಸಣ್ಣ ಹಡಗುಗಳಲ್ಲಿ ಬಂದರಿನಿಂದ ಬಂದರಿನ ಮೂಲಕ ಸಾಗುತ್ತದೆ. ಭಾರತದ ದಖಿನ್ ಪ್ರಸ್ಥಭೂಮಿಯ ಚರಿತ್ರೆ ಮೊದಲಿನಿಂದಲೂ ಈ ಸಾಗರದೊಂದಿಗೆ ಹೊಂದಿಕೊಂಡಿವೆ.

ಪ್ರಪಂಚದ ಸಾಗರಗಳಲ್ಲಿ ಹಿಂದೂ ಸಾಗರವು ಹೆಚ್ಚು ಭೂಪ್ರದೇಶದಿಂದ ಆವೃತವಾಗಿದೆ. ಹೆಚ್ಚು ಖಾರಿ, ಕೊಲ್ಲಿಗಳಿಂದ ಕೂಡಿದೆ. ಆಫ್ರಿಕಾಖಂಡ, ದಕ್ಷಿಣಕ್ಕೆ ಬರ್ಮಾ, ಮಲೇಷಿಯಾ ಮತ್ತು ದ್ವೀಪ ಲಕ್ಷಣಗಳುಳ್ಳ ಅನೇಕಾನೇಕ ಭೂಭಾಗಗಳು ಪೂರ್ವಕ್ಕೆ, ದಕ್ಷಿಣ ಏಷ್ಯಾ ಉತ್ತರಕ್ಕೆ ಛಾವಣಿ ಇದ್ದಂತೆ ಈ ಸಮುದ್ರವನ್ನು ಸುತ್ತುವರಿದು ಕಾಪಾಡುತ್ತಿವೆ. ಬಹು ಮುಖ್ಯ ಸಂಗತಿ ಎಂದರೆ ಸಾವಿರ ಮೈಲಿಗಳವರೆಗೂ ಈ ಸಮುದ್ರದಲ್ಲಿ ಚಾಚಿಕೊಂಡಿರುವ ದಖಿನ್ ಪ್ರಸ್ಥಭೂಮಿ ಒಂದು ವಿಶೇಷ. ಭಾರತದ ಭೌಗೋಳಿಕ ಸನ್ನಿವೇಶ ಈ ಸಮುದ್ರದ ಸ್ವಭಾವವನ್ನು ನಿರ್ಧರಿಸಿದೆ.

ಬೇರೆ ಸಾಗರಗಳಿಗೆ ಹೋಲಿಸಿದರೆ ಈ ಸ್ವಭಾವವು ಎದ್ದು ಕಾಣುತ್ತದೆ. ಉತ್ತರ ಮತ್ತು ದಕ್ಷಿಣ ಧ್ರುವದ ವಿಭಾಗಗಳು ಜನಾವರಿತ ಪ್ರದೇಶಗಳೊಂದಿಗೆ ಹೆಚ್ಚಿನ ಸಂಬಂಧ ಹೊಂದಿಲ್ಲ. ಪೆಸಿಫಿಕ್ ಮತ್ತು ಅಟ್ಲಾಂಟಿಕ್‌ಗೆ ಸಾಗರಗಳು ಉತ್ತರದಿಂದ ದಕ್ಷಿಣಕ್ಕೆ ಸಾಗುವ ಹೆದ್ದಾರಿಗಳಾಗಿವೆ. ಅವುಗಳಿಗೆ ಭೂಛಾವಣಿ ಇಲ್ಲ. ನೀರಿನಲ್ಲಿ ಚಾಚಿರುವ ಹೆಚ್ಚು ಭೂಪ್ರದೇಶಗಳಿಲ್ಲ. ಪೆಸಿಫಿಕ್‌ನ ಛಾವಣಿಗಳಾದ ಹಿಮಾಚ್ಛಾದಿತ ಅಲಾಸ್ಕಾ ಮತ್ತು ಸೈಬಿರಿಯಗಳು, ಎರಡು ಖಂಡಗಳನ್ನು ಸೇರಿಸುವ

ಭೂಮಿಯ ತುದಿಗಳು ಭೌಗೋಳಿಕವಾಗಿ ಪರಿಶೀಲಿಸಿದರೆ ಹಿಂದೂ ಮಹಾಸಾಗರವು ಎಷ್ಟೇ ವಿಸ್ತಾರವಾಗಿದ್ದರೂ, ಸಾಗರಿಕ ಹರಿವು, ಮಾರುತಗಳಿಂದ ಕೂಡಿದ್ದರೂ, ಅದು ಭೂಭಾಗಗಳಿಂದ ಆವರಿಸಲ್ಪಟ್ಟ ಸಮುದ್ರವಾಗಿದೆ.

ಈ ಸಾಗರದ ಇನ್ನೊಂದು ರೂಪ ವೈಶಿಷ್ಟ್ಯ ಇದರ ದ್ವೀಪ ಸಮೂಹಗಳ ಮತ್ತು ದ್ವೀಪಗಳ ಹರಿವು ಶ್ರೀಲಂಕಾ (ಭಾರತದ ಒಂದು ಭಾಗವೇ) ಮತ್ತು ಮಡಗಾಸ್ಕರ್ – ಆಫ್ರಿಕಾ ಖಂಡಕ್ಕೆ ಅಂಚಿನಲ್ಲಿರುವ ಇವುಗಳ ಅಂತರ ಫೆಸಿಫಿಕ್ ಸಾಗರದ ವೈಶಿಷ್ಟ್ಯಕ್ಕೆ ವಿರುದ್ಧವಾಗಿದೆ. ಅಟ್ಲಾಂಟಿಕ್ ಸಾಗರದಲ್ಲಿ ಫಿನ್‌ಲ್ಯಾಂಡ್, ದಿ ಅಜೋರಿಸ್, ವೆಸ್ಟ್ ಇಂಡಿಯಾ ದ್ವೀಪ ಸಮುದಾಯ, ಗ್ರೇಟ್ ಬ್ರಿಟನ್, ಐರ್‌ಲೆಂಡ್‌ಗಳು ಪ್ರಮುಖ ಭೌಗೋಳಿಕ ರೂಪ ಲಕ್ಷಣಗಳಾಗಿವೆ.

ಹಿಂದೂ ಮಹಾಸಾಗರ ಸೊಮಾಲಿಲ್ಯಾಂಡ್‌ವರೆಗಿನ ಆಫ್ರಿಕದ ಪೂರ್ವತೀರವನ್ನು ತೊಳೆಯುತ್ತದೆ. ಹಾಗೇ ಅರೇಬಿಯಾದ ದಕ್ಷಿಣ ತೀರ ಇರಾನ್ ಮತ್ತು ಬೆಲೂಚಿಸ್ತಾನಗಳ ದಕ್ಷಿಣ ತೀರ, ಭಾರತ ಪರ್ಯಾಯ ದ್ವೀಪ, ಬರ್ಮಾ, ಮಲೆಯ ಪರ್ಯಾಯ ದ್ವೀಪ ಮತ್ತು ಸುಮಾತ್ರಾಗಳ ತೀರಗಳಿಗೂ ಅಪ್ಪಳಿಸುತ್ತದೆ. ಪಶ್ಚಿಮದಲ್ಲಿ ಬಾಬ್ ಎಲ್‌ಮನ್‌ದಬ್ ಕೆಂಪು ಸಮುದ್ರದ ಬಾಗಿಲಾಗಿ ಎರಡು ಕಡೆ ಭೂಪ್ರದೇಶಗಳನ್ನು ಕಾಯುತ್ತದೆ. ಹಾಗೇ ಮಲಕ್ಕ ಜಲಸಂಧಿ ಪೂರ್ವದಲ್ಲಿ ಎಡಬಲ ಭೂಭಾಗಗಳಲ್ಲಿ ಒಳಕ್ಕೆ ಹೊರಕ್ಕೆ ಹೋಗಿ ಬರುವುದನ್ನು ನಿಯಂತ್ರಿಸುತ್ತದೆ. ಈ ಸಾಗರದಲ್ಲಿ ಮುಖ್ಯವಾದ ಎರಡು ದ್ವೀಪಗಳು ಸಿಲೋನ್, ಭಾರತಕ್ಕೆ ಅಂಟಿಕೊಂಡಿರುವಂತೆಯೇ ಇರುವುದರಿಂದ ತನ್ನ ಸ್ವಾಭಾವಿಕ ರಕ್ಷಣಾಗುಣವನ್ನು ಕಳೆದುಕೊಂಡಿದೆ. ಮಡಗಾಸ್ಕರ ಪೂರ್ವ ಆಫ್ರಿಕಾಕ್ಕೆ ಹತ್ತಿರವಾಗಿ ಅದಕ್ಕೆ ನೆರಳಿನಂತಿದೆ. ಸಿಲೋನ್ ಟ್ರಿಂಕೋಮಾಲಿ ಮತ್ತು ಕೊಲಂಬೋ ಎಂಬೆರಡು ಸ್ವಾಭಾವಿಕ ಬಂದರುಗಳನ್ನು ಹೊಂದಿದೆ. ಮಡಗಾಸ್ಕರ್‌ನ ದಿಯಾಗೋ ಸುರೇಸ್ ಅನ್ನು ಮೂರನೇ ರಿಪಬ್ಲಿಕ್ (ಜರ್ಮನಿಯ) ಬಂದು ಹಿಂದೂಸಾಗರದ ಎರಡನೇ ಸಿಂಗಪುರವಾಗಿ ಮಾಡುವ ವ್ಯರ್ಥ ಪ್ರಯತ್ನ ಮಾಡಿತು. ಅರೇಬಿಯದ ತೀರ ಪ್ರದೇಶದಲ್ಲಿರುವ ಸರೋತ್ರ, ಪೂರ್ವ ಆಫ್ರಿಕದ ತೀರದಲ್ಲಿನ ಜಾಂಜಿಬಾರ್ ಮತ್ತು ಸಿಚಲೀಸ್, ಮಕರ ರೇಖೆಯ ಮೇಲಿರುವ ಮಾರೀಷಿಯಸ್ ಮತ್ತು ರೀಯೂನಿಯನ್, ಮುಖ್ಯವಾದ ಇತರ ಬಂದರುಗಳು. ಭಾರತದ ತೀರಪ್ರದೇಶದ ಮಾಲ್ಡಿವ್ ಮತ್ತು ಲೆಕಡೆವಿಸ್ (ಲಕ್ಷದ್ವೀಪ) ಪ್ರರ್ಷಿಯನ್ ಕೊಲ್ಲಿಯ ಬಹ್‌ರೀನ್ ಗುಂಪು, ಬಂಗಾಳ ಕೊಲ್ಲಿಯ ಅಂಡಮಾನ್, ನಿಕೋಬಾರ್ ಮತ್ತು ಪೆನಾಂ ಸಾಗರಿಕ ಚರಿತ್ರೆಯ ಮೇಲೆ ಪ್ರಭಾವ ಬೀರುವ ಇತರ ದ್ವೀಪ ಸಮೂಹಗಳು.

ದೂರವೀಕ್ಷಣೆಯೂ ಮುಖ್ಯವಾದ ಅಂಶ. ಭಾರತದ ಪೂರ್ವ ತೀರದ ಬಂದರು ಮದರಾಸಿನಿಂದ ಅಂಡಮಾನ್ ದ್ವೀಪಗಳು ೭೦೦ ಮೈಲಿ ಹಾಗೂ

ಬರ್ಮಾ ತೀರದಿಂದ ೪೦೦೦ ಮೈಲಿ ದೂರದಲ್ಲಿವೆ. ಹಾಗೇ ಮಾರಿಷಸ್, ಕೊಲಂಬೋದಿಂದ ೨೯೪ ಮೈಲಿ ದೂರದಲ್ಲಿದ್ದರೆ, ಸಕೋತ್ರ ೧೦೦೦ ಮೈಲಿ ದೂರ. ಸಿಲೋನ್‌ನಿಂದ ಪೆನಾಂಗಿಗೆ ೧೨೭೮ ಮೈಲಿ. ಮಾಲ್ಡಿವ್ಸ್ ದ್ವೀಪ ಸಮುದಾಯದಲ್ಲಿ ಭಾರತಕ್ಕೆ ಅನುಕೂಲವಾದ ಯಾವ ದ್ವೀಪವೂ ಇಲ್ಲ. ದಿಯೂ, ದಾಮನ್ ಬಿಟ್ಟರೆ ಸುರಕ್ಷಿತವಾದ ಯಾವ ಬಂದರೂ ಭಾರತ ತೀರದಲ್ಲಿಲ್ಲ.

ಹಿಂದೂ ಮಹಾಸಾಗರದಲ್ಲಿರುವ ಖಾರಿ, ಕೊಲ್ಲಿಗಳ ಅಧ್ಯಯನ ಮುಖ್ಯವಾಗಿದೆ. ವಾಯವ್ಯದಲ್ಲಿ ಪರ್ಷಿಯನ್ ಖಾರಿ ಒಂದು ಭೂಮ್ಯಾವೃತ, ರಕ್ಷಣೆ ಪಡೆದಿರುವ ಪ್ರದೇಶ. ಓರ್‌ಮಾಜ್ ಇದರ ಹೆಬ್ಬಾಗಿಲು. ಯುಫ್ರೆಟಸ್, ಟೈಗ್ರಿಸ್ ನದೀ ಕಣಿವೆ ಮತ್ತು ಮೆಸಪೊಟೇಮಿಯ ಈ ಖಾರಿಯ ಹಿಂಭಾಗದ ಪ್ರದೇಶಗಳಾಗಿದ್ದು, ಸಾಗರಯಾನದ ಚರಿತ್ರೆಯ ಹರಿವನ್ನು ರೂಪಿಸುವ ಸ್ವಾಭಾವಿಕ ಲಕ್ಷಣವನ್ನು ಹೊಂದಿತ್ತು. ಮುಂದೆಯೂ ಇದಕ್ಕಿಂತ ಹೆಚ್ಚಿನ ಪ್ರಭಾವವನ್ನು ವಹಿಸಬಹುದು. ಉತ್ತರದಲ್ಲಿ ಪರ್ಷಿಯದ ಬರಡುತೀರ ಪ್ರದೇಶ. ಭಾರತ ಮತ್ತು ಅರೇಬಿಯನ್ ಪರ್ಯಾಯ ದ್ವೀಪಗಳನ್ನು ಒಂದುಗೂಡಿಸುವ ಈ ಭಾರೀ ಜಲಾಶಯ, ಅರಬ್ಬೀ ಸಮುದ್ರವಾಗಿದೆ. ಚರಿತ್ರೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ, ಪ್ರಪಂಚದ ಒಂದು ಮುಖ್ಯಭಾಗವಾಗಿದೆ. ನಿಯಮಿತಕಾಲಿಕ ಮಾನ್‌ಸೂನ್ ಮಳೆಗಳಿಂದಾಗಿ, ೩೦೦೦ ವರ್ಷಗಳಿಂದ ಈ ಅರಬ್ಬೀ ಸಮುದ್ರವು ವ್ಯಾಪಾರ, ಸಂಪರ್ಕಗಳ ರಾಜಮಾರ್ಗವಾಗಿದೆ. ಎಲ್ಲ ಸಾಗರ ಸಂಚಾರಿ ದೇಶಗಳೂ ಭಾರತ, ಪಶ್ಚಿಮ ಪಾಲಿನೇಷಿಯಾ – ಈ ಪ್ರದೇಶದಲ್ಲಿ ಹಡಗುಗಳಲ್ಲಿ ಓಡಾಡುತ್ತಿವೆ (ಸಮುದ್ರಯಾನ ಮಾಡುತ್ತಿವೆ.)

ಏಡನ್ ಖಾರಿ, ಆಫ್ರಿಕಾ ಮತ್ತು ಆಗ್ನೇಯ ಅರೇಬಿಯಾದ ತುದಿಯನ್ನು ಬೇರ್ಪಡಿಸುವ ಸಣ್ಣ ಕಿರಿದಾರಿಯಾಗಿದೆ. ಇಲ್ಲಿ ಇದರ ಎರಡು ದಡಗಳೂ ಸಮಾನಾಂತರವಾಗಿ ಬಾಬ್ ಎಲ್ ಮಾಂಡೆಬ್ ಜಲಸಂಧಿಯಲ್ಲಿ ಮುಕ್ತಾಯವಾಗುತ್ತದೆ. ಪೂರ್ವದಿಂದ ಈ ಖಾರಿ ಪ್ರದೇಶ ಸುಮಾತ್ರಾ ದ್ವೀಪದಿಂದ ನಿಯಂತ್ರಿಸಲ್ಪಟ್ಟಿದೆ. ಅರೇಬಿಯಾದ ತುದಿಯಲ್ಲಿನ ಏಡನ್ ತೀರ ಪ್ರದೇಶದಲ್ಲಿ ಹುದುಗಿದೆ.

ಮಾನ್‌ಸೂನ್‌ಗಳಿಂದ ಪ್ರಭಾವಿತ ಪ್ರದೇಶ ಇದೊಂದು ಬಂಗಾಳ ಕೊಲ್ಲಿ. ಇದು ಭಾರತವನ್ನು ಬರ್ಮಾ ಮತ್ತು ಮಲಯಾಗಳಿಂದ ಬೇರ್ಪಡಿಸುತ್ತದೆ. ಸುಂಟರಗಾಳಿಗೆ ಹೆಸರಾದ ನಾಲ್ಕು ಪ್ರದೇಶಗಳಲ್ಲಿ ಬಂಗಾಳ ಕೊಲ್ಲಿಯೂ ಒಂದು. ಭಾರತದ ಪೂರ್ವ ತೀರದಿಂದ ಹೊರಟು ನಾವಿಕರು ಬಂಗಾಳಾ ಕೊಲ್ಲಿಯಲ್ಲಿ ಬೃಹತ್ ವಾಣಿಜ್ಯ ಹಡಗುಗಳಲ್ಲಿ ಪ್ರಯಾಣಮಾಡಿ ಪೆಸಿಫಿಕ್ ಸಾಗರದ ದ್ವೀಪಗಳಲ್ಲಿ ವಸಾಹತುಗಳನ್ನು ಸ್ಥಾಪಿಸಿದುದು ಚರಿತ್ರೆಯ ಆದಿಯಿಂದಲೇ ಕಾಣಬರುತ್ತದೆ.

(ಎರಡು ಸಾವಿರ ವರ್ಷಗಳಿಂದ ಈ ಪ್ರದೇಶವನ್ನು ಹಿಂದೂಗಳು ಚೆನ್ನಾಗಿ ಅರಿತಿದ್ದರು). ಮಲಕ್ಕಾ ಜಲಸಂಧಿ ಒಂದು ಮೊಸಳೆಯ ಬಾಯಿಯಂತಿದ್ದು ಮಲಯಾ ಪ್ರಸ್ಥಭೂಮಿ ಮೊಸಳೆಯ ಮೇಲಿನ ದವಡೆಯಂತಿದ್ದು ಸುಮಾತ್ರಾ ಕೆಳಗಿನ ತುದಿಯಂಚಿನಲ್ಲಿದೆ. ನಿಕೋಬಾರ್‌ನಿಂದ ಈ ಪ್ರದೇಶವನ್ನು ಹದ್ದುಬಸ್ತಿನಲ್ಲಿಡಬಹುದು. ಕಿರಿಕೊನೆಯನ್ನು ಮಲಕ್ಕಾ ದ್ವೀಪದಿಂದ ನಿಯಂತ್ರಿಸಬಹುದು. ಮಾರುತ ಪ್ರವಾಹಗಳು ಈ ಪ್ರದೇಶದ ವೈಶಿಷ್ಟ್ಯಗಳಾಗಿವೆ ಮತ್ತು ಈ ಪ್ರದೇಶದ ಹಿಪ್ಪಲಸ್ ಎಂಬುವನು ಕ್ರಿ.ಶ. ೪೫ರಲ್ಲಿ ಮಾನ್‌ಸೂನ್ ಮಾರುತಗಳ ನಿರ್ದಿಷ್ಟ ವ್ಯಾಖ್ಯೆಯನ್ನು ಮಾಡಿದ ಮೇಲೆ, ಅರಬ್ಬೀ ಸಮುದ್ರ ಮತ್ತು ಬಂಗಾಳ ಕೊಲ್ಲಿಗಳಲ್ಲಿ ಹಳೆಹಡಗುಗಳು ಬರುವವರೆಗೆ, ಹಡಗು ಸಂಚಾರ ನಿರ್ದಿಷ್ಟವಾಗಿ ಸದಾ ನಡೆಸಲು ಶುರುವಾಯಿತು.

ಆಗ್ನೇಯ ಮಾನ್‌ಸೂನ್ ಮಾರುತಗಳ ಅಭ್ಯಾಸದಿಂದ ಬಂದ ಜ್ಞಾನ ಅರೇಬಿಯನ್ ಸಮುದ್ರದಲ್ಲಿ ಹಡಗು ಮಾರ್ಗಗಳು ನಿರ್ದಿಷ್ಟವಾಗಿ ವ್ಯಾಪಾರ ಸಂಪರ್ಕಗಳು ವೃದ್ಧಿಯಾದುವು. ಈ ಮಾರುತದ ದಿಕ್ಕಿನಲ್ಲೇ ಪ್ರಯಾಣ ಬೆಳೆಸಿ, ಕೆಂಪು ಸಮುದ್ರ ಮತ್ತು ಅರೇಬಿಯಾದ ಹಡಗುಗಳು ಭಾರತದ ಪಶ್ಚಿಮ ತೀರವನ್ನು ಮುಟ್ಟುತ್ತಿದ್ದುವು. ಬಂಗಾಳಕೊಲ್ಲಿಯಲ್ಲೂ ಆಗ್ನೇಯ ಮತ್ತು ನೈರುತ್ಯ ಮಾರುತಗಳ ಸಹಾಯದಿಂದ ಈ ಪ್ರದೇಶದ ಸಾಗಾಣಿಕೆ ವ್ಯಾಪಾರ ವ್ಯವಹಾರಗಳು ನಿರಂತರವಾಗಿ ನಡೆದು ಬಂದಿದೆ ಸಾವಿರಾರು ವರ್ಷಗಳಿಂದ.

ಐದು ತಿಂಗಳಷ್ಟು ಕಾಲ ಬೀಸುವ ಮಾರುತಗಳ ಸಹಾಯದಿಂದ ನಾವಿಕರು ಹಿಂದೂ ಮಹಾಸಾಗರದಲ್ಲಿ ತಮ್ಮ ಕಾರ್ಯಾಚರಣೆಗಳನ್ನು ನಿರ್ವಹಿಸುತ್ತಿದ್ದರು.

ಈ ಸಂದರ್ಭದಲ್ಲಿ ಬಂಗಾಳ ಕೊಲ್ಲಿಯಲ್ಲಿ ಬೀಸುವ ಸುಂಟರಗಾಳಿಗಳ ವಿಚಾರ ಮಾಡಬೇಕು. ಏಕೆಂದರೆ ಇವು ಹಡಗು ಸಂಚಾರಕ್ಕೆ ಧಕ್ಕೆ ತರುತ್ತವೆ. ಹಿಂದೂ ಮಹಾಸಾಗರವು ಉತ್ತರದಲ್ಲಿ ಕರ್ಕಾಟಕ ವೃತ್ತದಿಂದ ಮುಂದೆ ಹಾದು ಹೋಗುವುದಿಲ್ಲವಾದ್ದರಿಂದ ಇದು ಉಷ್ಣವಲಯದ ಹವಾಮಾನದ ಲಕ್ಷಣ ಹೊಂದಿದೆ. ಹಾಗೆಯೇ ಇಲ್ಲಿನ ಭೂಪ್ರದೇಶದಲ್ಲಿ ಹಿಮರಾಶಿಗಳಾಗಲೀ, ಹಿಮ ನದಿಗಳಾಗಲೀ ಇಲ್ಲದಿರುವುದರಿಂದ ಅವುಗಳ ಪ್ರಭಾವ ಇಲ್ಲವೇ ಇಲ್ಲ. ಹಾಗೇ ಮಂಜು, ಹಿಮಪಾತಗಳಿಂದಲೂ ಈ ಸಮುದ್ರ ಮುಕ್ತವಾಗಿದೆ. ಹೀಗಾಗಿ ಇಲ್ಲಿ ಉಷ್ಣಾಂಶದ ಪರಿಣಾಮಗಳೇ ಜಾಸ್ತಿ. ಇದರ ಭೌಗೋಳಿಕ ಪರಮಾವಧಿಗಳ ವೈಪರೀತ್ಯ ಇದರ ಹವಾಮಾನವನ್ನು ನಿಷ್ಕರ್ಷಿಸುತ್ತದೆ.

ಇಲ್ಲಿ 'ಗಲ್ಫ್ ಸ್ಟ್ರೀಮ್' ನಂತಹ ಸಮುದ್ರ ಪ್ರವಾಹಗಳು ಇಲ್ಲ'. ಈ ಪ್ರವಾಹಗಳು ಹವಾಮಾನದ ಮೇಲೆ ಪ್ರಭಾವವನ್ನು ಬೀರುತ್ತವೇ ಹೊರತು ಸಮುದ್ರಯಾನಕ್ಕೆ ಅಲ್ಲ. ಅವಿಲ್ಲದಿರುವುದರಿಂದ ಸಾರಿಗೆ, ಸಂಪರ್ಕ ವ್ಯಾಪಾರಗಳ ಅಭಿವೃದ್ಧಿಗೆ ಏನೂ ತೊಂದರೆ ಆಗಿಲ್ಲ. ಮಾನ್‌ಸೂನ್ ಮಾರುತಗಳು ಮತ್ತು ಇಲ್ಲಿ ಬೆಳೆದ ಪ್ರಾಚೀನ

ನಾಗರಿಕತೆಗಳು ಅರಬ್ಬೀ ಸಮುದ್ರವು ಬಡಿಯುವ ತಟಗಳಲ್ಲೆ ಮೊದಲ ಸಮುದ್ರಯಾನ ಚಟುವಟಿಕೆಗಳು ಪ್ರಾರಂಭವಾದುದಕ್ಕೆ ಭಾಗಶಃ ಕಾರಣಗಳು ಈ ಸಂಗತಿಯನ್ನು ಯುರೋಪಿಯನ್ ಬರೆಹಗಾರರು ಮನಗಂಡಂತೆ ಕಾಣಲಿಲ್ಲ. ಅವರುಗಳು ಏಜಿಯನ್ ಪ್ರದೇಶದಲ್ಲಿ ಮೊದಲು ಸಮುದ್ರ ಪ್ರಯೋಗಗಳು ನಡೆದುವೆಂದೇ ವಾದಿಸಿದ್ದಾರೆ. ಮೆಕಿಂಡರ್ ಹೇಳುವ ಪ್ರಕಾರ "ಇತ್ತೀಚೆಗಿನ ಸಂಶೋಧನೆಗಳಿಂದ ಗೊತ್ತಾಗುವ ಸಂಗತಿ–ಏಶಿಯನ್ ಸಮುದ್ರ ಪ್ರದೇಶದಿಂದಲೇ ಅತಿ ಪುರಾತನ ನಾವಿಕ ಚಟುವಟಿಕೆಗಳು ಪ್ರಾರಂಭವಾದುದು. ಫೋನಿಷಿಯನ್ನರಿಗೆ ಈ ಸಮುದ್ರ ಭಾಗವೇ ನೌಕಾ ಪ್ರಯಾಣದ ಆಗುಹೋಗುಗಳನ್ನು ತಿಳಿಸಿ ಅವರು ಪ್ರಚಂಡ ನೌಕಾಯಾತ್ರಿಕರಾಗಲು ಪೀಠಿಕೆಯಾಯಿತು." ಇತಿಹಾಸದ ದೃಷ್ಟಿಯಿಂದ ಈ ವ್ಯಾಖ್ಯೆ ಸತ್ಯದಿಂದ ದೂರವಾದುದು. ಏಶಿಯನ್ ಪ್ರದೇಶದಲ್ಲಿ ನೌಕಾಚಟುವಟಿಕೆಗಳು ಶುರುವಾಗುವುದಕ್ಕಿಂತ ಬಹಳ ಮುಂಚೆಯೇ ಭಾರತದ ತೀರ ಪ್ರದೇಶಗಳಲ್ಲಿ ಸಮುದ್ರಯಾನ ಸಂಪರ್ಕಗಳು, ವ್ಯಾಪಾರ ಚಟುವಟಿಕೆಗಳು ಅಭಿವೃದ್ಧಿ ಹೊಂದಿದ್ದವು.

ಇತ್ತೀಚಿನ ಬರಹಗಾರನೊಬ್ಬನು ಬರೆದಿರುವಂತೆ "ಹಿಂದೂ ಮಹಾಸಾಗರದ ಮೇಲೆ ಬೀಸುವ ಮುಂಗಾರು ಮಾರುತಗಳು, ದೊಡ್ಡ ಹಡಗುಗಳು ಸಂಚರಿಸಲು ಅನುಕೂಲಕರವಾಗಿವೆ. ಹಾಗೆಯೇ ದಕ್ಷಿಣದ ಉದ್ರಿಕ್ತ ಪಶ್ಚಿಮ ಮಾರುತಗಳು, ಈ ಮುಂಗಾರು ಮಾರುತಗಳ ಸಹಾಯದಿಂದ ಹಿಂದಿನಿಂದಲೂ, ಭಾರತ, ಪರ್ಷಿಯಾ ಮತ್ತು ಅರಬ್ ರಾಷ್ಟ್ರಗಳ ಹಡಗುಗಳು ತಮ್ಮ ತಮ್ಮಲ್ಲೇ ವ್ಯಾಪಾರ–ವ್ಯವಹಾರಗಳನ್ನು ಮಾಡುತ್ತಿದ್ದುವು. ಪಶ್ಚಿಮ ಮಾರುತಗಳೂ ಬಂದು ದೊಡ್ಡ ಗುಡ್ ಹೋಪ್ ಭೂಶಿರದಿಂದ ಆಸ್ಟ್ರೇಲಿಯಾವರೆಗಿನ ೬೦೦೦ ಮೈಲಿ ದೂರವನ್ನು ಮೂರು ವಾರಗಳಲ್ಲಿ ಸೇರಿಸುತ್ತಿತ್ತು." (ವಿಲ್ಲರ್ಸ್ : ಇಂಡಿಯನ್ ಓಷನ್, ಪು. ೧೨)

ವಿಂಧ್ಯಾಚಲ ಮತ್ತು ದಖನ್ ಪ್ರಸ್ಥಭೂಮಿಗಳು ಮಾತ್ರವೇ ಆರ್ಯಾವರ್ತವನ್ನು ದಕ್ಷಿಣ ಪ್ರದೇಶಗಳಿಂದ ಬೇರ್ಪಡಿಸುವುದಿಲ್ಲ. ಸಮುದ್ರವು ಉತ್ತರ ಜನರ ಜೀವನದ ಮೇಲೆ ಹೆಚ್ಚು ಪರಿಣಾಮವನ್ನೇನೂ ಬೀರಲಿಲ್ಲ. ಇದಕ್ಕೆ ಕಾರಣ ಮಧ್ಯ ಏಷ್ಯಾ ಸಂಪ್ರದಾಯದಲ್ಲಿ ಮುಳುಗಿದ್ದ ಈ ಜನರಿಗೆ ಸಮುದ್ರ ಯಾವ ರೀತಿಯಲ್ಲೂ ಉಪಯೋಗವಾಗದಿದ್ದುದು.

ಕಾಳಿದಾಸ ರಘುವಂಶದಲ್ಲಿ ಒಬ್ಬ ಆದರ್ಶ ಚಕ್ರವರ್ತಿಯ ಆಧಿಪತ್ಯ ಸಮುದ್ರದವರೆಗೂ ಹಬ್ಬಿತ್ತೆಂದು ಬರೆದಿದ್ದಾನೆ. ಸಮುದ್ರವನ್ನು ಆಳುವುದಾಗಲೀ ಸಮುದ್ರದ ಮೇಲೆ ಯಾನ ಮಾಡುವುದಾಗಲೀ ಈ ಉತ್ತರದ ರಾಜ ಮಹಾರಾಜನ ಮನಸ್ಸಿಗೆ ಬರಲೇ ಇಲ್ಲ. ಚೋಳ, ಪಾಂಡ್ಯ, ಕಳಿಂಗ ರಾಜ್ಯಗಳು ಮಾತ್ರ ಈ ವಿಚಾರದಲ್ಲಿ ತಲ್ಲೀನವಾಗಿದ್ದುವು. ಆರ್ಯರಿಗೆ ಸಮುದ್ರದ ಮತ್ತು ಸಮುದ್ರ ಪ್ರಯಾಣದ ಪರಿಚಯವಿದ್ದರೂ, ರಾಜ್ಯ ವಿಸ್ತರಣೆಯ ವ್ಯಾಪ್ತಿಯಲ್ಲಿ ಸಮುದ್ರದಾಚೆಗೆ ಅದರ

ಗಮನ ಹರಿಯಲಿಲ್ಲ. ಸಮುದ್ರವು ರಾಜ್ಯದ ಎಲ್ಲೆ ಎಂದೇ ಅವರು ಭಾವಿಸಿದ್ದರು. ಅವರ ರಾಜ್ಯವಿಸ್ತರಣೆ, ವಸಾಹತುಗಳ ಸ್ಥಾಪನೆ ಸಮುದ್ರದವರೆಗೆ ಮಾತ್ರ ಸೀಮಿತವಾಗಿತ್ತು.

ದಕ್ಷಿಣದಲ್ಲಿ ಸಮುದ್ರವು ಜನಜೀವನದ ಮೇಲೆ ಬಹಳ ಪ್ರಭಾವ ಬೀರಿದೆ. ಕರ್ನಾಟಕದ ಮಾಸ್ಕಿ ಮತ್ತು ಇತರ ಕಡೆಗಳಲ್ಲಿ ಸಿಕ್ಕಿರುವ ಪುರಾತನ ಪಳೆಯುಳಿಕೆಗಳು ಕಡಲ ಸಂಬಂಧ ಪಶ್ಚಿಮ ಪ್ರದೇಶಗಳಾದ ಅರೇಬಿಯಾ, ಮೆಡಿಟರೇನಿಯನ್ ಪ್ರದೇಶಗಳಿಗೆ ಪಸರಿಸಿದ್ದ ವಿಚಾರ ತಿಳಿಸುತ್ತಾರೆ. ಇಂದಿಗೂ ಆಸ್ಟ್ರಿಚ್ ಭಾಷೆಗಳ ಬಳಕೆ, ರಕ್ತಸಂಬಂಧಗಳೂ ಪಾಲಿನೇಷಿಯಾದಲ್ಲಿದ್ದಂತೆಯೇ ಇವೆ. ಇದರಿಂದ ದ್ರಾವಿಡ ಜನಾಂಗಗಳು ವಿದೇಶಗಳಲ್ಲಿ ನೆಲೆಸಿ ಅಲ್ಲಿನ ನಾಗರಿಕತೆಯನ್ನು ಭಾರತಕ್ಕೆ ತಂದ ವಿಚಾರ ವಿಶದವಾಗುತ್ತದೆ. ನಿಕೋಬಾರ್‌ನಲ್ಲಿ ಇವತ್ತಿಗೂ ಅಲ್ಲಿ ಪ್ರಬಲ ಪ್ರಭಾವವನ್ನು ಬೀರುತ್ತದೆ. ಮಡಗಾಸ್ಕರಿನ ಮತ್ತು ಪಾಲಿನೇಷಿಯಾ ನಡುವೆ ಜನಸಂಚಾರ, ಸಾಂಸ್ಕೃತಿಕ ಪರಿಸರಗಳು ಹಿಂದಿನಿಂದಲೂ ಇತ್ತು ಎಂಬಂಶ ದೃಢವಾಗುತ್ತದೆ–ಈ ಓಡಾಟ ಸಂಬಂಧ ದಕ್ಷಿಣ ಭಾರತವನ್ನು ತಲುಪದೇ ಇರುವುದು ಅಸಾಧ್ಯ. ಶ್ರೀಮತಿ ಐರಾವತಿ ಕರ್ವೆ ತಮ್ಮ ಇತ್ತೀಚಿನ ಪುಸ್ತಕದಲ್ಲಿ ಆರ್ಯರ ಮತ್ತು ದ್ರಾವಿಡ ಜನಾಂಗಗಳಲ್ಲಿ ರಕ್ತ ಸಂಬಂಧ ಪ್ರವಾಹಗಳನ್ನು ಬಹಳ ಚೆನ್ನಾಗಿ ವಿವರಿಸಿದ್ದಾರೆ. ಮಹಾರಾಷ್ಟ್ರದಲ್ಲೂ–ಸಂಸ್ಕೃತ ಭಾಷಾ ಸಂಸ್ಕೃತಿಗೆ ಒಳಗಾಗಿದ್ದರೂ, ಪಾಲಿನೇಶಿಯಾದ ಸಂಸ್ಕೃತಿಯ ಚಿಹ್ನೆಗಳೂ ಈಗಲೂ ಎದ್ದು ಕಾಣುತ್ತವೆ. ಚಾರಿತ್ರಿಕ ಕಾಲಕ್ಕೂ ಮುಂಚೆ ತೆಂಗಿನ ಮರ, ಕ್ಯಾಮಾ ಎಂಬ ಸಣ್ಣ ಮರದ ದೋಣಿ ಹೇಗೆ ದಕ್ಷಿಣ ಭಾರತಕ್ಕೆ ಬಂದುವೋ, ಹಾಗೆ ಪಾಲಿನೇಷಿಯಾದ, ಅಂದರೆ ದಕ್ಷಿಣ ಶಾಂತಿಸಾಗರದ ದ್ವೀಪಗಳ ಜನಸಂಪರ್ಕ ಒಂದಾಗುವಿಕೆ, ರಕ್ತ ಸಂಬಂಧಗಳೂ ಬಂದುವೆಂದು ನಂಬಬಹುದು. ದಕ್ಷಿಣದ ಪ್ರಮುಖ ಬುಡಕಟ್ಟುಗಳು ದಕ್ಷಿಣ ಶಾಂತಿಸಾಗರದಿಂದ ಬಂದು ಇಲ್ಲಿ ನೆಲೆಸಿ ಉತ್ತರದ ಕಡೆಗೆ ಹಬ್ಬುತ್ತಿದ್ದಾಗ, ಆರ್ಯರು ಗಂಗಾಕೊಳ್ಳದಿಂದ, ಆರ್ಯಾವರ್ತದಿಂದ ದಕ್ಷಿಣದ ಕಡೆಗೆ ಪಸರಿಸುತ್ತಿದ್ದು, ಗುಜರಾತಿನಲ್ಲಿ ಒಬ್ಬರನ್ನೊಬ್ಬರು ಸಂಧಿಸಿ ಒಬ್ಬರಲ್ಲೊಬ್ಬರು ಮಿಲನವಾದರು ಎಂದು ಶ್ರೀಮತಿ ಕರ್ವೆ ತಿಳಿಸುತ್ತಾರೆ. ಹಾಗೂ ಗುಜರಾತಿನಲ್ಲಿ, ಪಾಲಿನೇಷಿಯಾದ ಸಾಂಸ್ಕೃತಿಕ ಲಕ್ಷಣಗಳು ಈಗಲೂ ಕಾಣುತ್ತಿದೆ ಎಂದು ನಿರ್ಧರಿಸಿದ್ದಾರೆ. ಆದರೂ ಈ ಮಿಲನದಲ್ಲಿ ಆರ್ಯರ ಸಂಸ್ಕೃತಿಗೇ ಹೆಚ್ಚು ಪ್ರಾಧಾನ್ಯ ಲಭ್ಯವಾಗಿ ಅದರ ಪ್ರಭಾವ ದಕ್ಷಿಣದಲ್ಲೆಲ್ಲಾ ಹರಡಿತು.

ಸಿಲ್ವನ್ ಲೆವಿ ಹೇಳುವಂತೆ ಕ್ರಿಸ್ತಪೂರ್ವದಲ್ಲೇ ದಕ್ಷಿಣ ಭಾರತದ ಹಡಗುಗಳು, ತೀರಪ್ರದೇಶದ ಬಂದರುಗಳಿಂದ ಪಶ್ಚಿಮಕ್ಕೆ ಸಾಗುತ್ತಿದ್ದುವು. ನಿಗದಿಯಾದ ಸಮುದ್ರ ಮಾರ್ಗಗಳಲ್ಲಿ ಚಾರಿತ್ರಿಕ ಯುಗಕ್ಕೆ ಬಂದಾಗ, ದಕ್ಷಿಣ ಭಾರತದ ನೌಕಾಯಾನಗಳ ಸಂಗತಿ ಇನ್ನೂ ಖಚಿತವಾಗುತ್ತದೆ. ತಮಿಳು ಸಾಹಿತ್ಯದಲ್ಲಿ ಸಮುದ್ರಯಾನದ

ಅನೇಕಾನೇಕ ಸಂಗತಿಗಳು ಎದ್ದು ತೋರುತ್ತವೆ. ಕ್ರಿ.ಶ. ಒಂದನೇ ಶತಮಾನದಲ್ಲಿ ಕಾವೇರಿ ಪಟ್ಟಣಂನ ವಿವರಣೆಯು ಪರಿಣಿತ ಪ್ರಾಚೀನ ಕೃತಿಯಿಂದ ವ್ಯಕ್ತವಾಗುತ್ತದೆ. ಕಾವೇರಿ ನದಿಯ ಮುಖಜಭೂಮಿಯಲ್ಲಿರುವ ಕಾವೇರಿ ಪಟ್ಟಣಂನ ತೀರದ ಉಗ್ರಾಣಗಳ ಮೇಲೆ, ಭಾವಣಿಗಳ ಮೇಲೆ ಸೂರ್ಯಕಿರಣಗಳು ಬಿದ್ದು ಇವುಗಳ ಕಿಟಕಿ ಬಾಗಿಲುಗಳು ಹರಿಣಿಯ ಕಣ್ಣುಗಳಂತೆ ಕಾಣುವಂತೆ ಮಾಡುತ್ತವೆ. ಪುಹಾರದ ಬೇರೆ ಬೇರೆ ಭಾಗಗಳಲ್ಲಿ ಯವನರ ವಾಸಸ್ಥಾನಗಳು ಎದ್ದು ಕಾಣುತ್ತವೆ. ಬಂದರಿನಲ್ಲಿ ಬೇರೆ ಬೇರೆ ದೂರದೇಶಗಳ ನಾವಿಕರುಗಳು ಓಡಾಡುತ್ತಿರುತ್ತಾರೆ." ಇದಲ್ಲದೆ ರೋಂನಲ್ಲಿ ತಯಾರಾದ ತಾರೀಖುಗಳನ್ನು ಕೆತ್ತಿರುವ ಮಡಕೆ-ಕುಡಿಕೆಗಳು ಇಲ್ಲಿ ಸಿಕ್ಕಿವೆ. ಕೇಂಬ್ರಿಜ್ ಪುರಾತನ ಚರಿತ್ರೆಯ ಪ್ರಕಾರ ಇಟಲಿ ದೇಶವು ಭಾರತದಿಂದ, ಇತರ ದೇಶಗಳೂ ಸಾಮಾನು ಸರಂಜಾಮುಗಳೂ ಆಮದು ಮಾಡಿಕೊಳ್ಳುತ್ತಿದ್ದುವು ಎಂದು ತಿಳಿದುಬರುತ್ತದೆ. ಇತಿಹಾಸಕಾರ ಪ್ಲಿನಿ ಹೇಳುವಂತೆ ಭಾರತಕ್ಕೆ ರೋಂನಿಂದ ವರ್ಷವರ್ಷ ೫೫೦ ಮಿಲಿಯನ್ ಸೆಸ್ಟಸೆಸ್ ಹರಿದು ಹೋಗುತ್ತಿದೆ. ಹೀಗಾಗಿ ವಹಿವಾಟುಗಳ ಅಂತರ ೧೦೦ ಮಿಲಿಯನ್‌ಗಳಿಗೂ ಹೆಚ್ಚು ಭಾರತದ ಪರವಾಗಿದೆ.

ಉತ್ತರದ ರಾಜಮಹಾರಾಜರು ತಮ್ಮನ್ನು ಸಮುದ್ರ ಕ್ಷಿತಿಶೇಷಃ ಎಂದರೆ ಸಮುದ್ರದವರೆಗೂ ಹಬ್ಬಿರುವ ರಾಜ್ಯಾಧಿಪತಿಗಳೆಂದು ಹೊಗಳಿಕೊಂಡರೆ ದಕ್ಷಿಣದ ರಾಜರು – ಆಂಧ್ರರು, ತ್ರಿಸಮುದ್ರಾಧಿಪಂ–ಮೂರು ಸಮುದ್ರಗಳ ರಾಜ–ಎಂದೂ, ಇತ್ತೀಚಿನವರೆಗೆ ಕ್ಯಾಲಿಕಟ್‌ನ ಅಧಿಪತಿಗಳಾಗಿದ್ದ ಜ಼ಾಮೊರಿನ್ ತಮ್ಮನ್ನು ಪರ್ವತ, ಸಮುದ್ರಗಳ ರಾಜರೆಂದೇ ಕರೆದುಕೊಳ್ಳುತ್ತಿದ್ದರು. ದಕ್ಷಿಣ ತೀರದ ಬಂದರುಗಳಿಂದ ಹೊರಟು ನಾವೆಗಳು ಇಂಡೋನೇಷಿಯಾ ಮತ್ತು ದಕ್ಷಿಣ ಏಷ್ಯಾ ಭಾಗಗಳನ್ನು ಗೆದ್ದಿದ್ದವು. ಚೋಳರ ರಾಜ್ಯದ ಮುಖ್ಯ ಬಂದರಾದ ಕಾವೇರಿ ಪಟ್ಟಣಂ ಮುಂತಾದ ಬಂದರುಗಳಿಂದ ಹಡಗುಗಳು ಪೆಸಿಫಿಕ್ ಸಾಗರದ ದ್ವೀಪಗಳಿಗೆ ಹೋಗಿ ಬರುತ್ತಿದ್ದುವು ಎಂದು ಪೆರಿಪ್ಲೆಸ್ ಬರೆದಿದ್ದಾನೆ. ಹಾಗೆ ಟಾಲಮಿ ಚಿಕರೋವ್‌ನ ಉತ್ತರದ ಬಂದರುಗಳಿಂದ ಮಲಯ ಮತ್ತು ದ್ವೀಪ ಸಮುದಾಯಗಳಿಗೆ ಹಡಗುಗಳು ಸಾಗುತ್ತಿದ್ದುವೆಂದು ಹೇಳಿದ್ದಾನೆ.

ಚೀನಾದ ಐಸಿಂಗ್, ನಾಗಪಟ್ಟಣಂನಿಂದ ಮಲಯದ ಕೇದಾದವರೆಗೆ ಹಡಗು ಸಂಚಾರ ಸತತವಾಗಿ ನಡೆಯುತ್ತಿತ್ತೆಂದು ಬರೆದಿದ್ದಾನೆ. ಇದಲ್ಲದೆ ಬೇರೆ ಪ್ರದೇಶಗಳು ಕೂಡ ಈ ವಸಾಹತುಗಳೊಡನೆ ಸಂಬಂಧ ಇಟ್ಟುಕೊಂಡಿದ್ದವೆಂಬುದಕ್ಕೆ ಸಾಕ್ಷ್ಯಾಧಾರಗಳಿವೆ. ಚೋಳರು, ಪಾಂಡ್ಯರು, ಪಲ್ಲವರು, ಮಲಯದವರು ಎಂಬ ಹೆಸರುಗಳ ಬುಡಕಟ್ಟಿನ ಜನರು ಸುಮಾತ್ರಾದಲ್ಲಿ ಇದ್ದರು ಎಂಬ ಸಂಗತಿ ಹಾಗೂ ಭಾರತದ ಸಂಪರ್ಕ ಇಂಡೋನೇಷಿಯಾದ ಈ ದಕ್ಷಿಣ ದ್ವೀಪಗಳೊಡನೆ ಪುರಾತನ ಕಾಲದಿಂದಲೂ ಇದ್ದಿತು ಎಂಬ ಸಂಗತಿ ಸ್ಪಷ್ಟವಾಗುತ್ತದೆ.

ದಕ್ಷಿಣ ರಾಜ್ಯಗಳ ರಾಜಕೀಯ ಸಂಪರ್ಕ, ಉತ್ತರ ಪ್ರದೇಶಗಳಿಗಿಂತ ಹೆಚ್ಚಾಗಿ ಸಿಲೋನ್ ಮತ್ತು ಇಂಡೋನೇಷಿಯಾದ ವಸಾಹತುಗಳೊಡನೆ ಏರ್ಪಟ್ಟಿತ್ತು. ನೂರೈವತ್ತು ವರ್ಷಗಳ ಕಾಲ ಪಾಂಡ್ಯ ಮತ್ತು ಚೋಳ ರಾಜರುಗಳು ಶ್ರೀವಿಜಯದ ರಾಜರುಗಳೊಡನೆ ಆಗಾಗ್ಯೆ ಮೇಲಿಂದ ಮೇಲೆ ಹೋರಾಡುತ್ತಿದ್ದರು . ಕ್ರಿ.ಶ. ೧೦೦೭ರಲ್ಲಿ ಚೋಳ ಚಕ್ರವರ್ತಿ ರಾಜೇಂದ್ರ ಶ್ರೀವಿಜಯನನ್ನು ಸ್ವತಃ ಗೆದ್ದು ಮಲಯಾದ ಕೆದಾದಲ್ಲಿ ಚೋಳರಾಜ್ಯವನ್ನು ಸ್ಥಾಪಿಸಿದನು. ೧೨೦ ವರ್ಷಗಳ ಮೇಲೆ ಶ್ರೀವಿಜಯದ ರಾಜ ಚಂದ್ರಬಾಹು ಪಾಂಡ್ಯರ ಸ್ನೇಹದೊಡನೆ ಸಿಲೋನ್‌ನಿನ ಮೇಲೆ ಆಕ್ರಮಣ ಮಾಡಿದನು. ಇದರಿಂದ ದಕ್ಷಿಣದ ರಾಜ್ಯಗಳು, ಸಮುದ್ರಾಚೆಗಿನ ರಾಜ್ಯಗಳೊಡನೆ ರಾಜಕೀಯ ಸಂಪರ್ಕ ಇಟ್ಟುಕೊಂಡಿದ್ದವು ಎಂಬ ಸಂಗತಿ ವೇದ್ಯವಾಗುತ್ತದೆ. ಪೋರ್ಚುಗೀಸರು ಭಾರಿ ಫಿರಂಗಿಗಳಿಂದ ಸಜ್ಜಿತವಾದ ತಮ್ಮ ಹಡಗುಗಳಲ್ಲಿ ೧೪೯೮ರಲ್ಲಿ ಭಾರತದ ತೀರಕ್ಕೆ ಬಂದಾಗ, ಐದು ವರ್ಷಗಳಲ್ಲಿ ಸಮುದ್ರಯಾನದ ಹಿಡಿತ ಹಾಗೂ ವ್ಯಾಪಾರ ವ್ಯವಹಾರಗಳೂ ಅವರ ಸ್ವಾಧೀನಕ್ಕೆ ಹೋಗಿ ಭಾರತದ ನೌಕಾಬಲ ಕುಗ್ಗಿಹೋಯಿತು, ನಿಜ. ಜಾಮೋರಿನ್ ಮುಂತಾದ ತೀರದ ರಾಜರುಗಳು ಪೋರ್ಚುಗೀಸರೊಡನೆ ನೂರು ವರುಷಗಳ ಕಾಲ ಹಿಂದೂಸಾಗರದ ಹಿಡಿತಕ್ಕೆ ಹೊಡೆದಾಡಿದರೂ ಕ್ರಿ.ಶ. ೧೫೦೩ರಲ್ಲಿ ನಡೆದ ಕೊಚಿನ್ ನೌಕಾಯುದ್ಧ ಟ್ರಫಾಲ್‌ಘರ್‌ಗಿಂತಲೂ ನಿರ್ಣಾಯಕ ಯುದ್ಧವಾಗಿ ಪರಿಣಮಿಸಿ ಭಾರತದ ನೌಕಾಶಕ್ತಿ ಇಲ್ಲದಂತಾಯಿತೆಂದೇ ಹೇಳಬಹುದು. ಅಲ್ಲಿಂದ ಮುಂದೆ ಬ್ರಿಟಿಷರು ತಮ್ಮ ನೌಕಾಬಲವನ್ನು ಹಿಂದೂ ಮಹಾಸಾಗರದಿಂದ ಹಿಂದೆಗೆಯುವವರೆಗೆ ಅದು ಯುರೋಪಿಯನ್‌ರ ಪೂರ್ಣ ಪರಮಾಧಿಕಾರಕ್ಕೆ ಹೋಗಿತ್ತು. ಹಿಂದೂ ಮಹಾಸಾಗರದ ಮತ್ತು ಈ ಪ್ರದೇಶದ ವ್ಯಾಪಾರಗಳನ್ನು ಪೋರ್ಚುಗೀಸರು ಸುಲಭವಾದೊಂದು ಯೋಜನೆಯ ಮೂಲಕ ತಮ್ಮ ವಶಕ್ಕೆ ತೆಗೆದುಕೊಂಡರು. ಆಲ್ಬುಕರ್ಕ್‌ನು ಈ ಪ್ರದೇಶದ ಬಂದರುಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಬರ್ಮಾ ಹಾಗೂ ಮಲಯಾ, ಇಂಡೋನೇಶಿಯಾಗಳ ವಹಿವಾಟನ್ನು ಸ್ಪೇನಿನ ರಾಜನ ಪರವಾಗಿ ತನ್ನ ಅಧೀನಕ್ಕೆ ತೆಗೆದುಕೊಂಡನು. ಮಲಕ್ಕಾ ಜಲಸಂಧಿಯ ಹಿಡಿತದಿಂದ ಶಾಂತಿಸಾಗರದಿಂದ ಯಾವ ವಾಣಿಜ್ಯ ವ್ಯವಹಾರಗಳೂ ನಡೆಯದಂತೆ, ನಡೆದರೂ ತಮ್ಮ ಆಜ್ಞೆಗಳಂತೆ ನಡೆಯುವಂತೆಯೂ, ಆಫ್ರಿಕಾದ ಪೂರ್ವ ತೀರಗಳಲ್ಲಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಿ ಅಲ್ಲಿಂದ ಬರುತ್ತಿದ್ದ ಎಲ್ಲ ಸಮುದ್ರ ಚಟುವಟಿಕೆಗಳನ್ನು ತಮ್ಮ ಅಧೀನಕ್ಕೆ ತೆಗೆದುಕೊಂಡರು. ಮುಂದೆ ಗೋವಾವನ್ನೂ ತಮ್ಮ ವಸಾಹತುವಾಗಿ ಮಾಡಿಕೊಂಡರು.

ಮಲಕ್ಕಾವನ್ನು ಗೆದ್ದು ಡಚ್ಚರು ಪೋರ್ಚುಗೀಸರ ಆಡಳಿತದಲ್ಲಿ ಬಿರುಕು ಬಿಡಿಸಿದಾಗ, ಇಂಗ್ಲೆಂಡ್, ಫ್ರಾನ್ಸ್ ಮತ್ತು ಹಾಲೆಂಡುಗಳ ನಡುವೆ ಈ ಸಮುದ್ರ

ಪ್ರದೇಶದ ಹತೋಟಿಗೆ ಪೈಪೋಟಿ ಪ್ರಾರಂಭವಾಯಿತು. ಸುಫ್ರೆನ್‌ನ ನಿರ್ಗಮನದಿಂದ ಬ್ರಿಟಿಷರು ಈ ಪ್ರಾಂತಗಳ ಏಕಾಧಿಪತಿಗಳಾದರು. ಆಲ್ಬುಕರ್ಕ್‌ನ ಯೋಜನೆಯನ್ನೇ ಬ್ರಿಟಿಷರು ಮುಂದುವರಿಸಿಕೊಂಡು ಬಂದು, ಪೋರ್ಚುಗೀಸರ ಹಿಂದೂ ಮಹಾಸಾಗರದ ನೌಕಾಶಾಹಿಯನ್ನು ನಾಶಮಾಡಿದರು. ನೆಪೋಲಿಯನ್ನನ ಯುದ್ಧಗಳಾದ ಮೇಲೆ, ಏಡನ್ ಅನ್ನು ವಶಪಡಿಸಿಕೊಂಡು ಕೆಂಪು ಸಮುದ್ರದ ಮೇಲೆ ತಮ್ಮ ಆಧಿಪತ್ಯವನ್ನು ಸಾಧಿಸಿದರು– ಸಿಂಗಪುರದ ಮೇಲೆ ಹಿಡಿತ ಸಾಧಿಸಿ ಹಿಂದೂ ಮಹಾಸಾಗರದ ಮೇಲಿನ ಆಧಿಪತ್ಯವನ್ನು ಕೇಪ್ ಕಾಲೋನಿಯನ್ನು ಹಿಡಿದು ಯುರೋಪಿನ ಯಾವುದೇ ರಾಷ್ಟ್ರವು ಹಿಂದೂ ಮಹಾಸಾಗರಕ್ಕೆ ಬರುವುದನ್ನು ತಡೆದರು. ೧೯ನೇ ಶತಮಾನದಲ್ಲಿ ಆಲ್‌ಬುಕರ್ಕ್‌ನ ತಂತ್ರಜ್ಞಾನದಿಂದ ಬ್ರಿಟಿಷ್ ಸಾಮ್ರಾಜ್ಯ ಉದಯವಾಯಿತು.

ಮತ್ತೆ ಜಪಾನ್ ಮಹಾಯುದ್ಧದಲ್ಲಿ ಸಿಂಗಪುರ ಮತ್ತು ಮಲಯಾಗಳಲ್ಲಿ ತಮ್ಮ ನೌಕಾಬಲವನ್ನು ಸ್ಥಾಪಿಸಿದಾಗ ಅಟ್ಲಾಂಟಿಕ್ ಸಾಗರದಿಂದ ಶಾಂತಿ ಸಮುದ್ರದ ಮೇಲೆ ಸಾಧಿಸಲಾಗುತ್ತಿದ್ದ ತಂತ್ರ ಕೊನೆಗೊಂಡಿತು. ಯುರೋಪಿಯನ್ನರು ಸಮುದ್ರದಾರಿಗಳನ್ನು ಕಂಡುಹಿಡಿಯುವುದಕ್ಕೆ ಮುಂಚೆಯೇ ಭೂಪ್ರದೇಶಗಳ ಮೂಲಕ ಭಾರತ, ಚೀನಾ ಮುಂತಾದ ದೇಶಗಳಿಗೆ ಹೋಗಲು ದಾರಿ ಹುಡುಕುತ್ತಿದ್ದರು ಎಂಬಂಶ ನೆನೆಯಬೇಕಾದದ್ದೆ. ಈ ದಿಸೆಯಲ್ಲಿ ಮೊದಲ ಪ್ರಯತ್ನ ಮಾಡಿದವರು ವಿಲಿಯಂ ಎರಡನೆ ಆಡಳಿತದಲ್ಲಿ ಜರ್ಮನರು. ಬರ್ಲಿನ್‌ನಿಂದ ಬಾಗ್ದಾದ್‌ವರೆಗೆ ರೈಲುದಾರಿ ನಿರ್ಮಿಸಿ ಪರ್ಶಿಯಾದ ಖಾರಿಗೆ ಹೊಗುವುದು ಅವರ ಆಲೋಚನೆ. ಹೀಗೆ ಮಾಡಿ ಸಮುದ್ರವನ್ನು ಸುತ್ತುವರಿಯುವುದು ಮತ್ತು ವಾಸ್ಕೋಡಿಗಾಮಾನ ಸಾಹಸವನ್ನು ಮೆಟ್ಟಿ ನಿಲ್ಲುವುದು ಅವರ ಉದ್ದೇಶವಾಗಿತ್ತು. ಹಾಗೂ ಆಲ್‌ಬುಕರ್ಕನ ತರ್ಕಕ್ಕೆ ತಿಲಾಂಜಲಿ ಬಿಡುವುದಾಗಿತ್ತು. ಆದರೆ ಬ್ರಿಟಿಷರು ಈ ಯೋಜನೆ ತಮ್ಮ ಆಧಿಪತ್ಯಕ್ಕೆ ಧಕ್ಕೆ ತರುವ ವಿಚಾರ ತಿಳಿದು ಈ ಪ್ರಯತ್ನ ಸಫಲವಾಗದಂತೆ ತಡೆದರು.

ವೆನೀಶಿಯನ್ನರ, ಪೋರ್ಚುಗೀಸರ ಏಕಾಧಿಪತ್ಯವನ್ನು ಕೊನೆಗಾಣಿಸುವ ಕನಸನ್ನು ನನಸಾಗಿಸಲು ಮುಸೋಲೋನಿ ಅಬಿಸೀನಿಯಾ ಮತ್ತು ಸೋಮಾಲಿ ಲ್ಯಾಂಡ್‌ಗಳನ್ನು ಇಟಲಿಯೊಡನೆ ಸೇರ್ಪಡೆಮಾಡುವ ಹುನ್ನಾರ ಎರಡನೇ ಮಹಾಯುದ್ಧದಿಂದ ನೀರು ಪಾಲಾಯಿತು. ಹಿಂದೂ ಮಹಾಸಾಗರಕ್ಕೆ ಇಟಲಿಯನರ ಸಂಪರ್ಕದ ಕನಸು ದುಃಸ್ವಪ್ನವಾಯಿತು. ಕೀನ್ಯಾ ದಕ್ಷಿಣ ಆಫ್ರಿಕದ ಫೆಡರೇಷನ್ ಮುಂತಾದ ರಾಜ್ಯಗಳು ಮುಂದೆ ಯುರೋಪಿಯನ್ನರ ವಸಾಹತುಗಳಾಗಿ ಉಳಿಯದೆ ಸ್ವತಂತ್ರ ರಾಜ್ಯಗಳಾಗಿ ಹಿಂದೂ ಮಹಾಸಾಗರದಲ್ಲಿ ಸುಭದ್ರ ನೌಕಾಬಲಗಳಾಗಿ ಮಾರ್ಪಡಬಹುದು. ಈಗಾಗಲೇ ಈ ಮಾರ್ಗದಲ್ಲಿ ಈ ದೇಶಗಳು ಸಾಗುತ್ತಿವೆ. ಆದ್ದರಿಂದ ನಾವು (ಭಾರತೀಯರು) ಈ ವಿಚಾರದಲ್ಲಿ ಗಮನ ಹರಿಸಬೇಕಾಗಿದೆ.

ಹಿಂದೂ ಸಾಗರವು ಒಂಟಿಯಾಗಿ ಉಳಿಯುತ್ತದೆಂಬ ಆಧಾರರಹಿತ ಯೋಚನೆಗಳಿಗೆ ಹೊಂದಿಕೊಳ್ಳದೇ ಎಚ್ಚರಿಕೆ ವಹಿಸಬೇಕಾಗುತ್ತದೆ.

ಜಪಾನೀಯರು ಸಿಂಗಪುರ ಮತ್ತು ಅಂಡಮಾನ್ ದ್ವೀಪಗಳನ್ನು ಕೆಲಕಾಲ ಹಿಡಿದಿದ್ದ ಸಂಗತಿ (ಎರಡನೇ ಮಹಾಯುದ್ಧ ಕಾಲದಲ್ಲಿ) ನಮ್ಮನ್ನು ಎಚ್ಚರಿಸಬೇಕಾಗಿದೆ. ಪೂರ್ವದಿಂದ ಬರಬಹುದಾದ ಸಂಕಷ್ಟಗಳಿಗೆ ನಾವು ಸಿದ್ಧರಾಗಿರಬೇಕಾಗಿದೆ. ೧೯ನೇ ಶತಮಾನ ಅಂತ್ಯದವರೆಗೆ ಫೆಸಿಫಿಕ್ ಸಾಗರವು ಹೆಚ್ಚು ಪ್ರಾಮುಖ್ಯತೆ ಪಡೆದಿರಲಿಲ್ಲ, ಪ್ರಪಂಚ ವ್ಯವಹಾರಗಳ ದೃಷ್ಟಿಯಲ್ಲಿ. ಆದರೆ ಈಗ ಕಾಲ ಬದಲಾಗಿದೆ. ವಾಷಿಂಗ್‌ಟನ್ ಕಾನ್ಫರೆನ್ಸ್‌ನಲ್ಲಿ ಶಾಂತಿಸಾಗರದ ಪಾತ್ರ ನಿರ್ಧಾರವಾಗಿದೆ.

ಕೆಲಕಾಲ ಜಪಾನ್‌ನ ನೌಕಾಬಲದ ರೆಕ್ಕೆಗಳು ಮುರಿದಿದ್ದರೂ ಶಾಂತಿಸಾಗರ ನೌಕಾಶಾಹಿಗಳ ಪೈಪೋಟಿ ಸ್ಥಾನವಾಗಿ ಬಾಕಿ ಏಷ್ಯಾ ರಾಷ್ಟ್ರಗಳು ಶಾಂತಿಸಾಗರದ ಮೇಲಿನ ತಮ್ಮ ಹತೋಟಿಯನ್ನು ಯು.ಎಸ್.ಎ.ಗೆ ಸಂಪೂರ್ಣವಾಗಿ ಧಾರೆ ಎರೆದೆವೆಂದು ನಂಬುವುದು ಮೂರ್ಖತನವಾದೀತು. ಚಂಗ್‌ಹೋನ ನೇತೃತ್ವದಲ್ಲಿ ಚೀನಾ ನೌಕಾಬಲವು ಏಷ್ಯಾ ಮೆಡಿಟರೇನಿಯನ್ ಪ್ರದೇಶಗಳ ಮೇಲೆ ಪ್ರಭುತ್ವ ಸಾಧಿಸಿದುದು, ವ್ಯಾಪಾರ ಕಾರಣಗಳಿಗಾಗಿ ಅವು ಹಿಂದೂ ಸಾಗರದಲ್ಲೂ ಓಡಾಡುತ್ತಿದ್ದುವೆಂಬ ಸಂಗತಿ ಅನೇಕರು ಮರೆತಿಲ್ಲ.

ಪೋರ್ಟ್ ಆರ್ಥರ್‌ನಲ್ಲಿ ಸೈನೋ–ರಷ್ಯಾದ ನೌಕಾಪಡೆ ಸದ್ಯಕ್ಕೆ ಹೆಚ್ಚು ಒತ್ತಡವನ್ನು ಅಮೆರಿಕದ ಸಾಗರ ಸಾರ್ವಭೌಮತ್ವದ ಮೇಲೆ ಹೇರದಿದ್ದರೂ, ಮುಂದೊಂದು ದಿನ ಚೀನಾ ಶಾಂತಿಸಾಗರದಲ್ಲಿ ತನ್ನ ಹಕ್ಕು ಸಾಧಿಸಿಕೊಳ್ಳಬಹುದು. ಬ್ರಿಟಿಷರ ಕಾಲದಲ್ಲಿ ಭಾರತದ ಹಿತಾಸಕ್ತಿ ಸಿಂಗಪುರದಿಂದ ಏಡನ್‌ವರೆಗೆ ಮಾತ್ರ ಕೇಂದ್ರೀಕೃತವಾಗಿತ್ತು. ಶಾಂತಿ ಸಾಗರದಲ್ಲಿ ಆಗುತ್ತಿರುವ ಅಶಾಂತಿ ವಾತಾವರಣವು ನಮ್ಮ ಯೋಚನಾ ತರಂಗಗಳನ್ನು ಬೇರೆ ದೃಷ್ಟಿಯಿಂದ ನೋಡುವಂತೆ ಮಾಡಿದೆ.

೪೫೦ ವರ್ಷಗಳು ಯುರೋಪಿಯನ್ನರು ಸಮುದ್ರಗಳ ಮೇಲೆ ದಾಖಲೆ ಸ್ಥಾಪಿಸಿದ ಆಧಿಪತ್ಯ ಈ ನನ್ನ ವ್ಯಾಖ್ಯೆಗೆ ಹೊರಗಾಗಿದೆ. ಆದರೆ ಯಾರಾದರೂ ಈ ವಿಷಯ ತಿಳಿಯಬೇಕೆಂದರೆ ನನ್ನ "ಏಷ್ಯಾ ಮತ್ತು ವೆಸ್ಟರ್ನ್ ಡಾಮಿನೆನ್ಸ್" ಪುಸ್ತಕವನ್ನು ಓದಿ ತಿಳಿಯಬಹುದು. ಈಗ ಈ ಪುಸ್ತಕದಲ್ಲಿ ವಿವೇಚನೆ ಮಾಡಲಾಗಿರುವ ವಿಚಾರಕ್ಕೆ ಹಿಂದಿರುಗೋಣ.

(೧) ಪರರಾಜ್ಯವೊಂದು ಸಮುದ್ರದ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸಿದರೆ, ಅದರಿಂದ ಭಾರತದ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವ ಬೀಳುವುದು ಖಚಿತ. ಚೀನದ ವ್ಯಾಪಾರ ಯಾವಾಗಲೂ ಕಾರ್ವಾನ್ ಮಾರ್ಗಗಳ ಮೂಲಕ ನಡೆಯುತ್ತಿದ್ದರೆ, ಭಾರತದ ವಿದೇಶೀ ವ್ಯಾಪಾರ ಸಮುದ್ರದ ಮೇಲೆಯೇ ನಡೆಯುತ್ತಿತ್ತು. ಒಂಟಿ ಮಾರ್ಗಗಳು ಚೀನಾದ ಆರ್ಥಿಕ ವ್ಯವಸ್ಥೆಯ ಮೂಲವಾಗಿದ್ದರಿಂದ ಅದನ್ನು

ಖಂಡಾಂತರಿಕ ಎಂದು ಹೇಳಬಹುದು. ಆದರೆ ಭಾರತ ಭೂಭಾಗವು ಮೂರು ಕಡೆಗಳಲ್ಲಿ ಸಮುದ್ರದಿಂದ ಆವೃತವಾಗಿರುವುದರಿಂದ ಅದರ ವ್ಯಾಪಾರವು ನೀರಿನ ಮೇಲೆ ಹೆಚ್ಚಾಗಿ ನಡೆಯುತ್ತಿತ್ತು. ಹೀಗಾಗಿ ಪರರಾಷ್ಟ್ರಗಳ ವರ್ತಕರ ಮೇಲೆ ಭಾರತದ ವ್ಯಾಪಾರ ವಹಿವಾಟು ಹೆಚ್ಚಾಗಿ ಅವಲಂಬಿಸಿತ್ತು. ೧೮ ಮತ್ತು ೧೯ನೇ ಶತಮಾನಗಳಲ್ಲಿ ಸಮುದ್ರದ ಮೇಲಿನ ವಹಿವಾಟು ಹೆಚ್ಚಾದ ಮೇಲೆ ಭೂಭಾಗ ಮಧ್ಯದ, ಡೆಲ್ಲಿ ಅಲಹಾಬಾದ್, ಆಗ್ರಾಗಳು ತಮ್ಮ ಪ್ರಾಶಸ್ತ್ಯವನ್ನು ಕಳೆದುಕೊಂಡವು. ಮದರಾಸು, ಬೊಂಬಾಯಿ ಹಾಗೂ ಕಲ್ಕತ್ತಾಗಳು ಪ್ರಾಮುಖ್ಯತೆಗೆ ಬಂದವು. ಗಂಗಾಕಣಿವೆಯ ಉತ್ಪನ್ನಗಳನ್ನು ಸಮುದ್ರತೀರದ ಬಂದರುಗಳಿಗೆ ಸಾಗಿಸಲು ಭೂರೈಲ್ವೆ ಮಾರ್ಗಗಳಾದುವು. ಆದರೆ ಒಳಪ್ರದೇಶಗಳಿಗೆ ಈ ಸಂಪರ್ಕ ಬ್ರಿಟಿಷರ ಕಾಲದಲ್ಲಿ ಏರ್ಪಡಲಿಲ್ಲ. ಹೀಗಾಗಿ ಈ ಒಳಪ್ರದೇಶಗಳು ಹೆಚ್ಚು ಅಭಿವೃದ್ಧಿ ಹೊಂದದೆ, ಹಿಂದುಳಿದವು. ಜಮೀನುದಾರಿ ಪದ್ಧತಿಯನ್ನು ಉತ್ತೇಜಿಸಿ ರಾಜರುಗಳ ಮೂಲಕ ಬಂದರುಗಳಲ್ಲಿದ್ದ ತಮ್ಮ ರಾಜ್ಯ ಪದ್ಧತಿಯನ್ನು ಹೇರದೆ ಬಿಟ್ಟು, ತಮ್ಮ ಆಧಿಪತ್ಯವನ್ನು ಪರೋಕ್ಷವಾಗಿ ಹೇರಿ, ಈ ರಾಜ ಜಮೀನುದಾರರನ್ನು ಕಚ್ಚಾ ವಸ್ತುಗಳನ್ನು ಬ್ರಿಟಿಷರಿಗೆ ಸರಬರಾಜು ಮಾಡುವ ಏಜೆಂಟರನ್ನಾಗಿ ಮಾಡಿಕೊಂಡರು. ಇದರಿಂದ ಸ್ವದೇಶೀ ಕೈಗಾರಿಕೆಗಳು ನಶಿಸಿಹೋಗಿ ಭಾರತವು ೧೮, ೧೯ನೇ ಶತಮಾನಗಳಲ್ಲಿ ಬ್ರಿಟಿಷರ ಆಡಳಿತಕ್ಕೆ ಸಂಪೂರ್ಣವಾಗಿ ಬಂದಿತು. ತನ್ನ ಸ್ವಂತಿಕೆಯನ್ನು ಕಳೆದುಕೊಂಡಿತು.

(೨) ನೌಕಾಬಲಗಳು, ಸುವ್ಯವಸ್ಥಿತವಾಗಿ ಸಂಘಟಿಸಲ್ಪಟ್ಟ ರಾಜ್ಯಗಳ ಆಗುಹೋಗುಗಳ ಮೇಲೆ ಹೆಚ್ಚು ಪ್ರಭಾವವನ್ನು ಬೀರಲಾಗದಿದ್ದರೂ ಕ್ರಿ.ಶ. ೧೫೦೦ ರಿಂದ ಭಾರತದ ಚರಿತ್ರೆಯಲ್ಲಿ ಬ್ರಿಟಿಷರು ಭೂಸಂಘಟನೆಯನ್ನು ಸಾಧಿಸುವವರೆಗೆ ಸಮುದ್ರ ಶಕ್ತಿಗಳ ಮುಂದೆ ತನ್ನ ಹಿತವನ್ನು ಕಾಪಾಡಿಕೊಂಡು ಬರಲು ಶಕ್ತವಾದ ಸಂಗತಿ ಎದ್ದು ಕಾಣುತ್ತದೆ. ಅಕ್ಬರ್ ಮೆಕ್ಕಾ ಯಾತ್ರಿಕರಿಗೆ ಸಮುದ್ರದ ಮೇಲೆ ಯಾನರಕ್ಷಣೆಯನ್ನು ಕೊಡಲಾಗಲಿಲ್ಲ. ಮೊಗಲ್ ನೌಕೆಗಳು ಪೋರ್ಚುಗೀಸರ ಪರವಾನಿಗೆ ಇಲ್ಲದೆ ಪರ್ಷಿಯಾದ ಖಾರಿಯನ್ನು ತಲುಪುವಂತಿರಲಿಲ್ಲ. ಸಮುದ್ರದ ರಾಜರೆಂದೇ ನಾಮಾಂಕಿತರಾದ ಪೋರ್ಚುಗೀಸರೇ ಆಗಲಿ, ಡಚ್ಚರೇ ಆಗಲಿ ಬ್ರಿಟಿಷರೇ ಆಗಲಿ ಭಾರತದ ಸುಸಂಘಟಿತ ಭೂರಾಜ್ಯಗಳ ಮೇಲೆ ಆಧಿಪತ್ಯ ಸಾಧಿಸಲು ಸಾಧ್ಯವಾಗಲಿಲ್ಲ–ಪ್ರಾರಂಭದಲ್ಲಿ ಆಲ್ಬುಕರ್ಕ್ ಕಾಲಿಕಟ್ ಮೇಲೆ, ಬ್ರಿಟಿಷ್ ಕಾರ್ಖಾನೆಗಳು ಶಹಜಹಾನರ ಆಜ್ಞೆಯನ್ನು ಉಲ್ಲಂಘಿಸಿದಾಗ, ಡಚ್ಚರು ಟ್ರಾವಂಕೂರ್ ಮೇಲೆ ದಂಡೆತ್ತಿ ಹೋದಾಗ ಅನುಭವಿಸಿದ ಸೋಲು ಈ ಸಂಗತಿಯನ್ನು ಎತ್ತಿ ತೋರಿಸುತ್ತದೆ.

(೩) ನೌಕಾಬಲ ಸರ್ವವ್ಯಾಪಿ ವಿಭಾಗಿಸಲಾಗದ ಸಾಗರ ಹರವು ಬೈಬಲ್‌ನಲ್ಲಿ ಉಲ್ಲೇಖಿಸಿರುವಂತೆ "ದೇವನು ಹೇಳಿದನು ನಾವು ಒಂದು ಜಾಗದಲ್ಲಿ

ಶೇಖರವಾಗಲಿ." ಆಗ ಸಮುದ್ರಗಳಾದುವು. ಪ್ರವಾದಿ ಮಹನ್ ಮೇಲಿನ ಬೈಬಲ್ಲಿನ ವಾಕ್ಯವನ್ನು ಉದಾಹರಿಸುತ್ತಾನೆ. ಈ ಅಂಶ ಮೂರು ಕಡೆಗಳಿಂದ ಆವೃತವಾಗಿರುವ ಭಾರತಕ್ಕೆ ಬಹಳ ಮುಖ್ಯವಾಗುತ್ತದೆ. ಭೂಶಕ್ತಿಗಳಿಗೆ ದೂರ ಒಂದು ಆತಂಕ. ಹೀಗಾಗಿ ಅತಿ ಬಲಶಾಲಿಯಾಗಿದ್ದ ರೋಂ ಚಕ್ರಾಧಿಪತ್ಯದಿಂದ ಭಾರತಕ್ಕೆ ಯಾವ ಧಕ್ಕೆಯೂ ಆಗಲಿಲ್ಲ. ಹಾನ್‌ಸಿರುವಾಗಲೀ ಟಾಂಗ್‌ಸರುಗರಾಗಲಿ, ತಮ್ಮ ಉಚ್ಛ್ರಾಯ ಸ್ಥಿತಿಯಲ್ಲಿ ಕೂಡ ಭಾರತದ ಮೇಲೆ ದಂಡೆತ್ತಿ ಬರಲಿಲ್ಲ. ಭೂ ಚಕ್ರಾಧಿಪತ್ಯಗಳನ್ನು ದೂರ ಮತ್ತು ಭೌಗೋಳಿಕ ಅಂಶಗಳು ಅಂಕುಶದಲ್ಲಿಡುತ್ತವೆ. ಆದರೆ ಸಮುದ್ರದ ಮೇಲಿನ ಹಿಡಿತ ಹಾಗಲ್ಲ. ಕೇವಲ ಮಿಲಿಯನ್ ಜನಸಂಖ್ಯೆ ಇದ್ದ ಪೋರ್ಚುಗಲ್ ಹಿಂದೂ ಸಾಗರವನ್ನೂ, ಅಲ್ಲಿನ ವ್ಯಾಪಾರವನ್ನೂ ತನ್ನ ಅಧೀನದಲ್ಲಿಟ್ಟುಕೊಂಡಿತು. ಬ್ರಿಟನ್ ಕೂಡ ಕೇವಲ 20 ಮಿಲಿಯನ್ ಜನಸಂಖ್ಯೆ ಇದ್ದರೂ ಭೂಮಿಯ ಅರ್ಧಭಾಗದಷ್ಟೇ ದೂರದಲ್ಲಿದ್ದ ಭಾರತವನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡಿತು.

(೪) ನೌಕಾಬಲದಿಂದ ಒಂದು ದೇಶವನ್ನು ಆಕ್ರಮಿಸುವುದು ಭೂಸೈನ್ಯದಿಂದ ಅದೇ ಕೆಲಸ ಮಾಡುವುದಕ್ಕಿಂತ ವಿಭಿನ್ನವಾಗಿರುತ್ತದೆ. ಅನೇಕಾನೇಕ ಸಲ ಪರ ರಾಷ್ಟ್ರಗಳು ಭಾರತದ ಮೇಲೆ ದಾಳಿ ಮಾಡಿ ರಾಜ್ಯಭಾರ ಮಾಡಿದರೂ, ಅವುಗಳ ರಾಜಧಾನಿ ಭಾರತದೊಳಗೆ ಇರುತ್ತಿತ್ತು. ಆಗಲೆ ಬ್ರಿಟಿಷರು ಸಾವಿರಾರು ಮೈಲಿ, ಉತ್ತರ ಸಮುದ್ರದಲ್ಲಿದ್ದ ತಮ್ಮ ರಾಜಧಾನಿಯಿಂದ ಭಾರತದ ಆಧಿಪತ್ಯವನ್ನು ಸಾಧಿಸಿದರು. ಕುಶಾನರು, ಹೂಣರು, ಟರ್ಕರು, ಮೊಗಲರು ಭಾರತದ ಕೆಲವು ಪ್ರದೇಶಗಳನ್ನು ಆಕ್ರಮಿಸಿದ್ದರು. ಆದರೆ ಅವರ ರಾಜಧಾನಿ ಭಾರತದೊಳಗೇ ಇತ್ತು. ಕಾನಿಷ್ಕ ಪೇಶಾವರಿನಿಂದ ಆಳಿದ. ಅವನ ಮೊಮ್ಮಗ ವಾಸುದೇವನಾದ. ಮಿಹಿರಗುಲ ಮತ್ತು ತೋರಮಾನರು ಭಾರತದ ಜನರ ಮೇಲೆ ಎಸಗದ ಅತ್ಯಾಚಾರಗಳಿರಲಿಲ್ಲ. ಆದರೂ ಹೂಣರು ಕೊನೆಗೆ ಭಾರತೀಯರೇ ಆದರು. ಖಿಲ್ಜಿ ಮತ್ತು ತುಘಲಕ್‌ರು ಭಾರತದಲ್ಲಿ ವಿಲೀನವಾಗಿ ಇಲ್ಲಿಯವರೇ ಆದರು. ಭಾರತದಲ್ಲಿ ನೆಲೆಸಿದ ಮೇಲೆ ಮೊಘಲರು ಕೂಡ, ಆಗ್ರಾವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು. ಮಧ್ಯ ಏಷ್ಯಾದ ತಮ್ಮ ತಾಯಿನಾಡಿನೊಡನೆ ಸಂಪರ್ಕ ಕಳೆದುಕೊಂಡರು. ಆದರೆ ಬ್ರಿಟಿಷರು ಮಾತ್ರ ಭಾರತವನ್ನು, ತಮ್ಮ ರಾಜಧಾನಿಯಾದ ಸಾವಿರಾರು ಮೈಲಿ ದೂರದಲ್ಲಿದ್ದ ಲಂಡನ್ನಿನಿಂದಲೇ ಆಳಿದರು. ಭಾರತವು ಒಂದು ದೊಡ್ಡ ಚಕ್ರಾಧಿಪತ್ಯದ ಒಂದು ಭಾಗವಾಗಿತ್ತು. ಹಿಂದೆ ಸರ್ವ ವ್ಯಾಪಿಯಾದ ಸಮುದ್ರದ ಹಿಡಿತ ಸಾಧಿಸಿದ ಬ್ರಿಟಿಷರು ಭಾರತವನ್ನು ಲಂಡನ್ನಿನಿಂದಲೇ ಆಳಿದ ಸಂಗತಿ ನಾವು ಗಮನಿಸಬೇಕಾದ ವಿಚಾರ.

* * * *

ಅಧ್ಯಾಯ ೫

ಆಕ್ರಮಣದ ಮಾರ್ಗಗಳು

ಪ್ರಪಂಚದ ಎಲ್ಲ ರಾಷ್ಟ್ರಗಳಿಗೂ ಆದಂತೆ ಭಾರತದ ಮೇಲೆ ಅನೇಕಾನೇಕ ಆಕ್ರಮಣಗಳಾಗಿವೆ. ಇವುಗಳಲ್ಲಿ ಕೆಲವು ಜನಾಂದೋಲನ ಚಲನೆಗಳಾದರೆ ಉಳಿದವು ಮಹತ್ವಾಕಾಂಕ್ಷೆಯ ಸೈನ್ಯಪ್ರಭೃತಿಗಳ ಹೆಬ್ಬಯಕೆಗಳಿಂದಾದುವು. ಅಲೆಕ್ಸಾಂಡರನ ದಂಡಯಾತ್ರೆ, ತೈಮೂರ್‌ಲೇನ್‌ನ ದಂಡಯಾತ್ರೆ ಹಾಗೂ ನಾದಿರ್‌ಖಾನನ ದಂಡಯಾತ್ರೆಗಳು ಮಹತ್ವಾಕಾಂಕ್ಷೆಯ ಆಕ್ರಮಣಗಳು. ಇವು ಭಾರತವನ್ನು ತಲ್ಲಣಗೊಳಿಸಿದುದಲ್ಲದೇ ಭರಿಸಲಾರದ ಸಾವು ನೋವು ನಾಶಗಳನ್ನು ಹಿಂದೆ ಬಿಟ್ಟು ಹೋದುವು. ಆದರೆ ಶಾಶ್ವತವಾಗಿ ನಿಲ್ಲಲಿಲ್ಲ. ಯಾವ ಪರಿಣಾಮವನ್ನು ಬೀರಲಿಲ್ಲ. ಪರ್ಷಿಯಾ ಪ್ರಾಂತದ ಒಂದು ಭಾಗವಾಗಿ ನಿಂತ ಪಂಜಾಬ್ ಅಲೆಕ್ಸಾಂಡರ್ ಸತ್ತ ಕೆಲವರ್ಷಗಳಲ್ಲೇ ಮೌರ್ಯರ ವಶವಾಯಿತು–ಚಂದ್ರಗುಪ್ತನ ಕಾಲದಲ್ಲಿ. ಆದರೆ ಜನಾಂಗಗಳ ಸ್ಥಳಾಂತರಿತ ಚಲನೆಯಿಂದಾದ ಆಕ್ರಮಣಗಳು ಬೇರೆಯೇ ಆದ ಪರಿಣಾಮಗಳನ್ನು ಉಂಟು ಮಾಡಿದುವು. ಇವು ಜನರ ಸ್ವಭಾವಗಳನ್ನೇ ಬದಲಾಯಿಸುವ ಹಳೆಯ ಸಂಸ್ಕೃತಿಯನ್ನು ತಲ್ಲಣಗೊಳಿಸಿ ಹೊಸದೊಂದನ್ನು ಸ್ಥಾಪಿಸುವ, ಸ್ಥಳೀಯ ಜನರನ್ನು ಅವರ ವಾಸಸ್ಥಾನಗಳಿಂದ ಉಚ್ಚಾಟಿಸುವ ಎರಡು ಜನಾಂಗಗಳು ಹೊಂದಾಣಿಕೆ ಮಾಡಿಕೊಂಡು ಹೊಸರೀತಿಯಲ್ಲಿ ಜೀವಿಸುವ ಬದಲಾವಣೆಗಳನ್ನು ತರುತ್ತವೆ. ಹೀಗೆ ಆದ ಮೊದಲ ಆಕ್ರಮಣ ಆರ್ಯರ ಬರುವಿಕೆಯಿಂದಾಯಿತು. ಇದಕ್ಕೆ ಅನೇಕಾನೇಕ ಆಧಾರಗಳಿವೆ. ಆಲ್‌ಪೈನ್ ಜನಾಂಗಗಳ ಬರುವಿಕೆಗೆ ಪಂಡಿತರುಗಳು ಒಮ್ಮತದ ನಿರ್ಧಾರ ಕೊಟ್ಟಿಲ್ಲ. ಈ ಆಕ್ರಮಣ ಭಾರತದ ಮೇಲೆ ಹೆಚ್ಚು ಪ್ರಭಾವವನ್ನು ಬೀರಲಿಲ್ಲ. ಹಾಗೆಯೇ ದಕ್ಷಿಣದಲ್ಲಿ ಪಾಲಿನೇಷಿಯನ್ ಜನಾಂಗದ ವಲಸೆ ಪ್ರಭಾವಗಳ ಮೇಲೆ ಹೆಚ್ಚು ಬೆಳಕು ಬೀರಲೂ ಆಗುತ್ತಿಲ್ಲ. ಈ ರೀತಿಯ ಜನ ಚಲನೆಗಳು ಆಗಿರಬಹುದು. ಆದರೆ ನಿಖರವಾಗಿ ನಾವು ಏನೂ ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ನಮಗೆ ಈ ಬಗ್ಗೆ ತಿಳಿದಿರುವ ಸಂಗತಿಗಳು ಬಹಳ ಸ್ವಲ್ಪ. ಅದರ ವಿಚಾರದಲ್ಲಿ ನಮಗೆ ಋಗ್ವೇದದಿಂದ ನಿಖರ ಆಧಾರಗಳೂ ದೊರಕಿವೆ. ಹಿಂದೂಗಳಿಗೆ ಋಗ್ವೇದ ಸಂಹಿತೆಯು ಒಂದು ಪವಿತ್ರ ಮತ ಗ್ರಂಥ.

ಇದರಲ್ಲಿ ಅದರ ವೇದಾಂತ, ಅಧ್ಯಾತ್ಮ ತತ್ವಗಳು ಅಡಗಿವೆ. ಆದರೆ ಚರಿತ್ರೆ ಮತ್ತು ಭೂಗೋಳದ ವಿದ್ಯಾರ್ಥಿಗೆ ಇದೊಂದು ಬೆಲೆ ಕಟ್ಟಲಾಗದ ಜ್ಞಾನಭಂಡಾರ, ಆಧಾರಗಳ ಆಗರ. ಕಾಬೂಲ್ ಕಣಿವೆಯಿಂದ ಬಂದ ಆರ್ಯರ ಚರಿತ್ರೆ, ಆ ಭಾಗಗಳ ಭೌಗೋಳಿಕ ಅಂಶಗಳು, ಆರ್ಥಿಕ ಸ್ಥಿತಿಗತಿಗಳ ವಿವರಣೆ, ಹೇರಳವಾಗಿದೆ. ನೂರಾರು ವರ್ಷಗಳಲ್ಲಿ ನಡೆದ ವಿದ್ಯಮಾನಗಳನ್ನು ನಾವು ವೇದಗಳಲ್ಲಿ ಕಾಣಬಹುದು. ಈ ವೇದಗಳ ಕಾಲ ಆರ್ಯರು ಗಂಗಾ ಯಮುನಾ ತಟಗಳನ್ನು (ದೋಆಬ್) ಸೇರಿದ ಮೇಲೆ ಮುಕ್ತಾಯವಾಗುತ್ತದೆ.

ಆಯಿಕಿಯ ಮತ್ತು ಸುಷೋಮ "ಈ ನನ್ನ ಗಂಗಾ, ಯಮುನಾ, ಸರಸ್ವತಿ, ಶುತುದ್ರಿ, ಮರುವ್ರಿಧಾ ವಿತಸ್ತ ಮತ್ತು ಅಸಿಕ್ನಿಗಳ ಹೊಗಳಿಕೆಯನ್ನು" ಕೇಳಿ ಎಂದು ಋಗ್ವೇದದ ಸಂಹಿತೆಯೊಂದು ಸಾರುತ್ತದೆ. (ಸಂಹಿತೆ x ೬.೭) ಈ ಪ್ರಸಿದ್ಧ ವರ್ಣನೆ.

ಗಂಗಾ ಯಮುನಾ – ದೋಆಬ್‌ನ ಆರ್ಯಾವರ್ತದ ಆರ್ಯರು ಸರಯೂ ನದಿ ಬಿಟ್ಟು ಬೇರಾವ ನದಿಯ ಪರಿಚಯವಿಲ್ಲದವರೆಂದು ಕಾಣುತ್ತದೆ. ಈ ಸರಯೂ ಈಗ ಅಯೋಧ್ಯೆಯಲ್ಲಿ ಹರಿಯುವ ನದಿಯೇ? ಎಂಬ ಸಂಶಯವೂ ಇದೆ. ವೇದದ ಕಾಲ ಮುಗಿಯುವುದರೊಳಗೇ ಜನಹರಿವು ಕಮ್ಮಿಯಾಗಿತ್ತು. ಪಂಜಾಬಿನ ಮತ್ತು ದೋಆಬ್‌ನ ಆರ್ಯರು ತಮ್ಮ ತಮ್ಮಲ್ಲೇ ಕಾದಾಡಲು ಪ್ರಾರಂಭಿಸಿದರು. ಹೊಸಬರು ಬಂದು ಸೇರಿದುದರಿಂದ ಪೆಡೆಸುಗೊಂಡು ಪ್ರಸಿದ್ಧವಾದ ವರುಶಿನಿ ಯುದ್ಧದಲ್ಲಿ, ಯಮುನಾ ಮತ್ತು ತ್ರಿತ್‌ಸತ್‌ನ ಸೈನ್ಯಗಳು ಸುದಾಸನ ನೇತೃತ್ವದಲ್ಲಿ ಅರವತ್ತು ಸಾವಿರಕ್ಕೂ ಹೆಚ್ಚು ಶತ್ರು ಸೈನಿಕರನ್ನು ಹತಮಾಡಿದವು. ಹೀಗೆ ಸತ್ತವರಲ್ಲಿ ತುರ್‌ವಸನ ಹಿಂಬಾಲಕರು (ಯದುವಿನ ಮಗ) ಹಾಗೂ ಭೇಡ ಎಂಬ ಪುಂಡನೂ ಸೇರಿದ್ದರು. (ಋಗ್ವೇದದ ಅನುವಾಕ II (VII-2-1) ಋಗ್ವೇದದ ಪಾಠ V13ರಲ್ಲಿ ಧೀರಶೂರ ಇಂದ್ರನೂ ದಾಸ ಮತ್ತು ಆರ್ಯಕುಲದ ಶತ್ರುಗಳನ್ನು ನಾಶಮಾಡಿದ ಸಂಗತಿ ವಿವರಿಸಿದೆ. ಹತ್ತು ರಾಜರ ಯುದ್ಧದಿಂದ ಆರ್ಯರ ದಾಳಿ ಕೊನೆಗೊಂಡಂತೆ ಕಾಣುತ್ತದೆ. ಕುರು ಪಾಂಚಾಲ ಪ್ರದೇಶದ ವಸಾಹತುವಿನ ರಾಜರು, ಅಲ್ಲಿ ನೆಲಸಿದ್ದ ಪೂರ್ವಜರೊಡನೆ ಸೇರಿ ಆರ್ಯರ ದಾಳಿಗಳಿಗೆ ಮಂಗಳ ಹಾಡಿದರು. ಇಲ್ಲಿ ಗಮನಿಸಬೇಕಾದ ವಿಚಾರ ವಜ್ರಾಯುಧದಾರಿ ಇಂದ್ರನ ಕೋಟೆಗಳನ್ನು ಧ್ವಂಸಮಾಡಿದ, ಇಂದ್ರ ಸುದಾಸನ ಪರ ಇದ್ದ ಎಂಬುದು.

ಹತ್ತು ರಾಜರ ಯುದ್ಧ ಚರಿತ್ರೆಯಲ್ಲಿ ಅತಿ ಪ್ರಮುಖವಾದ ಒಂದು ಹೆಗ್ಗುರುತು. ಭಾರತದ ಚರಿತ್ರೆಯ ಮೇಲೆ ಇದರ ಪರಿಣಾಮ ಮಹತ್ವವಾದುದು. ಮುಂದಿನ ಪೀಳಿಗೆಗಳ ಚರಿತ್ರೆಯನ್ನೇ ಬೇರೆ ದಿಕ್ಕಿಗೆ ತಿರುಗಿಸಿದ ಸಂಗತಿ. ಇಲ್ಲಿಂದಲೇ ಹಿಂದೂ ಸಂಸ್ಕೃತಿ ಬೆಳೆದುದು–ಆರ್ಯರ ಮತ್ತು ಪೂರ್ವ ನಿವಾಸಿಗಳ ಮಿಲನದಿಂದ. ಇಲ್ಲಿಂದ

ಮುಂದೆ ಆರ್ಯ ವಂಶವಾಹಿನಿಗಳ ಪ್ರಭಾವ ಕಡಿಮೆಯಾಗಿ ಹಾಗೂ ಸಂಸ್ಕೃತಿಯ ಹರವು, ದಕ್ಷಿಣದ ಪೂರ್ವನಿವಾಸಿಗಳಿಂದ ಸಿಂಧೂ–ಗಂಗಾನದಿ ಪ್ರದೇಶಗಳಲ್ಲಿ ಅವರದೇ ಆದ ಆಚಾರ ವ್ಯವಹಾರಗಳು ಆರ್ಯರ ಸಂಸ್ಕೃತಿಯೊಡನೆ ಹೆಚ್ಚು ಹೆಚ್ಚು ಮಿಲನವಾಗಿ ಹೊಸ ಹಿಂದೂ ಸಂಸ್ಕೃತಿಯೊಡನೆ ಬೆಳೆಯಿತು. ಇದಾದ ಸಾವಿರ ವರ್ಷಗಳಾದರೂ ಪ್ರಾದೇಶಿಕ ಪುರಾತನ ಪಂಗಡಗಳು ಆರ್ಯರ ಹೆಚ್ಚು ಸೋಂಕಿಲ್ಲದೆ ಪ್ರವರ್ಧಮಾನಕ್ಕೆ ಬರುತ್ತಿದ್ದುವು.

ನಿಯೋ ಆರ್ಯಾನಿಸಂ ಅಥವಾ ಹಿಂದುತ್ವ ಹುಲ್ಲುಗಾವಲಿನ ಆರ್ಯರ ಮತ್ತು ಮೂಲನಿವಾಸಿಗಳ ಮಿಲನದಿಂದ ಪರಿವರ್ತಿತವಾದ ಸಂಸ್ಕೃತಿಯು ಹೊಸ ಧರ್ಮದ ತಳಹದಿ. ಐತ್ತರೇಯ ಬ್ರಾಹ್ಮಣ, ಋಗ್ವೇದದ ಮುಖ್ಯ ವಿಭಾಗ. ಒಬ್ಬ ಆರ್ಯ ಋಷಿಗೆ ಒಬ್ಬ ಸ್ಥಳೀಯ ಸ್ತ್ರೀಯಲ್ಲಿ ಹುಟ್ಟಿದ ಮಗನಿಗೆ ತಂದೆಯು ವೇದೋಪದೇಶ ಮಾಡುವುದಿಲ್ಲವೆಂದು ಶಪಥ ಮಾಡಿದ. ಆ ಮಗನಿಂದ ರಚಿತವಾದದ್ದು ಹಾಗೆಯೇ. ವೇದಗಳನ್ನು ಸಂಹಿತೆಗಳಾಗಿ ವಿಂಗಡಿಸಿದ ಬಾದರಾಯಣ ಒಬ್ಬ ಕರಿಮನುಷ್ಯ. ಅವನ ತಾಯಿ ಒಬ್ಬ ಸ್ಥಳೀಯ ಹೆಂಗಸು. ವೇದಗಳ ಕಾಲ ಮುಗಿಯುವುದಕ್ಕೆ ಮೊದಲೇ ಈ ಬೆರಕೆ ವಿವಾಹಗಳು ಋಷಿಗಳಿಂದಲೇ ಪ್ರಾರಂಭವಾಗಿದ್ದವು.

ಈ ಹೊಸ ಆರ್ಯರು ಕಾಲಾಂತರದಲ್ಲಿ ಗುಜರಾತ್ ಮತ್ತು ಮಾಳ್ವಾಗಳಿಗೂ ಗಂಗಾತಟದಿಂದ ಬಂದು ನೆಲಸಿದರು. ಆದರೆ ಐರಾವತಿ ಕರ್ವೆ ನಿಗದಿಯಾಗಿ ಹೇಳುವಂತೆ ಈ ಹೊಸ ಆರ್ಯರ ಪ್ರಭಾವ ಸ್ಥಳೀಯರ ಮೇಲೆ ಹೆಚ್ಚಾಗಿ ಆಗಲಿಲ್ಲ. ಮನುಷ್ಯ ಶರೀರ ರಚನಾ ಶಾಸ್ತ್ರದ ಪ್ರಕಾರ ಹಾಗೂ ಬಾಂಧವ್ಯ ತೀರಿ ರೀತಿಗಳಿಂದ ಈ ವಿಚಾರ ಸ್ಪಷ್ಟವಾಗುತ್ತದೆ. ಅನೇಕ ಶತಮಾನಗಳವರೆಗೆ ಹೊಸ ಆರ್ಯರು ದಖನ್ ಪ್ರಸ್ಥಭೂಮಿಗೆ ಆಗಮಿಸಲಿಲ್ಲ.

ಇಂದಿಗೂ ಮೂಲನಿವಾಸಿಗಳು ದಕ್ಷಿಣ ಬಿಹಾರ, ಮಧ್ಯಪ್ರದೇಶ ಮತ್ತು ಪೂರ್ವಭಾಗಗಳಲ್ಲಿ ವಾಸಿಸುತ್ತಿರುವುದು, ಆರಾವಳಿ ವಿಂಧ್ಯಾ ಶ್ರೇಣಿಗಳು ಬಿಲ್ಲರು ಪ್ರಬಲರಾಗಿರುವ ಸಂಗತಿ, ಆರ್ಯರು ಇಲ್ಲಿಗೆ ಬಂದಾಗಲಂತೂ ಹೆಚ್ಚು ಬದಲಾವಣೆಗಳೂ ಆಗಲಿಲ್ಲ. ಆರ್ಯರ ವಲಸೆ ಗಂಗಾತೀರದಲ್ಲಿ ನೆಲೆಯಾದ ಮೇಲೆ ಹಿಂದೂ ಸಂಸ್ಕೃತಿ ಆರ್ಯ ಭಾಷೆಯ ಪ್ರಭಾವ ನಿಧಾನವಾಗಿ ಭಾರತದಲ್ಲೆಲ್ಲಾ ಹರಡಿದರೂ, ಇವತ್ತಿಗೂ ಉತ್ತರ ಭಾರತದಲ್ಲಿ ಕೂಡ ಪಂಜಾಬ್ ಬಿಟ್ಟರೆ ಬೇರೆಲ್ಲೂ ಹೆಚ್ಚು ಪ್ರಭಾವ ಬೀರಲಿಲ್ಲ ಎಂಬ ಸಂಗತಿ ನೆನಪಿರಬೇಕು. ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಈ ಹೊಸ ಆರ್ಯರು ತಮ್ಮ ಭಾಷಾಪ್ರಭಾವವನ್ನು ಬೀರಿದರೆ, ದಖನ್ ಪ್ರಸ್ಥಭೂಮಿಯಲ್ಲಿ ದ್ರಾವಿಡರ ಭಾಷೆಗಳು ತಮ್ಮತನವನ್ನು ಉಳಿಸಿಕೊಂಡವು. ಆರ್ಯ ಸಂಸ್ಕೃತಿ ದಕ್ಷಿಣಕ್ಕೆ ಹರಡಲು ಶುರುವಾದದ್ದು ಅಗಸ್ತ್ಯ ಋಷಿ ವಿಂಧ್ಯದ

ಪರ್ವತವನ್ನು ದಾಟಿದ ಮೇಲೆ ಕ್ರಿ.ಶ. ಒಂದನೇ ಶತಮಾನದಲ್ಲಿ. ಪೈಶಾಚಿಕ ಸಂಪ್ರದಾಯಗಳು ಶಾತವಾಹನರ ಕಾಲದಲ್ಲೂ ಪ್ರಚಾರದಲ್ಲಿದ್ದ ಸಂಗತಿ ನೆನಸಿಕೊಂಡರೆ ಈ ಸಂಗತಿ ವೇದ್ಯವಾಗುತ್ತದೆ.

ಆರ್ಯರ ದಾಳಿ ಬಹಳ ಪ್ರಮುಖವಾದುದಾದರೂ ಅದರ ಸಂಸ್ಕೃತಿಯ ಪ್ರಭಾವ ಪಂಜಾಬ್ ಬಿಟ್ಟರೆ ಬೇರೆಲ್ಲೂ ಅತಿಯಾಗಿರಲಿಲ್ಲ. ಮುಂದಿನ ದಾಳಿ ಪರ್ಶಿಯದ ಅಕಮೀಡಿಯನ್ ರಾಜರುಗಳು ಪಂಜಾಬ್ ಮತ್ತು ಬಿಯಾಸ್ ನದಿ ಪ್ರದೇಶಗಳನ್ನು ಗೆದ್ದಾಗ. ಆದರೆ ಪರ್ಶಿಯನ್ನರ ಪ್ರಭಾವ ಭಾರತದ ಮೇಲೆ ಹೆಚ್ಚಾಗಿ ಇರಲಿಲ್ಲ, ಕಲೆ ಮತ್ತು ವಾಸ್ತು ಶಿಲ್ಪಗಳನ್ನು ಬಿಟ್ಟರೆ, ಯುರೋಪಿಯನ್ನರ ದೃಷ್ಟಿಯಲ್ಲಿ ಅಲೆಗ್ಸಾಂಡನ ದಾಳಿ ಮುಂದೆ ಯುರೋಪಿಯನ್ ದಾಳಿಗಳಿಗೆ ಪೂರ್ವಸೂಚನೆ ಎಂದು ಬಗೆದರೂ, ಅದೊಂದು ಎಲ್ಲಾ ವಿಭಾಗಗಳಲ್ಲೂ ನಿಕೃಷ್ಟ ದಾಳಿಯಾಗಿತ್ತು.

ಆರ್ಯರಾದ ಮೇಲೆ ಯೂಚಿಗಳ ದಾಳಿ ಮುಖ್ಯವಾದುದು. ಇದೊಂದು ಅನಾಗರಿಕ ಬುಡಕಟ್ಟು ಜನ. ಇವರು ಚೀನಾದ ದಕ್ಷಿಣ ಸ್ಥಾನ ಸಿಂಕಿಯಾಂಗ್ ಮತ್ತು ಕೊಅರಸುಗಳ ಮಧ್ಯಪ್ರದೇಶದ ಮೂಲನಿವಾಸಿಗಳು. ಹೂಣರು ಇವರನ್ನು ಇವರ ಮೂಲಸ್ಥಾನದಿಂದ ಅಟ್ಟಿದರು. ಯೂಚಿಗಳು ಶಕರನ್ನು ಅವರ ಮೂಲಸ್ಥಾನದಿಂದ ಓಡಿಸಿದರು. ಹೀಗಾಗಿ ಕ್ರಿ.ಪೂ. ಒಂದನೇ ಶತಮಾನದಲ್ಲಿ ಶಕರು ಭಾರತದ ಮೇಲೆ ದಂಡೆತ್ತಿ ಬೊಲಾನ್ ಕಣಿವೆ ದಾರಿಯಲ್ಲಿ ಬಂದು ಸಿಂಧ್ ಪ್ರಾಂತ್ಯವನ್ನು ಆಕ್ರಮಿಸಿದರು. ಮುಂದೆ ಉಜ್ಜಯಿನಿಯನ್ನು ಆಕ್ರಮಿಸಿದಂತೆ ಕಾಣುತ್ತದೆ. ಮುಂದೆ ಅರಬ್ಬರು ಮಾಡಿದಂತೆ ಕ್ರಿ.ಪೂ. ೫೭ರಲ್ಲಿ ವಿಕ್ರಮಾದಿತ್ಯನು ಈ ಶಕರನ್ನು ಸೋಲಿಸಿ ಓಡಿಸಿದನು. ಈ ಜಯದ ಸಂಭ್ರಮದಲ್ಲಿ ವಿಕ್ರಮ ಸಂವತ್ಸರ ಶಕೆಯೊಂದು ಪ್ರಾರಂಭವಾಯಿತು. ಶಕರನ್ನು ಸೋಲಿಸಿ ಓಡಿಸಿದರೂ ಹಿಂದೂಕುಶ್ ಕಣಿವೆಯಲ್ಲಿ ನೆಲಸಿದ್ದ ಯುಚಿಗಳು ಭಾರತದ ಮೇಲೆ ಒತ್ತಡ ತರುತ್ತಲೇ ಇದ್ದರು. ಕಾನಿಷ್ಕರ ಆಳ್ವಿಕೆಯಲ್ಲಿ ಅವರ ಸಾಮ್ರಾಜ್ಯ ಮಥುರಾದವರೆಗೆ ಹಬ್ಬಿತ್ತು. ಯುಚಿಗಳು ಹಿಂದೂಕುಶ್ ಪ್ರಾಂತದಲ್ಲಿ ನೆಲಸಿದ ಮೇಲೆ ಹಿಂದಿನಿಂದ ಒತ್ತಡ ಕಡಮೆಯಾಗಿ ಅವರ ರಾಜ್ಯ ವಿಸ್ತಾರವಾಯಿತೇ ಹೊರತು ಅವರ ಸಂಸ್ಕೃತಿ ಯಾವ ಅತಿಯಾದ ಪರಿಣಾಮವನ್ನು ಬೀರಲಿಲ್ಲ ಭಾರತದ ಮೇಲೆ.

ಹೂಣರ ದಾಳಿ ಇದಕ್ಕೆ ವ್ಯತಿರಿಕ್ತವಾದುದು, ಅದೊಂದು ಸಾಗರದೋಪಾದಿಯ ಜನಾಂಗೀಯ ದಾಳಿ. ಅದು ಯುರೋಪಿನ ಹುಲ್ಲುಗಾವಲು ಪ್ರದೇಶಗಳನ್ನು ಗೆದ್ದು ನೆಲೆಸಿ ತಮ್ಮದಾಗಿಸಿಕೊಂಡಿತ್ತು ಹಾಗೂ ಯುರೋಪಿನ ಸಂಸ್ಕೃತಿಯನ್ನು ಧ್ವಂಸಮಾಡಿತ್ತು. ಭಾರತದ ಮೇಲೆ ಎರಡು ನೂರು ವರ್ಷಗಳ ಕಾಲ, ಮೇಲಿಂದ ಮೇಲೆ ನಡೆದ ಹೂಣರ ದಾಳಿ, ಯುರೋಪಿನ ಅದರ ದಾಳಿಗೆ ಹೋಲಿಸಿದರೆ ಇದೊಂದು ಸಣ್ಣ ಜಿನುಗು. ಸಣ್ಣ ಹೂಣರ ಗುಂಪೊಂದು ಭಾರತದ ಗಡಿಯವರೆಗೂ

ಬಂದಿತ್ತು. ಸ್ಕಂದಗುಪ್ತ ಈ ಹೂಣರ ದಾಳಿಯನ್ನು ಎದುರಿಸಿ ಹಿಮ್ಮೆಟ್ಟಿಸಿದ ಹೆಮ್ಮೆಗೆ ಪಾತ್ರನಾಗುತ್ತಾನೆ. ನೂರು ವರ್ಷಗಳೇ ಆದ ಮೇಲೆ ತೊರಮಾನ ಮತ್ತು ಮಿಹಿರಗುಲರ ನೇತೃತ್ವದಲ್ಲಿ ಹೂಣರು ಮತ್ತೆ ಪಂಜಾಬನ್ನು ಪ್ರವೇಶಿಸಿ ಕಂಡಕಂಡದ್ದೆಲ್ಲವನ್ನೂ ಹಾಳುಗಡೆವಿದರು. ಆದರೆ ಇದೊಂದು ಭಾರತದ ಚರಿತ್ರೆಯಲ್ಲಿ ಸ್ಮರಣೀಯ ಸಂಗತಿಯಾಗಿ ಉಳಿಯಿತು. ಹೆಚ್ಚು ಪರಿಣಾಮಕಾರಿಯಾಗಲಿಲ್ಲ. ಸ್ಕಾಂದಗುಪ್ತನ ವಿಜಯ ಭಿಟಾರಿ ಶಾಸನದಲ್ಲಿ ಉಲ್ಲೇಖಿಸಿರುವಂತೆ ಒಂದು ಸಾಟಿಯಿಲ್ಲದ ಚರಿತ್ರಾರ್ಹ ಅಂಶ. ಹೀಗೆ ಮುನ್ನೂರು ವರ್ಷ ಈ ಹೂಣರು ಚೀನಾದ ಮೇಲೆ ಯುದ್ಧ ಮಾಡಿದರೂ ಅದನ್ನು ವಶಪಡಿಸಿಕೊಳ್ಳಲು ಅಸಮರ್ಥರಾಗಿ ತಮ್ಮ ಗಮನವನ್ನು ಪಶ್ಚಿಮದತ್ತ ತಿರುಗಿಸಿ ರೋಂ ಸಾಮ್ರಾಜ್ಯವನ್ನು ನಾಶಮಾಡಿದರು ಎಂದು ಮ್ಯಾಕ್‌ಗೋವರ್ ತನ್ನ "ಅರ್ಲಿ ಎಂಪೈರ್ಸ್ ಆಫ್ ಸೆಂಟ್ರಲ್ ಏಷ್ಯಾ"ದಲ್ಲಿ ಹೇಳಿದ್ದಾನೆ.

ಟರ್ಕಿ ಖಾರಿ ರಾಜ್ಯವು ೫ನೇ ಶತಮಾನದಲ್ಲಿ ದಿ ಗ್ರೇಟ್ ವಾಲ್ ಆಫ್ ಚೈನಾದಿಂದ ಇರಾನ್‌ವರೆಗೆ ಹಬ್ಬಿದ್ದರೂ ಭಾರತವನ್ನು ಅದು ಪ್ರವೇಶಿಸಲಿಲ್ಲ. ಆದರೆ ಅವರು ಆಫ್‌ಘಾನಿಸ್ತಾನವನ್ನು ಆಕ್ರಮಿಸಿದಾಗ ಭಾರತದ ಭದ್ರತೆಗೆ ಭಂಗ ಬಂತು. ಕ್ರಿ.ಶ. ೬೪೦ರಲ್ಲಿ ಮುರಾನ್ ಮತ್ತು ಟಾಪೋ ಎಂಬೆರಡು ಪ್ರತಿಭಾಶಾಲಿಗಳ ಮುಂದಾಳತ್ವದಲ್ಲಿ ಟರ್ಕರು ಗಾಂಧಾರವನ್ನು ನಾಶಮಾಡಿದಾಗ ಭಾರತದ ಮುಂಚೂಣಿಯಲ್ಲಿದ್ದ ಈ ಭಾಗ ಧ್ವಂಸವಾಗಿ ಭಾರತದ ಬಾಗಿಲು ಮತ್ತೆ ವಿದೇಶೀಯರಿಗೆ ತೆರೆದಂತಾಯಿತು. ಬೌದ್ಧರಾಗಿದ್ದ ಟರ್ಕಿಗಳಾದ ಮೇಲೆ ಹಿಂದೂಶಾಹಿ ರಾಜ್ಯವು ಕೆಲಕಾಲ ಗಾಂಧಾರವನ್ನು ಆಳಿತು. ಓಹಿಂದ್‌ನ ಬ್ರಾಹ್ಮಣ ರಾಜರು ಈ ಹಿಂದೂಶಾಹಿಗಳನ್ನು ಅಟ್ಟಿ ಗಾಂಧಾರವನ್ನು ವಶಪಡಿಸಿಕೊಂಡರು. ಈಗ ಮುಸ್ಲಿಮರಾಗಿ ಪರಿವರ್ತನೆಗೊಂಡ ಟರ್ಕಿಗಳು ಮತ್ತೆ ಬಂದವೇಳೆಗೆ ಹಿಂದೂ ರಾಜ್ಯಗಳು ಬಹಳ ನಿರ್ಬಲವಾಗಿದ್ದುವು, ಒಡೆದುಹೋಗಿದ್ದುವು, ಐಕ್ಯತೆಯನ್ನು ಕಳೆದುಕೊಂಡಿದ್ದುವು.

ಹೂಣರಾದ ಮೇಲೆ ಬಂದವರೇ ಮಹಮದ್ ಬಿನ್-ಖಾಸಿಂ. ಕ್ರಿ.ಶ. ೭೧೨ರಲ್ಲಿ ಬಂದ ಈ ದಾಳಿಕೋರನ ದಾಳಿ ಭಾರತಕ್ಕೆ ಎಲ್ಲ ದೃಷ್ಟಿಗಳಿಂದಲೂ ಬಹಳ ಅಪಾಯಕಾರಿಯಾಗಿತ್ತು. ಬಾಗ್ದಾದ್‌ನ ಖಲೀಫನ ಆಜ್ಞೆಯ ಮೇರೆಗೆ ಕ್ರಿ.ಶ. ೭೧೨ರಲ್ಲಿ ಈ ಅರಬ್ ಸೈನ್ಯಾಧಿಪತಿ ಸಿಂಧ್ ಮೇಲೆ ಧಾಳಿ ಮಾಡಿ ಅರಬ್ಬರ ಸಾಮ್ರಾಜ್ಯವನ್ನು ಫ್ರಾನ್ಸಿನ ಎಲ್ಲೆಯಿಂದ ಸಿಂಧ್ ಪ್ರಾಂತದವರೆಗೆ ಹರಡುವಂತೆ ಮಾಡಿದನು. ಆಗ ಅರಬ್ಬರ ಸಾಮ್ರಾಜ್ಯ ಅತ್ಯಂತ ಬಲಶಾಲಿಯಾಗಿತ್ತು. ಇತಿಹಾಸಕಾರರಿಂದ ಖಾಸಿಮ್ಮನ ವ್ಯವಸ್ಥಿತ ದಾಳಿ ಹೆಚ್ಚಿನ ಪ್ರಾಮುಖ್ಯತೆ ಪಡೆದಿಲ್ಲ. ಅವರ ಪ್ರಕಾರ ಬಾಗ್ದಾದ್‌ನಿಂದ ಸಹಾಯ ನಿಂತುಹೋಗಿ ಖಾಸಿಮ್ಮನ ಬಲ ಸಿಂಧ್‌ನಲ್ಲಿ ಅಶಕ್ತವಾಯಿತು, ಕೊನೆಗೆ ನಶಿಸಿಹೋಯಿತು. ಇದು ಮುಸ್ಲಿಂ ದಾಖಲೆಗಳ

ಆಧಾರದ ಮೇಲೆ ಯುರೋಪಿಯನ್ನರು ರಚಿಸಿದ ಕಥೆ. ಆದರೆ ನಿಜಸಂಗತಿಯೇ ಬೇರೆ. ಕ್ರಿ.ಶ. ೭೧೨ರಲ್ಲಿ ಖಾಸಿಂನು ಹಿಂದ್ ದೊರೆ ದೆಹೀರನನ್ನು ರಾಜ ಬಳಿ ಸೋಲಿಸಿದಾಗ, ಸಿಂಧೂ ನದಿಯ ದಕ್ಷಿಣ ಪ್ರದೇಶವೆಲ್ಲಾ ಅರಬ್ಬರ ವಶವಾಯಿತು. ಹೀಗೆ ಅರಬ್ಬರು ತಮ್ಮ ಆಧಿಪತ್ಯವನ್ನು ಭದ್ರಪಡಿಸಿಕೊಂಡು ಗುಜರಾತ್ ಮತ್ತು ರಾಜಾಸ್ತಾನಗಳ ಮೇಲೆ ನುಗ್ಗಿದರು, ಸಮುದ್ರದ ಮತ್ತು ಭೂಮಿಯ ಕಡೆಗಳಿಂದ ಗುಜರಾತ್, ಕಛ್, ಸೌರಾಷ್ಟ್ರ ಮತ್ತು ಬ್ರೋಚ್ ಅರಬ್ಬರ ವಶವಾಗಿದ್ದರೆ ಪಶ್ಚಿಮ ಭಾರತ ಅರಬ್ಬರ ವಶವಾದಂತಾಗುತ್ತಿತ್ತು. ಆದರೆ ಹಾಗಾಗಲಿಲ್ಲ. ಚೌಲುಕ್ಯರು, ಪ್ರತಿಹಾರಿಗಳು ನಿರಂತರವಾಗಿ ಅರಬ್ಬರೊಡನೆ ಹೋರಾಡಿ, ಅರಬ್ಬರ ಆಳ್ವಿಕೆಯನ್ನು ಸಿಂಧ್ ಮರುಭೂಮಿಗೆ ಸೀಮಿತಗೊಳಿಸಿದರು.

ಘಜ್ನಿ ಮಹಮ್ಮೂದನ ಲೂಟಿ, ದಂಡಯಾತ್ರೆಗಳನ್ನು ಬಿಟ್ಟರೆ, ಗಂಗಾಕೊಳ್ಳದ ಆಕ್ರಮಣಕಾರರಾದ ಮಹಮ್ಮದ್ ಘೋರಿ ಮತ್ತು ಕುತ್ಬುದೀನ್‌ರ ದಾಳಿಯಿಂದ ಭಾರತದ ಚರಿತ್ರೆಯಲ್ಲಿ ಹೊಸ ಅಧ್ಯಾಯವೊಂದು ಪ್ರಾರಂಭವಾಯಿತು. ಆದರೆ ಮುಸ್ಲಿಂ ದಂಡಯಾತ್ರೆಗಳು, ಇಸ್ಲಾಂ ಧರ್ಮದ ಪ್ರಪಂಚವನ್ನೇ ಗೆದ್ದು ಅಲ್ಲಿ ಆ ಧರ್ಮವನ್ನು ಸ್ಥಾಪಿಸುವ ಯೋಜನೆಯ ಒಂದು ಭಾಗವೆಂದು ಪರಿಗಣಿಸುವುದು ತಪ್ಪಾಗುತ್ತದೆ. ಬಾಗ್ದಾದ್‌ನಲ್ಲಿ ಖಲೀಫರ ಶಕ್ತಿ ಕುಂದಿದ ಮೇಲೆ ಇಸ್ಲಾಂ ಧರ್ಮವನ್ನು ಹರಡುವ ಇರಾದೆ ಅಳಿದುಹೋಯಿತು. ಕಡೆ ಮೂಡಿತೆಂದೇ ಹೇಳಬಹುದು, ಧರ್ಮದ ದೃಷ್ಟಿಯಿಂದ.

ಉತ್ತರ ಭಾರತದ ಗಂಗಾನದೀ ಕೊಳ್ಳದಲ್ಲಿ ತಮ್ಮ ಆಧಿಪತ್ಯಗಳನ್ನು ಸ್ಥಾಪಿಸಿದ. ಖಿಲ್ಜಿಗಳೂ, ತೊಗಲಖ್‌ರು ಮತ್ತು ಲೋಧಿಗಳು ಏಷ್ಯಾ ಮಧ್ಯಭಾಗದ ಟರ್ಕರು, ಯೂಚಿ ಮತ್ತು ಕುಶಾಣರು ಈ ಪ್ರದೇಶಕ್ಕೆ ಬಂದಾಗ ಬೌದ್ಧರಾದಂತೆ ಈ ಟರ್ಕರು ಮುಸಲ್ಮಾನರಾದವರು. ಇವರಿಗೆ ಡೆಲ್ಲಿಯೇ ಆಡಳಿತ ಕೇಂದ್ರ, ಅರಬ್ಬರ ಆಧಿಪತ್ಯವನ್ನು ಒಪ್ಪಿದವರಲ್ಲ. ಎರಡನೇ ಪೀಳಿಗೆಯ ಈ ಅರಸರು ತಾವು ಭಾರತೀಯರೇ ಎಂದು ಭಾವಿಸಿದರು. ಭಾರತದ ಹೊರಗೆ ಇವರಿಗೆ ಯಾವ ಆಸಕ್ತಿಯೂ ಇರಲಿಲ್ಲ. ಟರ್ಕಿಸ್ತಾನದಿಂದ ಬಂದಿದ್ದ ಕುಶಾಣರು, ಶಕರು, ಹೂಣರು ಹಿಂದೂ ಸಂಸ್ಕೃತಿಯನ್ನು ತಮ್ಮದಾಗಿಸಿಕೊಂಡು ಅದರಲ್ಲೇ ವಿಲೀನರಾಗಿ ಹಿಂದೂಗಳೇ ಆದರು. ಆದರೆ ಇಸ್ಲಾಂ ಧರ್ಮವನ್ನು ಅಪ್ಪಿದ ಡೆಲ್ಲಿ ಸುಲ್ತಾನರು ತಮ್ಮ ಮತಧರ್ಮಕ್ಕೇ ಅಂಟಿಕೊಂಡು ಭಾರತೀಯರಿಂದ ದೂರ ಉಳಿದರು. ಅವರು ಭಾರತೀಯರಲ್ಲಿ ವಿಲೀನವಾಗಲೇ ಇಲ್ಲ, ಆಗುವುದೂ ಕಷ್ಟಕರವಾಗಿತ್ತು. ಆರ್ಯರು ಹರಡಿದ ರೀತಿಯಲ್ಲೇ, ಅದೇ ಭೌಗೋಳಿಕ ದಾರಿಯಲ್ಲೇ ಈ ಮುಸಲ್ಮಾನರೂ ಹರಡಿದರು. ಪಂಜಾಬಿನಲ್ಲಿ, ಅವರ ಸಂಸ್ಕೃತಿ, ರಕ್ತವಾಹಿನಿಗಳು ಪಸರಿಸಿತು. ಗಂಗಾ ತಟದಲ್ಲಿ ಇವರು ಬಂದು ನೆಲೆಸಿದ ಮೇಲೆ ಆಕ್ರಮಣದ ಆತಂಕ ಕಡಮೆಯಾಗಿ ಡೆಲ್ಲಿಯ ಸುಲ್ತಾನರು ಭಾರತದ

ರಾಜರುಗಳೆಂದೇ ಆಧಿಪತ್ಯ ನಡೆಸಿದರು. ತಮಗೆ ಮೊದಲು ಬಂದ ಆರ್ಯರಂತೆ ಇವರೂ ದಖಿನ್ ಪ್ರಸ್ಥಭೂಮಿಗೆ ನುಗ್ಗಲಿಲ್ಲ, ಬದಲಾಗಿ ಬಂಗಾಳವನ್ನು ಗೆದ್ದು ವಶಪಡಿಸಿಕೊಂಡರು. ಇನ್ನೊಂದು ಮುಸಲ್ಮಾನರ ಗುಂಪು ಮಾಳ್ವ ಮತ್ತು ಗುಜರಾತ್‌ಗಳನ್ನು ಆಕ್ರಮಿಸಿದರು. ಇವೆಲ್ಲ ರಾಜಕೀಯ ಬೆಳವಣಿಗೆಗಳೇ ಹೊರತು ಜನವಸತಿಗಳ ಸ್ಥಳಾಂತರಗಳಾಗಲಿಲ್ಲ. ಕೆಲಕಾಲದ ಮೇಲೆ ಮಾಳ್ವದ ಮುಸ್ಲಿಂ ರಾಜರು, ಗುಜರಾತಿನ ಮುಸ್ಲಿಂ ರಾಜರು ಸ್ಥಳೀಯ ಹಿಂದೂ ರಾಜರುಗಳೊಡನೆ ಸ್ನೇಹ ಬೆಳೆಸಿದರು. ಗಂಗಾತಟದ ರಾಜ್ಯಗಳು ದಖಿನ್ನಿನ ಮೇಲೆ ದಾಳಿಗಳನ್ನು ನಡೆಸಿದರೂ, ಅದನ್ನು ಗೆಲ್ಲುವುದಾಗಲೀ ಆಳುವುದಾಗಲೀ ಮಾಡಲಾಗಲಿಲ್ಲ. ಗಂಗಾನದಿಯ ಹರವು ತನ್ನ ಎಲ್ಲೆಯನ್ನು ವಿಂಧ್ಯ ಪರ್ವತಗಳಲ್ಲಿ ಕಂಡಿತು ಹಾಗೂ ದಕ್ಷಿಣ ದಖಿನ್ನಿನ ತೀರ ಪರ್ವತಗಳಿಗೆ ಅಪ್ಪಳಿಸಿ ತನ್ನ ಸತ್ವವನ್ನು ಕಳೆದುಕೊಂಡಿತು.

ಮೊಗಲರ ಚರಿತ್ರೆಯೂ ಇದನ್ನೇ ಸಾಬೀತುಪಡಿಸುತ್ತದೆ. ಮೊಗಲರ ಜನಾಂಗ ಚದುರುವಿಕೆ ಮತ್ತು ಹರಡುವಿಕೆಗಳು ಭಾರತದ ಗಡಿಪ್ರದೇಶಕ್ಕೆ ಬರುವ ಹೊತ್ತಿಗೆ ತನ್ನ ಬಲವನ್ನೆಲ್ಲಾ ಕಳೆದುಕೊಂಡು ಒಂದು ಸಣ್ಣ ಝರಿಯಾಗಿತ್ತು. ಛಂಗೇಜ್‌ಖಾನ್ ಮತ್ತು ಅವನ ಹತ್ತಿರದ ಕೆಲ ಸಂಬಂಧಿಗಳು ರಣಹದ್ದುಗಳಂತೆ ಎರಗಿ ಭೂಭಾಗಗಳನ್ನು ನಡುಗಿಸಿದಂತೆ ಭಾರತಕ್ಕೆ ಮೊಗಲರ ಆಗಮನ ಆಗದೆ ಸಾಮಾನ್ಯ ದಂಡಯಾತ್ರೆಯಾಯಿತು. ಆದರೆ ಅದರ ಭೂಗೋಳ ಒಂದೇ ಆಗಿತ್ತು. ಫರ್‌ಗಾನಹ್‌ದಿಂದ ಕಾಬೂಲಿಗೆ ಕಾಬೂಲಿನಿಂದ ಲಾಹೋರ್ ಮುಖಾಂತರ ಆಗ್ರಾಕ್ಕೆ, ಆಗ್ರಾದಿಂದ ಗಂಗಾಕೊಳ್ಳಕ್ಕೆ ಅಕ್ಬರನು ಸಾಮ್ರಾಜ್ಯವನ್ನು ಒಂದುಗೂಡಿಸಿದನು ಬಲಪಡಿಸಿದನು. ಬಂಗಾಲ ಸುಭದ್ರವಾಗಿ ವಶವಾಯಿತು. ಗುಜರಾತ್ ಮೇಲೆ ಮಿಂಚಿನ ದಾಳಿ ನಡೆದು ಮೊಗಲರ ವಶವಾಯಿತು. ಹಳೆಯ ಹರಡುವಿಕೆಯ ಜಾಗಗಳು ಮೊಗಲರ ವಶಕ್ಕೆ ಬಂದಿದ್ದುವು. ಆಮೇಲೆ ಪ್ರಾರಂಭವಾಯಿತು, ದಖಿನ್ನಿನೊಡನೆ ಹೋರಾಟ. ಉತ್ತರದ ಬಲಿಷ್ಠ ಸಾಮ್ರಾಜ್ಯ ತನ್ನ ಎಲ್ಲ ನವೀನ ಸಾಧನ ಸಲಕರಣೆಗಳೊಡನೆ ದಕ್ಷಿಣದ ಮೇಲೆ ದಾಳಿ ಶುರುವಾಯಿತು. ನೂರ ಹತ್ತು ವರ್ಷಗಳವರೆಗೆ ಬಲಿಷ್ಠ ಮೊಗಲ್ ಸಾಮ್ರಾಜ್ಯ ದಕ್ಷಿಣದ ಭೂಗೋಳದ ಮೇಲೆ ಸಣ್ಣ ಸಣ್ಣ ರಾಜ್ಯಗಳ ಮೇಲೆ ತನ್ನ ಆಧಿಪತ್ಯವನ್ನು ಸ್ಥಾಪಿಸಲು ಹೋರಾಡಿತು. ಔರಂಗಜೇಬನು ಸಾಯುವ ವೇಳೆಗೆ ಮೊಗಲ್ ಸಾಮ್ರಾಜ್ಯ ಛಿದ್ರವಿಚ್ಛಿದ್ರವಾಗಿದ್ದುದಲ್ಲದೆ, ಮೊಗಲರು ತುಂಗಭದ್ರಾ ನದಿಯನ್ನು ದಾಟಿ ಮುಂದೆ ಸಾಗಿರಲಿಲ್ಲ. ಇಪ್ಪತ್ತೇ ಇಪ್ಪತ್ತು ವರ್ಷಗಳಲ್ಲಿ ಮರಾಠರು ಮಾಳ್ವ ಮೇಲೆ ನುಗ್ಗಲು ತಯಾರಾಗಿದ್ದರು. ದಕ್ಷಿಣವನ್ನು ವಶಪಡಿಸಿಕೊಳ್ಳುವ ಸಾಹಸದಲ್ಲಿ ಜನ, ಧನ, ಪರಿಶ್ರಮ ಎಲ್ಲಾ ಇದ್ದ ಸುಸಜ್ಜಿತವಾಗಿ ಸಂಘಟಿತವಾದ ಮೊಗಲ್ ಸಾಮ್ರಾಜ್ಯವು ತನ್ನ ಇತಿಶ್ರೀಯನ್ನು ಕಂಡಿತು. ದಖಿನ್ ಜಯಿಸಲಾರದ ಭಾಗವಾಗಿ ಉಳಿಯಿತು.

ಆರ್ಯರಿಂದ ಹಿಡಿದು ಮೊಗಲರವರೆಗಿನ ಎಲ್ಲಾ ದಂಡಯಾತ್ರೆಗಳೂ

ಗಂಗಾಕೊಳ್ಳದಲ್ಲಿ ನೆಲೆಯಾಗಿ ನಿಂತರೂ ದಕ್ಷಿಣದ ಮಧ್ಯಭಾಗವಾದ ದಖಿನ್ ಪ್ರಸ್ಥಭೂಮಿಯನ್ನು ಏಕೆ ಮುಟ್ಟಲಾಗಲಿಲ್ಲ ಎಂಬ ಪ್ರಶ್ನೆ ಏಳುತ್ತದೆ. ಇದೊಂದು ಭಾರತದ ಚರಿತ್ರೆಯ ಮುಖ್ಯ ನಿಗೂಢ ಕಗ್ಗಂಟಾಗಿದೆ. ಪ್ರಪಂಚದ ಪ್ರಮುಖ ಜನಸ್ಥಳಾಂತರಿತ ಚಲನೆಗಳಲ್ಲಿ ಆರ್ಯರು ಮತ್ತು ಹೂಣರು ಯುರೋಪಿನ ಮೇಲೆ ದಾಳಿ ಮಾಡಿ ವಸಾಹತುಗಳನ್ನು ನಿರ್ಮಿಸಿದರು. ಮಂಗೋಲರು ತಮ್ಮ ಎದುರು ಬಂದ ಎಲ್ಲವನ್ನೂ ನಾಶಮಾಡಿ, ಹಾಳುಗೆಡವಿದರು. **ಮಂಗೋಲರು** ಪಶ್ಚಿಮ ಯುರೋಪಿನ ಅರ್ಧಭಾಗವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು, ವಸಾಹತುಗಳನ್ನು ನಿರ್ಮಿಸಿ ೩೦೦ ವರ್ಷಗಳ ಕಾಲ ಆಳಿದ **ಟರ್ಕರು** : ಪಂಜಾಬಿಗೆ ಬಂದು ತಮ್ಮ ಶಕ್ತಿ ಸಾಮರ್ಥ್ಯಗಳೆಲ್ಲವನ್ನೂ ಕಳೆದುಕೊಂಡರೂ ಗಂಗಾನದಿ ಕಣಿವೆಯಲ್ಲಿ ನೆಲೆಸಿದರೂ ದಕ್ಷಿಣದ ದಖಿನ್ ಪ್ರಸ್ಥಭೂಮಿಯನ್ನು ಜಯಿಸಲಾರದೆ ಹೋದರು. ಇದಕ್ಕೆ ಕಾರಣ ಭೌಗೋಳಿಕವಾಗಿದೆ. ಅಮೆರಿಕದ ಭೂಗೋಳ ತಜ್ಞ ಸ್ಪೈಕರ್ಮ್ಯಾನ್ ಹೇಳಿರುವಂತೆ "ಮಧ್ಯ ಏಷ್ಯಾದಿಂದ ಮೊಟ್ಟಮೊದಲ ದಾಳಿಗಳು ಮಧ್ಯ ಏಷ್ಯದ ಅಂಚಿನ ಪ್ರದೇಶಗಳ ಮೇಲೆರಗಿದುವು. ಅಲೆಮಾರಿ ಬರ್ಬರರು ಯುರೋಪ್, ಪರ್ಶಿಯಾ, ಭಾರತ ಮತ್ತು ಚೀನಾಗಳ ಮೇಲೆ ಭೂಕಂಪದಂತಹ ದಾಳಿಗಳನ್ನು ನಡೆಸಿದರು. ಅಲ್ಲೋಲಕಲ್ಲೋಲ ಮಾಡಿಬಿಟ್ಟರು, ಜನಜೀವನವನ್ನು; ಭೌಗೋಳಿಕ ಕಾರಣಗಳಿಂದಾದ ಈ ದಾಳಿಗಳ ತೀವ್ರತೆ, ಒತ್ತಡ ಚೀನ, ಯುರೋಪ್‌ಗಳ ಮೇಲಾದುವು. ಈ ದಾಳಿಗಳ ಶಕ್ತಿ ಪೂರ್ವ ಪಶ್ಚಿಮವಾಗಿ ಹರಡಿತು. ಉತ್ತರಕ್ಕೆ ಟಂಡ್ರಾ ಬಂಜರು ಮತ್ತು ಉತ್ತರಧ್ರುವಸಾಗರ, ದಕ್ಷಿಣಕ್ಕೆ ಒಂದು ಮರಳುಕಾಡು ಮತ್ತು ಎತ್ತರ ಪರ್ವತಗಳು ಗೋಡೆಗಳಂತೆ (ಹಿಮಾಲಯ) ಇವುಗಳ ಮಧ್ಯೆ ಸುಲಭವಾದ ಹುಲ್ಲುಗಾವಲು ಪ್ರದೇಶ ಜನಾಂಗಗಳ ಹರಡುವಿಕೆಗೆ ಅನುಕೂಲವಾಗಿತ್ತು. ಈ ದೊಡ್ಡ ಸಂಚಾರ ವ್ಯವಸ್ಥೆಯಲ್ಲಿ ಕುದುರೆಗಳ ಸವಾರರು ವಿಯನ್ನಾ, ಪೀಕಿಂಗ್‌ಗಳ ಮಧ್ಯೆ ದಾಳಿಗಳನ್ನು ನಡೆಸಿದರು. ಈ ಬರ್ಬರ ದಾಳಿಕೋರರು ಭಾರತಕ್ಕೆ ನುಗ್ಗಲು ಇದ್ದುದು ಒಂದೇ ದಾರಿ, ಖೈಬರ್ ಪಾಸ್ ಮುಖಾಂತರ ಸಿಂಧೂ ಕಣಿವೆಗೆ. ಆದರೆ ಈ ಮಾರ್ಗ ಮುಖ್ಯ ಮಾರ್ಗದಿಂದ ಬಹಳ ದೂರವಿತ್ತು. ಇದರಿಂದ ಭೌಗೋಳಿಕ ಕಾರಣಗಳಿಂದಾಗಿ ಮಂಗೋಲರು ಮುಂತಾದ ಬರ್ಬರರು ಗಂಗಾನದಿ ತಟಕ್ಕೆ ಬರುವ ವೇಳೆಗೆ ತಮ್ಮ ಆಕ್ರಮಣದ ತೀವ್ರತೆಯನ್ನು ಕಳೆದುಕೊಂಡಿದ್ದರು. ಹೀಗಾಗಿ ಭಾರತಕ್ಕೆ ಬಂದವರ ಸಂಖ್ಯೆ ಬಹಳ ಕಡಿಮೆ, ಒಂದು ಸಣ್ಣ ಉಪನದಿಯಂತೆ. ಇದು ಆರ್ಯರಿಗೆ, ಹೂಣರಿಗೆ, ಟರ್ಕ್‌ರಿಗೆ ಕೊನೆಗೆ ಮಂಗೋಲರಿಗೆ–ಎಲ್ಲರಿಗೂ ಅನ್ವಯಿಸುತ್ತದೆ. ಮುಖ್ಯವಾಹಿನಿಗಳು ಮೇಲೆ ಹೇಳಿದ ಪೂರ್ವ, ಪಶ್ಚಿಮ ಮಾರ್ಗದಲ್ಲಿ ತಮ್ಮ ಆಧಿಪತ್ಯ ಸಾಧಿಸಿದುವು.

ಭಾರತದ ರಕ್ಷಣಾ ವ್ಯವಸ್ಥೆಯಲ್ಲಿ ಹಿಂದೂಕುಶ್ ಪರ್ವತದ (ಗಡಿ) ಅಂಚಿನ

ಪ್ರದೇಶಗಳು. ಆದರೆ ದಾಟಲಾರದ ಶ್ರೇಣಿಗಳಲ್ಲ. ಎತ್ತರದ ಮೂರು ಕಣಿವೆಗಳ ಮೂಲಕ ಎಲ್ಲ ದಾಳಿಗಳೂ ನಡೆದವು. ಈ ಮೂರು ಕಣಿವೆಗಳಿಂದ ಆಫ್‌ಘಾನಿಸ್ಥಾನದ ಕುಂಡುಜ್ ಮತ್ತು ಶೋಜ್‌ಬಾರ್ಡ್ ಕಣಿವೆಗಳಿಗೆ ಇಳಿದರೆ ಆಫ್‌ಘಾನಿಸ್ಥಾನವನ್ನು ಸೇರಿದಂತೆಯೇ. ಕಾಬೂಲಿನಿಂದ ಪಂಜಾಬಿಗೆ ಬರಲು ಅನೇಕ ದಾರಿಗಳಿರುವುದು ಪುರಾತನ ಕಾಲದಿಂದಲೂ ತಿಳಿದ ವಿಚಾರ. ಖೈಬರ್ ಪಾಸ್ ಕೆಳಗಿನ ಸ್ವಾತ್ ಕಣಿವೆಗೆ ಸೇರುತ್ತದೆ. ಬ್ರಿಟಿಷರು ಇಲ್ಲಿ ತಮ್ಮ ಸಾಮರ್ಥ್ಯದ ಸೋಲನ್ನು ಕಂಡುದರಿಂದ ಇದಕ್ಕೆ ಈ ಹೆಸರು ಇಟ್ಟಿರಬೇಕು. ಆದರೆ ಮೊಗಲರು ಮುಂತಾದವರು ಬಂದ ದಾರಿ ಇದಲ್ಲ. ಬಾಬರನು ಕುಮಾವ್‌ವರೆಗೆ ನುಗ್ಗಿ ಅಲ್ಲಿಂದ ಸ್ವಾತ್ ಕಣಿವೆಗೆ ಬಂದನು. ಅಲೆಕ್ಸಾಂಡರನೂ ಇದೇ ಮಾರ್ಗವನ್ನು ಅನುಸರಿಸಿ ಬಂದವನು. ಆಫ್‌ಘಾನಿಸ್ಥಾನದ ಈ ಚತುರ್ಭುಜ ಪ್ರಸ್ಥಭೂಮಿ ಭಾರತಕ್ಕೆ ಬಂದ ದಾಳಿಕೋರರಿಗೆಲ್ಲ ಮಧ್ಯಂತರ ತಾಣವಾಗಿ ಪರಿಣಮಿಸಿತು. ಇಲ್ಲಿ ಮೊದಲು ನೆಲೆಸಿ ಆರ್ಯರು ಕುಶಾಣರು, ಹೂಣರು, ಟರ್ಕರು ಹಾಗೂ ಮಂಗೋಲರು ಇಲ್ಲಿ ಮೊದಲು ತಳವೂರಿ ಮುಂದೆ ಭಾರತದ ಮೇಲೆ ದಾಳಿ ಮಾಡಿದರು. ಹತ್ತನೇ ಶತಮಾನದ ಭೂಗೋಳ ಶಾಸ್ತ್ರಜ್ಞನ ಪುಸ್ತಕವನ್ನು, ಪ್ರೊ. ಮಿನಾರಸ್ಕಿ ಸಂಪಾದಿಸಿದ್ದಾರೆ. ಈ ಪುಸ್ತಕದಲ್ಲಿ ಹೇಳಿರುವಂತೆ ಈ ಪ್ರದೇಶಕ್ಕೆ ನಾಲ್ಕು ದಾರಿಗಳಿವೆ. ಇದೇ ಬರಹಗಾರ ಭಾರತಕ್ಕೆ ಬುಸ್ಟ್, ಹೆಲ್‌ಮಂಡ್, ಮತ್ತು ಅರೆಗಾನ್‌ದೆ ಬೆಟ್ಟ ನದಿಗಳ ಸಂಗಮ ಪ್ರದೇಶದಲ್ಲಿರುವ ಕಾಂದಹಾರ್‌ಗೆ ದಕ್ಷಿಣದಲ್ಲಿರುವ ಪ್ರದೇಶ. ಇಲ್ಲಿಂದ ಭಾರತ ಪ್ರವೇಶ ಸುಲಭ.

ಬೋಲಾನ್ ಪಾಸ್ ಇನ್ನೊಂದು ಮಾರ್ಗ, ಶಕರು ಮಾತ್ರ ಈ ಮಾರ್ಗವನ್ನು ಬಳಸಿಕೊಂಡಂತೆ ಕಾಣುತ್ತದೆ. ಮಿಕ್ಕವರು ಈ ಮಾರ್ಗವನ್ನು ಹಿಡಿಯದಿರಲು ಕಾರಣ ಈ ಮಾರ್ಗ ರಾಜಾಸ್ತಾನ್ ಮತ್ತು ಸಿಂಧ್ ಮರುಭೂಮಿಗಳಿಗೆ ತಲುಪುತ್ತಿದ್ದುದೇ ಆಗಿರಬೇಕು. ಈ ಮಾರ್ಗವಾಗಿ ಬಂದ ಶಕರು (ಯೂಚಿಗಳಿಂದ ದೂಡಲ್ಪಟ್ಟ) ಭಾರತದಲ್ಲಿ ನೆಲೆಯಾಗಿ ನಿಲ್ಲಲಾಗಲಿಲ್ಲ. ಆದರೂ ಬೋಲಾನ್ ಪಾಸ್‌ನ ಪ್ರಾಮುಖ್ಯತೆಯನ್ನು ಅಲ್ಲಗಳೆಯುವ ಹಾಗಿಲ್ಲ. ನೈಲ್ ಮತ್ತು ಟೈಗ್ರಿಸ್ ಕಣಿವೆಗಳ ನಾಗರಿಕತೆಗಳಂತೆ ಭಾರತದ ನಾಗರಿಕತೆ ಧೂಳೀಪಟವಾಗದಿರಲು ಎರಡು ಕಾರಣ. ಒಂದು ಎತ್ತರ ಪರ್ವತಗಳು ಕೋಟೆ ಗೋಡೆಗಳು ಭಾರತವನ್ನು ರಕ್ಷಿಸಿದುವು. ಎರಡನೆಯದಾಗಿ ಈ ಮಾರ್ಗ ಮುಖ್ಯಮಾರ್ಗದಿಂದ ಬಹಳ ದೂರ ಇದ್ದುದು. ಇವುಗಳಿಂದಾಗಿ ಭಾರತಕ್ಕೆ ಬಂದ ಆಕ್ರಮಣಗಳು ಮುಖ್ಯ ಆಕ್ರಮಣಗಳ ಗುಂಪುಗಳ ಒಂದು ಸಣ್ಣ ಭಾಗ. ಒಂದು ಸಣ್ಣ ಝರಿ. ಈ ಪ್ರಭೃತಿಗಳು ಗಂಗಾನದೀ ಕೊಳ್ಳಕ್ಕೆ ಬರುವ ಹೊತ್ತಿಗೆ ಅವರ ಮುಖ್ಯ ವಾಹಿನಿಗಳಿಂದ ಬೇರ್ಪಟ್ಟು ಅವುಗಳ ಸಂಪರ್ಕ ಸಹಾಯಗಳಿಲ್ಲದೆ ಭಾರತದ ನಿವಾಸಿಗಳೊಡನೆ ಬೆರೆತು ಇಲ್ಲಿನ ಜನರೇ ಆಗಬೇಕಾಯಿತು. ಇವರು ದಕ್ಷಿಣದ ಮೇಲೆ ದಂಡೆತ್ತಿ ಹೋದಾಗ ವಿಂಧ್ಯ ಪರ್ವತಗಳು,

ಹಿಂದೂಕುಶ್‌ಗಳು ಮಾಡಿದ ಕೆಲಸವನ್ನೇ ಮಾಡಿ, ಇವರ ದಾಳಿಗಳ ಸೊಂಟ ಮುರಿದುವು. ೨೦೦೦ ವರ್ಷಗಳವರೆಗೆ ಗಂಗಾನದೀ ಪ್ರದೇಶವು ಪರಕೀಯರ ದಾಳಿಗಳಿಗೆ ಒಳಗಾಗುತ್ತಿದ್ದರೂ, ಹಿಂದೂ ಸಂಸ್ಕೃತಿ ದಕ್ಷಿಣದಲ್ಲಿ ಸುರಕ್ಷಿತವಾಗಿ ಉಳಿದು ಬೆಳೆದು ಮುಂದೆ ದೇಶಕ್ಕೆಲ್ಲಾ ಪಸರಿಸಲು ಕಾರಣವಾಯಿತು.

ಇಲ್ಲಿಯವರೆಗೆ ಭೂಭಾಗಗಳಿಂದ ಬಂದ ದಾಳಿಗಳ ವಿಚಾರ ತಿಳಿದುದಾಯಿತು. ಈಗ ೪೫೦ ವರ್ಷಗಳಿಂದ ಸಮುದ್ರದ ಅಲೆಮಾರಿಗಳು ಬಂದ ವಿಚಾರ ತಿಳಿಯೋಣ. ಕ್ರಿ.ಶ. ೧೪೯೮ರಲ್ಲಿ ಪೋರ್ಚುಗಲ್ಲಿನಿಂದ ಹೊರಟ ವಾಸ್ಕೊ-ಡ-ಗಾಮಾನ ನೌಕಾ ಸೈನ್ಯ ಆಫ್ರಿಕಾ ತೀರವನ್ನು ಬಳಸಿ ಗುಡ್ ಹೋಪ್ ಭೂಶಿರವನ್ನು ತಲುಪಿ, ಅರಬ್ಬೀ ಸಮುದ್ರದ ಮೂಲಕ ಭಾರತದ ಪಶ್ಚಿಮ ತೀರದ ಕ್ಯಾಲಿಕಟ್ ತಲುಪಿತು. ಇದಾದ ಹದಿನೈದು ವರ್ಷಗಳಲ್ಲಿ ಪೋರ್ಚುಗಲ್ ಸಾಮ್ರಾಜ್ಯ ಭಾರತದಲ್ಲಿ ಅಸ್ತಿತ್ವವನ್ನು ಕಂಡಿತು ಮತ್ತು ಭಾರತದ ಮೇಲೆ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಒತ್ತಡ ಹೇರಿ ತನ್ನ ಆಧಿಪತ್ಯವನ್ನು ನಡೆಸಿತು. ಜೊತೆಗೆ ಸಮುದ್ರ ಮಾರ್ಗಗಳನ್ನೆಲ್ಲಾ ಮುಚ್ಚಿ, ಸಮುದ್ರದ ಮೇಲೆ ಏಕಚಕ್ರಾಧಿಪತ್ಯವನ್ನು ಸಾಧಿಸಿತು. ಈ ಕೆಲಸವನ್ನು ಪೋರ್ಚುಗೀಸರು ಬಹಳ ಸುಲಭವಾಗಿ ಮಾಡಿದರು. ಭಾರತದ ತೀರಪ್ರದೇಶಗಳಲ್ಲಿ ತಮ್ಮ ನೌಕಾನೆಲೆಗಳನ್ನು ಸ್ಥಾಪಿಸಿ ಸಮುದ್ರ ಮಾರ್ಗಗಳ ಕಾವಲು ಕಾಯ್ದು ಬೇರಾರೂ ಈ ಮಾರ್ಗವಾಗಿ ಬಾರದಂತೆ ತಡೆದರು ಕೆಲಕಾಲ. ಹೀಗೆ ರೂಪುಗೊಂಡ ನೆಲೆಗಳೇ, ಮಲಕ್ಕಾದ ನೌಕಾನೆಲೆ, ಸಿಂಹಳದ ನೌಕಾನೆಲೆ, ಆಫ್ರಿಕಾ ದೇಶದ ನೆಲೆಗಳು ಆರ್‌ಯುಝ ಮತ್ತು ಗೋವಾ ಎಂಬ ಭೂನೆಲೆ. ಗೋವಾ ಪೋರ್ಚುಗೀಸರ ರಾಜಧಾನಿಯಾಗಿ ಅವರ ಆಧಿಪತ್ಯಕ್ಕೆ ಕೇಂದ್ರ ಸ್ಥಾನವಾಯಿತು. ಆ ಕಾಲದಲ್ಲಿ ಭಾರತದ ರಾಜ್ಯಗಳು ಬಲಿಷ್ಠವಾಗಿದ್ದುದರಿಂದ ಪೋರ್ಚುಗೀಸರು ಭಾರತದ ಭೂಭಾಗಗಳನ್ನು ಆಕ್ರಮಿಸಲು ಸಾಧ್ಯವಾಗಲಿಲ್ಲ. ಆದರೆ ಸಮುದ್ರದ ಮೇಲಿಂದ ಆಗಾಗ್ಯೆ ಬರುವ ಒತ್ತಡ, ಭೂಮಿಯ ಮೇಲಿಂದ ಬರುವ ಒತ್ತಡಕ್ಕಿಂತ ವಿಭಿನ್ನವಾದುದು. ಒಂದು ದೇಶದ ತೀರಪ್ರದೇಶ ಒಂದು ಸಾರಿ ಸಮುದ್ರದ ಮೇಲಿಂದ ಬರುವ ಒತ್ತಡಕ್ಕೆ ತುತ್ತಾಯಿತೆಂದರೆ ಅದು ಮತ್ತೆ ಅದೇ ಒತ್ತಡಕ್ಕೆ ಬಲಿಯಾಗುತ್ತಲೇ ಇರುತ್ತದೆ. ಈ ಒತ್ತಡವನ್ನು ತರುವ ಒಂದು ರಾಷ್ಟ್ರ ತನ್ನ ಶಕ್ತಿಯನ್ನು ಕಳೆದುಕೊಂಡರೆ, ಅದರ ಜಾಗವನ್ನು ಬೇರೊಂದು ದೇಶ ಆಕ್ರಮಿಸುತ್ತದೆ. ಏಕೆಂದರೆ ಸಮುದ್ರಾಧಿಪತ್ಯ ಎಲ್ಲ ರಾಷ್ಟ್ರಗಳಿಗೂ ಸೇರಿರುತ್ತದೆ. ಹೀಗಾಗಿ ಆಲ್ಬುಕರ್ಕ್ ಸಮುದ್ರದ ಮೇಲೆ ಸ್ಥಾಪಿಸಿದ್ದ ಪೋರ್ಚುಗೀಸರ ಆಧಿಪತ್ಯವನ್ನು ೧೮ನೇ ಶತಮಾನದಲ್ಲಿ ಬ್ರಿಟಿಷರು ಆಕ್ರಮಿಸಿದರು. ಬ್ರಿಟಿಷರು ಸೂರತ್, ಬಾಂಬೆ, ಮದ್ರಾಸ್ ಮತ್ತು ಕಲಕತ್ತಾಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ಸ್ಥಾಪಿಸಿ, ಮೊಗಲ್ ರಾಜ್ಯ ಬಲಹೀನವಾದ ಮೇಲೆ ತನ್ನ ಆರ್ಥಿಕ ನೀತಿಯನ್ನು ಭೂಭಾಗಗಳ ಮೇಲೂ ಹೇರಲು ಪ್ರಾರಂಭಿಸಿದರು. ಹೀಗಾಗಿ ಇತರ ಪ್ರದೇಶಗಳ ನೆಲಗಳಿಂದ ಒಳಪ್ರದೇಶಗಳ ಆಕ್ರಮಣ ಒಂದು ಹಿಂದೆಂದೂ ಕಾಣದ ಅದ್ಭುತವಾದ ಚರಿತ್ರಾಂಶವಾಯಿತು.

ಬ್ರಿಟಿಷರ ಆಕ್ರಮಣ ಮತ್ತು ರಾಜ್ಯ ವಿಸ್ತರಣೆ ದಕ್ಷಿಣದಲ್ಲಿ ಕಾವೇರಿ ಕೊಳ್ಳದಿಂದ, ಉತ್ತರದಲ್ಲಿ ಗಂಗಾ ಕೊಳ್ಳದಿಂದ ಪ್ರಾರಂಭವಾಯಿತು. ದಕ್ಷಿಣದಲ್ಲಿ ಮದರಾಸಿನಿಂದ ಪ್ರಾರಂಭವಾಗಿ ತಮಿಳು ತೀರಪ್ರದೇಶ, ಆಂಧ್ರ ತೀರ ಪ್ರದೇಶಗಳಿಗೆ ಹರಡಿತು. ಉತ್ತರದಲ್ಲಿ ಕಲ್ಕತ್ತಾದಿಂದ ಪ್ರಾರಂಭವಾಗಿ ನಿಧಾನವಾಗಿ ಗಂಗಾನದಿ ಪ್ರದೇಶದಲ್ಲಿ ಬ್ರಿಟಿಷರ ಆಧಿಪತ್ಯ ವಿಸ್ತಾರವಾಗಿ ಹರಡಿತು. ಯಾವ ದೊಡ್ಡ ಯುದ್ಧವೂ ಆಗದೆ ಮುಂದೆ ಇಕ್ಕುಳದಂತೆ, ಮೈಸೂರು ಸೀಮೆಯ ಪ್ರದೇಶವನ್ನೂ, ಉತ್ತರದಲ್ಲಿ, ಬಂಗಾಳದಿಂದ ಮಧ್ಯಪ್ರದೇಶವನ್ನು ತಮ್ಮ ಆಧಿಪತ್ಯಕ್ಕೆ ತೆಗೆದುಕೊಂಡು ಮರಾಠರ ಸಾಮ್ರಾಜ್ಯವನ್ನು ಎರಡು ಕಡೆಗಳಿಂದ ಒತ್ತಡಕ್ಕೆ ಸಿಲುಕಿಸಿ ಮರಾಠ ಪ್ರಾಬಲ್ಯವನ್ನು ಮುರಿದುಹಾಕಲಾಯಿತು. ಸಮುದ್ರದ ಮೇಲಿಂದ ಸಾವಿರಾರು ಮೈಲಿಗಳ ದೂರ ಪ್ರದೇಶಗಳಿಂದ ಹೆಚ್ಚು ನೌಕಾಬಲ ಸೈನ್ಯಬಲಗಳನ್ನು ತರಲು ಸುಲಭ, ಭೂಭಾಗಗಳಿಂದ ತರುವುದು ದುಸ್ತರ. ಹೀಗೆ ತೀರಪ್ರದೇಶದ ತಮ್ಮ ವಸಾಹತುಗಳಿಂದ ಬ್ರಿಟಿಷರು ಸ್ವಲ್ಪಸ್ವಲ್ಪವಾಗಿ ನೂರು ವರ್ಷಗಳಲ್ಲಿ ಭಾರತದ ಭೂಭಾಗದ ಮೇಲೆ ತಮ್ಮ ಆಧಿಪತ್ಯವನ್ನು ಹೇರಿದರು.

ಆಕ್ರಮಣದ ಕೆಲವು ಅಂಶಗಳನ್ನು ಒತ್ತಿ ಹೇಳಲೇ ಬೇಕು. ಮೊದಲನೆಯದಾಗಿ ಕ್ರಿ.ಶ. ೧೭೫೭ ರಿಂದ ೧೯೪೭ರ ವರೆಗಿನ ಆಕ್ರಮಣ ಮತ್ತು ಸರ್ವಾಧೀನತೆಗಳು ಭಾರತದ ಹೊರಗಿನಿಂದಲೇ ನಿರ್ದೇಶಿಸಲ್ಪಟ್ಟವು, ಲಂಡನ್ನಿನಿಂದ. ಆದರೆ ಇದಕ್ಕೆ ಮುಂಚೆ ಆಳಿದ ಖಿಲ್ಜಿ, ತುಗಲಕ್, ಮೊಗಲರ ರಾಜಾಧಿರಾಜರುಗಳೂ ಭಾರತವನ್ನೆ ಕೇಂದ್ರವಾಗಿ ಮಾಡಿಕೊಂಡು ಆಳಿದರು ಡೆಲ್ಲಿ ಆಗ್ರಾಗಳಿಂದ, ಮೊದಲನೆಯ ಪೀಳಿಗೆಯಿಂದಲೇ ಭಾರತೀಯರಾಗಿ.

ಎರಡನೆಯದಾಗಿ ಯುರೋಪಿನಿಂದ ಹೆಚ್ಚು ಹೆಚ್ಚು ಸೈನ್ಯಬಲ ನೌಕಾಬಲಗಳು ಸದಾ ಬರುತ್ತಲೇ ಇದ್ದವು. ವಾಸ್ಕೊ–ಡಿ–ಗಾಮನ ಕಾಲದಿಂದ ೧೯೪೧ರ ವರೆಗೂ ಯುರೋಪಿನ ಬಂದರುಗಳಿಂದ ಈ ಸೈನ್ಯ ಶಕ್ತಿ ಹರಿದು ಬರುತ್ತಲೇ ಇತ್ತು. ಆದರೆ ಭೂ ರಾಷ್ಟ್ರಗಳ ಶಕ್ತಿ ಸ್ಥಳೀಯವಾಗಲೇ ಬೇಕಾಯಿತು.

ಮೂರನೆಯದಾಗಿ ಭಾರತದೆಲ್ಲ ಭಾಗಗಳು ಪರಕೀಯ ರಾಷ್ಟ್ರದ ಅಧೀನಕ್ಕೆ ಬಂದಿದ್ದಿತು, ಕೆಲವು ಭಾಗಗಳು ಸಂಪೂರ್ಣ ಬ್ರಿಟಿಷ್ ಚಕ್ರಾಧಿಪತ್ಯದ ನೇರ ಆಳ್ವಿಕೆಗೆ ಬಂದಿದ್ದರೂ ಬ್ರಿಟಿಷರ ಬಲ ತೀರ ಪ್ರದೇಶಗಳ ಬಂದರುಗಳಲ್ಲಿ ಕೇಂದ್ರೀಕೃತವಾಗಿದ್ದರೂ, ಪಂಜಾಬ್ ಮತ್ತು ವಾಯವ್ಯ ಸರಹದ್ದುಗಳಲ್ಲಿಯೂ ಬ್ರಿಟಿಷರ ಸೈನ್ಯಬಲ ಕೇಂದ್ರೀಕೃತವಾಗಿತ್ತು. ಹೀಗಾಗಿ ಭಾರತದ ದಕ್ಷಿಣ ಪ್ರಸ್ಥಭೂಮಿ ಮತ್ತು ಭರತಖಂಡದ ಎಲ್ಲ ಪ್ರದೇಶಗಳೂ ಬ್ರಿಟಿಷರ ಆಧಿಪತ್ಯಕ್ಕೆ ಒಳಪಟ್ಟಿದ್ದುವು. ಡೆಲ್ಲಿಯಲ್ಲಿ ನೆಲೆಸಿದ್ದ ಭೂಸಾಮ್ರಾಟರು ಈ ಕೆಲಸವನ್ನು ಮಾಡಲಾಗಲಿಲ್ಲ. ಚಕ್ರಾಧಿಪತ್ಯದ ಮಧ್ಯಭಾಗ ಈ ಸಾರ್ವಭೌಮರ ವಶದಲ್ಲಿದ್ದರೂ ಸಾಮ್ರಾಜ್ಯದ ಹೊರ ಅಂಚಿನ ಪ್ರದೇಶಗಳ ಮೇಲೆ ಹಿಡಿತ ಭದ್ರವಾಗಿರಲಿಲ್ಲ. ಆದರೆ ಬ್ರಿಟಿಷರಿಗೆ ಪರಿಧಿ ಪ್ರಾಂತ್ಯಗಳೆಂಬ

ಯಾವ ಭಾಗವೂ ಉಳಿದಿರಲಿಲ್ಲ. ಏಕೆಂದರೆ ಭೂರಾಜ್ಯಗಳ ಪರಿಧಿಗಳಾಗಿದ್ದ ದಖನ್ ಪ್ರಸ್ಥಭೂಮಿ ಮತ್ತು ಸಮುದ್ರ ತೀರಗಳೇ, ಬ್ರಿಟಿಷರ ಆಡಳಿತದ ಅಡಿಪಾಯಗಳಾಗಿದ್ದವು.

ನಾಲ್ಕನೆಯದಾಗಿ ಅವರ ಆಡಳಿತ ಯಾವಾಗಲೂ ಪರಕೀಯವಾಗೇ ಇತ್ತು. ಪರಕೀಯರೇ ಅದನ್ನು ಹಿಡಿತದಲ್ಲಿಟ್ಟು ನಡೆಸಿದರು. ದೇಶದ ಹೊರಗಿನಿಂದ ಬಂದ ಆಡಳಿತಗಾರರು ಸಮರ್ಥರಾಗಿದ್ದರು, ಯಾವಾಗಲೂ ಸಿದ್ಧರಾಗಿದ್ದರು, ಅದರಲ್ಲೂ ೧೮೫೭ರ ದಂಗೆಯಾದ ಮೇಲೆ ಕೊನೆಯದಾಗಿ, ಹೊರಗಿನಿಂದ ನಿರ್ದೇಶಿಸಲ್ಪಟ್ಟು ಪರಕೀಯರಿಂದ ನಿಭಾಯಿಸಲ್ಪಟ್ಟು, ಪರಕೀಯರ ವ್ಯಾಪಾರಗಳ ದೃಷ್ಟಿಯಿಂದಲೇ ನಡೆಸಲ್ಪಟ್ಟ ರಾಜ್ಯವಾಗಿ ಭಾರತ ಬ್ರಿಟಿಷರ ಒಂದು ವಸಾಹತುವೇ ಆಯಿತು. ಹೀಗಾಗಿ ಭಾರತ ಆರ್ಥಿಕವಾಗಿ ಬ್ರಿಟಿಷರ ಶೋಷಣೆಗೆ ಒಳಗಾದ ದೇಶವಾಯಿತು. ಭಾರತದ ಕಚ್ಚಾವಸ್ತುಗಳು ಇಂಗ್ಲೆಂಡಿಗೆ ಸಾಗಿಸಲ್ಪಟ್ಟವು. ಇಲ್ಲಿನ ನೈಸರ್ಗಿಕ ಸಂಪತ್ತು ಅವರಿಂದ ನಿಯಂತ್ರಿಸಲ್ಪಟ್ಟಿತು. ಭೂಭಾಗದಿಂದ ಆದ ದಾಳಿಗಳು ಈ ರೀತಿಯ ಶೋಷಣೆಗೆ ದೇಶವನ್ನು ಒಡ್ಡಲಿಲ್ಲ.

ಹೀಗಾಗಿ ಬ್ರಿಟಿಷರು ಭಾರತವನ್ನು ಮೊದಲು ಗೆದ್ದವರೆಂದು ಹೇಳಬಹುದು. ಹೊರಪ್ರದೇಶ ಒಂದರಿಂದ ಭಾರತವನ್ನು ಆಳಿದವರಲ್ಲಿ. ಬ್ರಿಟಿಷರೇ ಮೊದಲಿಗರು. ವಾಯವ್ಯದ ಕೆಲವು ಸಣ್ಣ ಸಣ್ಣ ಭಾಗಗಳು ಹೊರಗಿನ ಚಕ್ರಾಧಿಪತ್ಯಕ್ಕೆ ಕೆಲಕಾಲ ಸೇರಿತ್ತು ನಿಜ. ಸಿಂಧೂ ನದಿ ಕಣಿವೆ ಪರ್ಶಿಯನ್ನರ ಆಳ್ವಿಕೆಗೆ ಕೆಲಕಾಲ ಒಳಗಾಗಿತ್ತು. ಕಾಬೂಲಿನ ರಾಜರು ಪಂಜಾಬಿನ ಕೆಲಭಾಗವನ್ನು ಕೆಲಕಾಲ ಆಳಿದರು. ಉದಾಹರಣೆಗೆ ಅಹಮದ್‌ಷಾ ದುರಾನಿ ಮತ್ತು ಝಮಾನ್ ಷಾ. ಆದರೆ ಗಂಗಾ ಕಣಿವೆಯನ್ನು ಯಾವ ರಾಜನೂ ಹೊರದೇಶದಿಂದ ಆಳಲಿಲ್ಲ. ಯಾವ ಹೊರ ದೇಶದ ಹಿತದೃಷ್ಟಿಯಿಂದ ನೌಕಾಶಕ್ತಿಯೊಂದು ಮಾತ್ರ ಈ ಕೆಲಸ ಮಾಡಲು ಸಮರ್ಥವಾಯಿತು. ನೌಕಾಶಕ್ತಿಯಿಂದ ಮಾತ್ರ ಬಹುದೂರ ಸ್ಥಳದಿಂದ ಹೆಚ್ಚು ಹೆಚ್ಚು ದೂರದಲ್ಲಿರುವ ಭೂಭಾಗಗಳನ್ನು ಆಳಲು ಸಾಧ್ಯ. ಭೂಸೈನ್ಯ ಮಾಡಲಾಗದ ಕೆಲಸವನ್ನು ನೌಕಾ ಸೈನ್ಯ ಮಾಡಿದೆ–ಸಮುದ್ರ ಮೇಲಿನ ಹಿಡಿತದಿಂದ.

ಪೂರ್ವದಿಂದ ಮಲಕ್ಕಾ ಜಲಕಂಠದಿಂದ ಬಂದ ಜಪಾನೀಯರು ಹಿಂದೂ ಸಾಗರವನ್ನು ಕೆಲಕಾಲ ತಮ್ಮ ಹಿಡಿತದಲ್ಲಿರಿಸಿಕೊಂಡಿದ್ದರು. ಜಪಾನ್ ಪೆಸಿಫಿಕ್ ಸಾಗರದಲ್ಲಿದೆ. ಅಲ್ಲಿಂದ ಸಾವಿರಾರು ಮೈಲಿ ದೂರದ ಬಂಗಾಳಾ ಕೊಲ್ಲಿಯಲ್ಲಿ ಅದು ಆಧಿಪತ್ಯ ಮಾಡಬೇಕಾದರೆ ಅದಕ್ಕೆ ಅದರ ನೌಕಾಶಕ್ತಿಯೇ ಕಾರಣ. ಅದು ಸಿಂಗಪುರವನ್ನು ಗೆದ್ದ ಕೂಡಲೇ ಹಿಂದೂ ಮಹಾಸಾಗರ ಅದರ ಹಿಡಿತಕ್ಕೆ ಬಂದಂತೆಯೇ. ಇದರಿಂದ ಜಪಾನರು ದಕ್ಷಿಣ ಭಾರತವನ್ನು ಮುಟ್ಟುವುದು ನಿಂತಿತು. ಭಾರತದ ಭೂಗೋಳ ಪರಿಸ್ಥಿತಿ ಜಪಾನರು ಇಲ್ಲಿ ತಳವೂರಲು ಅನುಕೂಲಕರವಾಗಿತ್ತು. ಆದರೆ ಬೇರೆಡೆ ಅದನ್ನು ಸೋಲಿಸಿ ಈ ಪರಿಸ್ಥಿತಿ ಉಂಟಾಗದಂತೆ ತಡೆಯಲಾಯಿತು.

ವಾಯುಪಡೆಗಳು ಈ ಪರಿಸ್ಥಿತಿಯನ್ನು ಹೇಗೆ ಬದಲಾಯಿಸಲು ಸಾಧ್ಯವಾಗುವುದೆಂಬ ಅಂಶವನ್ನು ನಾವು ಸ್ಥೂಲವಾಗಿ ತಿಳಿದಿದ್ದಾಗಿದೆ. ಸಮುದ್ರದ ಮೇಲಿಂದ ಮತ್ತು ಭೂಮಿಯ ಮೇಲಿಂದ ಭಾರತವು ಹೇಗೆ ಆಕ್ರಮಣಕಾರಿಗಳಿಗೆ ಎಡೆಯಾಗಿದೆ ಎಂಬಂಶವನ್ನು ತಿಳಿದಾಗಿದೆ. ಭೂಭಾಗದಿಂದ ದಾಳಿಮಾಡುವ ಸೈನ್ಯಕ್ಕೆ ವಾಯುಪಡೆಯು ರಕ್ಷಣೆ ಕೊಡುತ್ತದೆ. ಬಾಂಬಿಗಿಂತ ಸಂಚಾರಿ ಸೌಕರ್ಯಗಳನ್ನು ನಾಶಮಾಡಿ ಆಂತರಿಕ ಆರ್ಥಿಕ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿ ಭೂದಾಳಿಗೆ ಸಾಗಲು ಸಹಾಯ ಮಾಡುತ್ತದೆ. ಆದರೆ ದೂರದಲ್ಲಿರುವ ಶಕ್ತಿಯೊಂದು ಭಾರತದ ಮೇಲೆ ದಂಡೆತ್ತಿ ಬಂದು ಗೆಲ್ಲಬೇಕಾದರೆ ಭೂಸಂಪರ್ಕ ಚೆನ್ನಾಗಿರಬೇಕು. ಜೊತೆಗೆ ಇಲ್ಲಿಯ ಹವಾಮಾನ ಬೇರೆ. ಪರ್ವತ ಗೋಡೆಗಳಂತೆ ಅನೇಕ ಸಂಕಟಗಳನ್ನು ಒಡ್ಡುತ್ತವೆ. ಎಡೆಬಿಡದೆ ಸೈನ್ಯಗಳನ್ನು ಕಳುಹಿಸುತ್ತಲೇ ಇರಬೇಕಾಗುತ್ತದೆ. ಹಿಮಾಲಯ ಮತ್ತು ಹಿಂದೂಕುಶ್ ಪರ್ವತ ಶ್ರೇಣಿಗಳು ತಮ್ಮದೇ ಆದ ಅಡ್ಡಿ ಆತಂಕಗಳನ್ನು ತಂದೊಡುತ್ತವೆ. ಭಾರತ ಪರಿಣಾಮಕಾರಿಯಾದ ವಾಯುಪಡೆಯನ್ನು ಸಜ್ಜುಗೊಳಿಸಿದರೆ, ಈ ಕಣಿವೆ ಮಾರ್ಗಗಳಿಂದ ಬರಬಹುದಾದ ದಾಳಿಗಳನ್ನು ಎದುರಿಸಿ ತಡೆಗಟ್ಟಬಹುದು. ಸಮುದ್ರಗಳ ಕಡೆಯಿಂದ ಬರಬಹುದಾದ ಒತ್ತಡಗಳನ್ನು ಎದುರಿಸಲು ಬೇರೆ ಮಾರ್ಗವನ್ನೇ ಅನುಸರಿಸ ಬೇಕಾಗುತ್ತದೆ. ಸಾಕಷ್ಟು ವಿಮಾನ ಪಡೆಗಳನ್ನು ಭಾರತ ಪಡೆದರೂ ತೀರಪ್ರದೇಶಗಳಲ್ಲಿ ದ್ವೀಪಸಮೂಹಗಳಿಲ್ಲದಿರುವುದರಿಂದ, ಶತ್ರು ಸುಲಭವಾಗಿ ನುಗ್ಗಿ ತೀರದಲ್ಲಿ ತನ್ನ ನೆಲೆಗಳನ್ನು ನಿರ್ಮಿಸಬಹುದು. ಅಮೆರಿಕದ ನೌಕಾ ಪಡೆಗಳು ಗುಅಡಲ್ ಕೆನಾಲ್‌ನಿಂದ ಸಾವಿರಾರು ಮೈಲಿ ಪ್ರಯಾಣಮಾಡಿ ಜಪಾನಿನ ತೀರಪ್ರದೇಶವನ್ನು ಓಕಿನಾವಾದವರೆಗೂ ತಲುಪಿ ದಾಳಿ ಮಾಡಿದುದನ್ನು ನೆನೆಸಿಕೊಂಡರೆ, ಶಕ್ತಿಶಾಲಿ ರಾಷ್ಟ್ರವೊಂದು ತನ್ನ ಬಲವಾದ ನೌಕಾಪಡೆಯಿಂದ ದೂರದೂರದ ಪ್ರದೇಶಗಳ ಮೇಲೆ ದಾಳಿ ನಡೆಸಬಹುದೆಂಬ ಸಂಗತಿ ತಿಳಿಯುತ್ತದೆ. ಶಕ್ತಿಶಾಲಿ ನೌಕಾಪಡೆ ದ್ವೀಪಗಳನ್ನು ಪರ್ಯಾಯ ದ್ವೀಪಗಳನ್ನೂ ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಲು ಸಮರ್ಥವಾಗುತ್ತದೆ. ಪ್ರತಿ ದೇಶದ ತೀರಪ್ರದೇಶ ಆಯಾ ದೇಶಗಳ ಅಧಿಕಾರಕ್ಕೆ ಒಳಪಟ್ಟಿರುತ್ತದೆ. ಆದರೂ ವಾಯುಪಡೆಯ ಸಹಾಯದಿಂದ ನೌಕಾಶಾಹಿ ರಾಷ್ಟ್ರವು ಬೇರೆ ತೀರಪ್ರದೇಶಗಳ ಮೇಲೆ ದಾಳಿ ಮಾಡುವುದು ಸುಲಭವಾದ ಕೆಲಸ.

* * * *

ಅಧ್ಯಾಯ ೬

ಉಪಸಂಹಾರ

ಒಂದು ಪ್ರದೇಶದ ಆಗುಹೋಗುಗಳು ಆ ಪ್ರದೇಶದ ಪ್ರಕೃತಿದತ್ತವಾದ ಸ್ವಾಭಾವಿಕ ಅಂಶಗಳಿಂದ ನಿರ್ಧಾರಿತವಾಗುತ್ತವೆ. ಪ್ರಕ್ರಿಯೆಯ ಅಧ್ಯಯನವೇ ಭೂರಾಜ್ಯ ಶಾಸ್ತ್ರದ ವಿಷಯ.

ಈ ರಾಜ್ಯಶಾಸ್ತ್ರವನ್ನು ರಾಜ್ಯವನ್ನು ಅದರ ಸ್ವಾಭಾವಿಕ ಸ್ಥಿತಿಗಳಿಂದ ತಿಳಿಯುವ ಅಳೆಯುವ ಶಾಸ್ತ್ರ ಎಂದು ಪರಿಗಣಿಸಿಯಾಗಿದೆ. ಅಂದರೆ ಸ್ಥಿರವಾದ ರಾಜಕೀಯ ಅಂಶಗಳೂ ಹೇಗೆ ಭೌಗೋಳಿಕ ಅಂಶಗಳಿಂದ ನಿರ್ಧರಿಸಲ್ಪಡುತ್ತದೆ ಎಂಬುದನ್ನು ತಿಳಿಸುವ ಶಾಸ್ತ್ರವೇ ಭೂರಾಜ್ಯಶಾಸ್ತ್ರ. ಭೌಗೋಳಿಕ–ಸ್ವಾಭಾವಿಕ ಮುಖ್ಯ ಲಕ್ಷಣಗಳು–ಹೆಚ್ಚು ಶಾಶ್ವತವಾದ್ದರಿಂದ ರಾಜಕೀಯದ ಮೇಲೆ ಈ ಲಕ್ಷಣಗಳು–ಬೀರುವ ಪ್ರಭಾವ ಬಹಳ ಎಂದು ಒತ್ತಿ ಹೇಳಿಯಾಗಿದೆ. ಭಾರತದ ಚರಿತ್ರೆಯಲ್ಲಿ ಹಿಮಾಲಯಗಳು ಬದಲಾಗದ ಅಂಶಗಳು; ಹಾಗೇ ಹಿಂದೂ ಮಹಾಸಾಗರ. ನಾವು ಇವುಗಳನ್ನು ಅಧ್ಯಯನ ಮಾಡಿ ಅವುಗಳಿಂದ ನಮಗೆ ಅನುಕೂಲವಾಗುವಂತೆ ಉಪಯೋಗಿಸಿಕೊಳ್ಳುವುದೊಂದೇ ನಮಗಿರುವ ಮಾರ್ಗ. ಉಳಿದ ಸ್ವಾಭಾವಿಕ ಅಂಶಗಳನ್ನು ನಮಗನುಕೂಲವಾಗುವಂತೆ ತಿರುಗಿಸಿ ಬಳಸಬಹುದು. ವಿಜ್ಞಾನ ಭೂಸಾರವನ್ನು ಹೆಚ್ಚಿಸಬಹುದು. ಹೊಸ ಆವಿಷ್ಕಾರಗಳು ಇರುವ ಕುಂದುಕೊರತೆಗಳನ್ನು ತುಂಬಬಹುದು. ಇದನ್ನೆಲ್ಲಾ ಮಾಡಲು ನಾವು ನಮ್ಮ ಭೌಗೋಳಿಕ ಅಂಶಗಳನ್ನು ಚೆನ್ನಾಗಿ ಅಧ್ಯಯನ ಮಾಡಿ ಅವು ಹೇಗೆ ನಮ್ಮನ್ನು ತಟ್ಟುತ್ತಿವೆ ಎಂದು ತಿಳಿಯಬೇಕು. ಇದೇ ಈಗ ನಾನು ಪ್ರಸ್ತಾವನೆಯ ರೂಪದಲ್ಲಿ ಈ ಪ್ರಬಂಧದಲ್ಲಿ ಮಾಡಿರುವುದು. ಈಗ ಈ ಮುಕ್ತಾಯ ಅಧ್ಯಾಯದಲ್ಲಿ ಇವುಗಳ ಸೂಕ್ಷ್ಮ ವಿವರಣೆಯನ್ನು ಮತ್ತೆ ಮಾಡಿ, ಭೌಗೋಳಿಕ ಅಂಶಗಳು ಹೇಗೆ ನಮ್ಮ ಭಾರತದ ಚರಿತ್ರೆಯ ಮೇಲೆ ಪರಿಣಾಮ ಬೀರಿವೆ ಎಂಬುದನ್ನು ಒತ್ತಿ ಹೇಳುತ್ತಿದ್ದೇನೆ.

ಮೊದಲನೆಯದಾಗಿ ಭೂಗೋಳವು ನಮ್ಮ ಮೇಲೆ ಎರಡು ಮುಖ್ಯಭಾಗಗಳನ್ನು ಹೇರಿದೆ–ಒಂದು ಗಂಗಾನದಿ ಕೊಳ್ಳವು ಕೇಂದ್ರವಾಗಿರುವ ಆರ್ಯಾವರ್ತ; ಇನ್ನೊಂದು ದಖನ್ ಪ್ರಸ್ಥಭೂಮಿ–ವಿಂಧ್ಯ ಪರ್ವತಗಳಿಂದ ದಕ್ಷಿಣದ ತುದಿಯವರೆಗೆ ಹರಡಿರುವ–ಈ ಎರಡೂ ಪ್ರದೇಶಗಳೂ, ರಾಜಕೀಯವಾಗಿ,

ಜನಾಂಗೀಯವಾಗಿ ಭಾಷಾ ವಿಷಯಗಳಲ್ಲಿ ಬೇರೆಬೇರೆಯಾಗಿಯೇ ಇದ್ದುವು. ಆದರೆ ಒಗ್ಗಟ್ಟು ಬಂದುದು ಸಂಸ್ಕೃತ ಭಾಷೆಯಿಂದ, ಸಾಂಸ್ಕೃತಿಕ ಆಚಾರವಿಚಾರಗಳಿಂದ. ಸಂಸ್ಕೃತವು ತನ್ನ ಪ್ರಭಾವದಿಂದ ದೇಶದ ಎಲ್ಲಾ ಭಾಗಗಳನ್ನೂ ಒಂದು ಮಾಡಿದೆ. ದೇಶಭಾಷೆಯಾಗಿ, ಭಾರತದ ಜನರ ಆಲೋಚನೆ, ಮಾತುಕತೆಗಳ ಮೇಲೆ ಸಂಸ್ಕೃತವು ಬೀರಿರುವ ಪ್ರಭಾವ ಇನ್ನಾವ ಭಾಷೆಯೂ ಮಾಡಿಲ್ಲ. ಈ ಎರಡು ಪ್ರದೇಶಗಳನ್ನು, ಪರಕೀಯ ದೇಶವೊಂದು ತನ್ನ ಸೈನ್ಯ ಶಕ್ತಿಯಿಂದ ಒಂದು ಮಾಡಿದೆ–ಹಾಗೆ ಯಾವ ಭೂರಾಜ್ಯ ಮಾಡದ ಕೆಲಸವನ್ನು ಒಂದು ನೌಕಾಶಾಹಿ ಬ್ರಿಟನ್ ಮಾಡಿದೆ.

ಈ ಸಂಘಟಿತ ಕಾರ್ಯ ಒಂದು ನೆಲೆಯಿಂದಾದುದಲ್ಲ. ಭೂ ಸಾಮ್ರಾಟರು ಮಾಡಿದ ಹಾಗೆ–ಸಮುದ್ರ ತೀರದಲ್ಲಿ ಮೊದಲು ತಮ್ಮ ನೆಲೆಗಳನ್ನು ಸ್ಥಾಪಿಸಿ, ಅಲ್ಲಿಂದ ಒಳಪ್ರದೇಶಗಳ ಮೇಲೆ ಹಿಡಿತ ಸಾಧಿಸಿ, ಮುಂದೆ ಮುಂದೆ ಹೋಗಿ ಭಾರತ ಭೂಭಾಗಗಳನ್ನೆಲ್ಲಾ ಒಂದಾದ ಆಡಳಿತಶಾಹಿಯ ವಶಕ್ಕೆ ತಂದವರು ಬ್ರಿಟಿಷರು. ಇದಕ್ಕೆಲ್ಲಾ ಕಾರಣ ಅವರ ನೌಕಾಶಕ್ತಿ.

ಅಸಾಧ್ಯವೆಂದೇ ಪರಿಗಣಿಸಲಾಗಿದ್ದ, ಭೂಶಕ್ತಿಗಳು ಮಾಡಲಾಗದಿದ್ದ ಒಂದುಗೂಡಿಸುವ ಕೆಲಸ ರಾಜಕೀಯವಾಗಿ ಆರ್ಥಿಕವಾಗಿ ಆಗಿದೆ. ಈ ಒಗ್ಗಟ್ಟನ್ನು ಏಕೀಭಾವವನ್ನು ಉಳಿಸಿಕೊಂಡು ಹೋಗಬೇಕಾದ ಮಹತ್ತರ ಜವಾಬ್ದಾರಿ ಇಂದಿನ ಪೀಳಿಗೆಯ ಮುಖ್ಯ ಕರ್ತವ್ಯವಾಗಿದೆ. ಇಲ್ಲಿ ಒಂದು ವಿಷಯ ಗಮನಿಸಬೇಕು. ಉತ್ತರದವರು ದಕ್ಷಿಣದವರ ಮೇಲೆ ಈ ಒಗ್ಗಟ್ಟನ್ನು ಹೇರುವ ಬಲಾತ್ಕಾರ ಕೆಲಸ ಮಾಡಿದರೆ ಅದು ವಿರುದ್ಧ ಫಲವನ್ನೇ ಕೊಡುತ್ತದೆ. ಹಾಗೇನಾದರೂ ಉತ್ತರದಿಂದ ಒತ್ತಡ ಬಂದರೆ ಮತ್ತೆ ಭೌಗೋಳಿಕ, ಸಾಂಸ್ಕೃತಿಕ, ಚಾರಿತ್ರಿಕ ಭಿನ್ನತೆಗಳು ತಲೆಎತ್ತಿ ವಿಪತ್ಕಾರಕ ಪರಿಣಾಮಗಳನ್ನು ದೇಶವು ಅನುಭವಿಸಬೇಕಾಗುತ್ತದೆ.

ರಾಜಕೀಯವಾಗಿ ಒಂದಾದ ಭಾರತದಲ್ಲಿ ದಕ್ಷಿಣಕ್ಕೆ ಹೆಚ್ಚು ಆರ್ಥಿಕವಾದ, ರಾಜಕೀಯವಾದ ಸ್ಥಾನಮಾನಗಳನ್ನು ಕೊಡಬೇಕಾಗುತ್ತದೆ. ದೇಶದ ರಾಜಕೀಯದಲ್ಲಿ ದಕ್ಷಿಣದವರಿಗೆ ಹೆಚ್ಚು ಹೆಚ್ಚು ಸ್ಥಾನಮಾನಗಳನ್ನು ನೀಡಬೇಕಾಗುತ್ತದೆ. ದಕ್ಷಿಣದವರ ಆಚಾರ–ವಿಚಾರಗಳಿಗೆ ಹೆಚ್ಚು ಗೌರವ ಕೊಡಬೇಕಾಗುತ್ತದೆ. ದಕ್ಷಿಣದ ಸಂಸ್ಕೃತಿಯನ್ನು ಉತ್ತರ ರಾಜ್ಯಗಳಲ್ಲಿ ಪ್ರಚಾರ ಮಾಡಬೇಕಾಗುತ್ತದೆ. ಯಾವ ನಿರ್ಧಾರವೇ ಆಗಲಿ ಅದು ಉತ್ತರದವರು ದಕ್ಷಿಣದವರ ಮೇಲೆ ಹೇರುವಂತಿರಬಾರದು. ಹಾಗಾದರೆ ಮಾತ್ರ ದೇಶದ ಐಕ್ಯತೆ ಗಟ್ಟಿಯಾಗಿ ನಿಲ್ಲುತ್ತದೆ.

ಪ್ರದೇಶ, ಜಾತಿ, ಮತಗಳ ಭೇದವಿಲ್ಲದ ಒಂದು ದೇಶೀಯ ಸೈನ್ಯವನ್ನು ಕಟ್ಟಬೇಕಾಗುತ್ತದೆ. ಬಹುಭಾಷಾ ರಾಷ್ಟ್ರಗಳಲ್ಲಿ ಸೈನ್ಯವು ಒಂದು ಮೂಸೆಯಂತೆ ಎಲ್ಲಾ ಭೇದಗಳನ್ನೂ ಕರಗಿಸಿ ರಾಷ್ಟ್ರೀಯ ಭಾವವನ್ನು ಬಿತ್ತುವ ಏಕೈಕ ಸುವ್ಯವಸ್ಥಿತ

ಸಂಸ್ಥೆಯಾಗುತ್ತದೆ. ಈ ಒಂದು ವ್ಯವಸ್ಥೆ ಹಿಂದೆ ಉತ್ತರದಲ್ಲಿ ಆಳಿದ ಯಾವ ಸಾಮ್ರಾಜ್ಯದಲ್ಲೂ ಇರಲಿಲ್ಲ. 'ಉತ್ತರದ ರಾಜರು ಉತ್ತರದ ಸೈನಿಕರಿಂದ ಕೂಡಿದ ಸೈನ್ಯವನ್ನೇ ದಕ್ಷಿಣದಲ್ಲೂ ಬಳಸಿದರು. ದಖನ್ನನ್ನು ಗೆಲ್ಲಲು ಆಗದುದಕ್ಕೆ ಇದೊಂದು ಮುಖ್ಯ ಕಾರಣವಾಯಿತು. ಹಾಗೆಯೇ ಮರಾಠರು ಮರಾಠಾ ಸೈನ್ಯದಿಂದ ಉತ್ತರದವರ ಸೈನ್ಯವೇ ಆಗಿತ್ತು. ಜೊತೆಗೆ ರಣಯೋಗ್ಯ ಯುದ್ಧಪ್ರಿಯ ಬುಡಕಟ್ಟಿನ ಜನಾಂಗಗಳೆಂಬ ಹೊಸ ಒಂದು ಅಂಶವನ್ನು ಹುಟ್ಟಿಹಾಕಿದರು. ಇದರಿಂದ ಅವರ ಆಳ್ವಿಕೆಗೆ ಸಹಾಯವೇನೋ ಆಯಿತು. ಆದರೆ ಈಗ ನಾವು ಜಾತಿ, ಮತ, ಪ್ರದೇಶ ಭೇದವಿಲ್ಲದ ಭೂ, ನೌಕಾ, ವಾಯುಸೈನ್ಯಗಳನ್ನು ಕಟ್ಟುತ್ತಿದ್ದೇವೆ, ಒಂದು ಹೊಸ ಆಯಾಮದ ಮೇಲೆ–ಇದರಲ್ಲಿ ಭಾರತದ ಎಲ್ಲ ಪ್ರದೇಶಗಳಿಗೂ ಸ್ಥಾನಮಾನ ಪ್ರಾತಿನಿಧ್ಯ ದೊರಕಿದೆ. ಇದನ್ನು ಮುಂದೆಯೂ ಕಾಯ್ದುಕೊಳ್ಳಬೇಕಾಗಿದೆ.

ಆರ್ಥಿಕ ಏಕೀಕರಣ ಸಂಪೂರ್ಣವಾಗಿ ಆದರೆ ದೇಶದ ವಿವಿಧ ಭಾಗಗಳು ತಮ್ಮತನವನ್ನು ಮರೆತು ಭಾರತೀಯರಾಗಲು ಸಾಧ್ಯವಾಗುತ್ತದೆ. ನಮ್ಮ ಪಾಂಚವಾರ್ಷಿಕ ಯೋಜನೆಗಳು ಈ ಆರ್ಥಿಕ ಏಕೀಕರಣವನ್ನು ತರುವುದರಲ್ಲಿ ಸಂಪೂರ್ಣ ಜಯ ಸಾಧಿಸಿಲ್ಲ. ಭೌಗೋಳಿಕವಾಗಿ ಬೇರೆಬೇರೆಯಾಗಿಯೇ ಉಳಿದಿವೆ. ಇನ್ನೊಂದು ಮುಖ್ಯ ವಿಷಯ, ಉತ್ತರ ಮತ್ತು ದಕ್ಷಿಣಗಳನ್ನು ಒಂದುಗೂಡಿಸುವ ರೈಲು, ರಸ್ತೆ ಮಾರ್ಗಗಳು ಇನ್ನೂ ಆಗಬೇಕಾಗಿದೆ. ವಾಯುಮಾರ್ಗಗಳಾದ ಮೇಲೆ ರಸ್ತೆ ಮತ್ತು ರೈಲು ಮಾರ್ಗಗಳಿಗೆ ಹೆಚ್ಚು ಪ್ರಾಮುಖ್ಯತೆ ಇಲ್ಲ ಎಂಬ ತಪ್ಪು ಭಾವನೆಯನ್ನು ತೊಡೆದುಹಾಕಬೇಕಾಗಿದೆ. ಈ ಭಾವನೆ ಒಂದು ಆತಂಕಕಾರಿ ಭಾವನೆ. ರೈಲು, ರಸ್ತೆಗಳು ಒಳಭಾಗಗಳಿಗೆ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸುತ್ತ ಜನರನ್ನು ಒಂದುಗೂಡಿಸುತ್ತದೆ. ಜನಸಂಪರ್ಕವನ್ನು ಹೆಚ್ಚಿಸಿದ ಹೊರತು ವಾಯುಸಂಚಾರವನ್ನು ಮಾಡಲಾಗುವುದಿಲ್ಲ. ಒಂದು ಊರಿನಿಂದ ಇನ್ನೊಂದೂರಿಗೆ ಹಾರುವ ವಿಮಾನಗಳು ಮಧ್ಯಪ್ರದೇಶಗಳನ್ನು ಅಲಕ್ಷಿಸುತ್ತವೆ. ನಾವಾಗಲೇ ಕಂಡಿರುವಂತೆ ಉತ್ತರದಿಂದ ದಕ್ಷಿಣಕ್ಕೆ ಸ್ವಾಭಾವಿಕವಾದ ಮಾರ್ಗಗಳಿಲ್ಲ. ಉತ್ತರದಿಂದ ದಕ್ಷಿಣಕ್ಕೆ ಯಾವ ನದಿಯೂ ಹರಿಯುವುದಿಲ್ಲ. ರಸ್ತೆಗಳನ್ನು ನಿರ್ಮಿಸುವುದು ಈ ಬೆಟಗುಡ್ಡ ಪ್ರದೇಶದಲ್ಲಿ ಬಹು ಕಷ್ಟ. ಬ್ರಿಟಿಷರು ರೈಲು ರಸ್ತೆಗಳನ್ನು ನಿರ್ಮಿಸಿದ್ದು ಗಂಗಾ ಪ್ರದೇಶದ ಕಚ್ಚಾ ಸಾಮಾನುಗಳನ್ನು ಬಂದರುಗಳಿಂದ ಮದ್ರಾಸ್, ಬಾಂಬೆ, ಕಲ್ಕತ್ತಾಗಳಿಗೆ ಸಾಗಿಸಲು, ಹಾಗೂ ರಸ್ತೆಗಳೂ ಹಾಗೆ ಪೆಷಾವರ್‌ನಿಂದ ಡೆಲ್ಲಿಯ ಮೂಲಕ ಕಲ್ಕತ್ತದವರೆಗೆ ಇದೇ ಉದ್ದೇಶದಿಂದ. ಈ ಮಾರ್ಗಗಳು ಮುಂದೆ ಸೈನ್ಯ ರವಾನೆಗೂ ಉಪಯೋಗವಾದುವು. ಹೀಗಾಗಿ ಬ್ರಿಟಿಷ್ ಆಳ್ವಿಕೆಯ ಕೊನೆಕೊನೆಗೆ ಉತ್ತರದಿಂದ ರೈಲು ಮಾರ್ಗಗಳು ಸುತ್ತು ಬಳಸಿ, ನಿರ್ಮಿಸಲ್ಪಟ್ಟವು. ಭೌಗೋಳಿಕ ದುರ್ಬಲತೆಯನ್ನು ನೀಗಿಸಲು ಹೆಚ್ಚು ಹೆಚ್ಚು ರಸ್ತೆ, ರೈಲು ಮಾರ್ಗಗಳು ಉತ್ತರದಿಂದ ದಕ್ಷಿಣಕ್ಕೆ ಬರುವಂತಾಗಬೇಕು. ಇದೊಂದು ತಕ್ಷಣ ಮಾಡಬೇಕಾದ ಕೆಲಸ–ನಮ್ಮ ಭೌಗೋಳಿಕ

ಕೊರತೆಗಳನ್ನು ಎದುರಿಸಿ.

ಸಂಸ್ಕೃತ ಭಾಷೆಯು ಭಾರತವನ್ನು ಒಂದುಗೂಡಿಸುವ ಪ್ರಯತ್ನಗಳಲ್ಲಿ ಮುಖ್ಯವಾದುದೆಂದು ಆಗಲೇ ತಿಳಿಸಿದೆ. ಇಲ್ಲಿ ನನ್ನದೇ ಕೆಲವು ವಾಕ್ಯಗಳನ್ನು–ಬೇರೆ ಕಡೆ ಬರೆದ –ಉದಾಹರಿಸುತ್ತೇನೆ.

"ಹಿಂದೆ ಸಂಸ್ಕೃತವು ದೇಶದ ಏಕೀಕರಣದಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿರುವ ಸಂಗತಿಯನ್ನು ತಿಳಿಸಿದ್ದೇನೆ. ದಕ್ಷಿಣ ಉತ್ತರ, ಪೂರ್ವ ಪಶ್ಚಿಮಗಳು ತಮ್ಮ ಪಾತ್ರವನ್ನು ನಿರ್ವಹಿಸಿವೆ, ಈ ದಿಸೆಯಲ್ಲಿ. ದೇಶದ ಯಾವ ಭಾಗವೂ ಇದು ತನ್ನ ಸ್ವಂತದ್ದು ಎಂದು ಹೇಳುವ ಹಾಗಿಲ್ಲ. ವೈವಿಧ್ಯದಲ್ಲಿ ಏಕತೆ (ಏಕೀಭಾವ) ನಮ್ಮಲ್ಲಿರುವುದು ಎಂದು ನಾವು ಹೆಮ್ಮೆಪಡುವಾಗ ನಾವು ಹೇಳುವುದು ಸಂಸ್ಕೃತ ಭಾಷೆಯು ನಮ್ಮ ಜೀವನಗಳ ಮೇಲೆ ಬೀರಿದ ಪರಿಣಾಮವಾಗಿ ನಾವು ಮಿಕ್ಕೆಲ್ಲ ಭೇದಗಳನ್ನು ಮರೆತಿದ್ದೇವೆ ಎಂದೇ. ಏಕೆಂದರೆ ಸಂಸ್ಕೃತವು ನಮ್ಮ ಭಾಷೆಗಳ ಮೇಲೆ ಬೀರಿರುವ ಪರಿಣಾಮ, ನಮ್ಮ ಚಿಂತನೆಗಳಲ್ಲಿ ತಂದಿರುವ ಐಕ್ಯತೆ ಬಾಕಿ ಎಲ್ಲಾ ಸ್ಥಳೀಯ ವಿವಿಧತೆಗಳನ್ನು ಮುಚ್ಚಿಹಾಕಿದೆ. ಪ್ರಪಂಚದಲ್ಲಿ ಬೇರಾವ ಭಾಷೆಯೂ, ಭಾರತದಲ್ಲಿ ಸಂಸ್ಕೃತ ಜನಸಾಮಾನ್ಯರ ಮೇಲೆ ಬೀರಿರುವ ಪ್ರಭಾವ, ಬೀರಿಲ್ಲ. ಇದು ಸಂಸ್ಕೃತದ ಹಿರಿಮೆ. ಹೊರಗಿನಿಂದ ಬಂದ ಆರ್ಯರ ಭಾಷೆಯಾದ ಸಂಸ್ಕೃತ ದೇಶದಲ್ಲೆಲ್ಲ ತನ್ನ ಪ್ರತಿಭೆ ಪ್ರಭಾವಗಳನ್ನು ಜನರ ಮೇಲೆ ಬೀರಿ ಅವರ ಮನೋಭಾವ ಒಂದಾಗುವಂತೆ ಮಾಡಿರುವ ಸಂಗತಿ ಅಚ್ಚರಿ ತರುವಂಥದು. ಸಂಸ್ಕೃತ ನಮ್ಮ ರಾಷ್ಟ್ರಭಾಷೆ. ಹಿಂದಿಯನ್ನು ವ್ಯವಹಾರಿಕ ಭಾಷೆಯಾಗಿ ಮಾಡುವುದರಲ್ಲಿ ಸಂಸ್ಕೃತದ ಸಂಸ್ಕೃತಿಯನ್ನು ನಾವು ಮರೆತರೆ ಭಾರತದ ಏಕತೆಗೆ ಕೊಡಲಿ ಪೆಟ್ಟು ಕೊಟ್ಟಂತೆಯೆ! ಸಂಸ್ಕೃತವು ತಂದಿರುವ ಪರಂಪರೆಯನ್ನು ಮರೆತರೆ–ಹಿಂದಿಯಲ್ಲ–ಬೇರಾವ ಭಾಷೆಯೂ ಅದರ ಸ್ಥಾನಕ್ಕೆ ಯೋಗ್ಯವಾಗುವುದಿಲ್ಲ. ಸಂಸ್ಕೃತವೇ ಭಾರತದ ಐಕ್ಯತೆಯ ತಳಹದಿ. ಇದನ್ನು ಬಿಟ್ಟರೆ ಐಕ್ಯತೆ ಕನಸಾಗಿ ಭಾರತ ಕುಸಿದು ಬೀಳುತ್ತದೆ. ಸಂಸ್ಕೃತವನ್ನು ಕಲಿತವನು ಒಳ್ಳೆಯ ಭಾರತದ ಪ್ರಜೆಯಾಗುತ್ತಾನೆ ಕಲಿಯದೇ ಇರುವವನಿಗಿಂತ.

ಸಂಸ್ಕೃತವನ್ನು ತಿಳಿದವನು ಭಾರತದ ಬೇರೆ ಬೇರೆ ಭಾಗಗಳು ತಮ್ಮ ಐಕ್ಯತೆಗೆ ನೀಡಿರುವ ಕಾಣಿಕೆಗಳನ್ನು ಚೆನ್ನಾಗಿ ಗುರುತಿಸಲು ಶಕ್ತನಾಗುತ್ತಾನೆ. ವ್ಯಾಸರೊಡನೆ ಅವನು ದೇಶವನ್ನೆಲ್ಲಾ ಸುತ್ತಿ ಅಲ್ಲಿನ ಕಾಡುಗಳ, ಪವಿತ್ರ ಯಾತ್ರಾ ಸ್ಥಳಗಳ ಪರಿಚಯ ಪಡೆಯುತ್ತಾನೆ. ವಾಲ್ಮೀಕಿಯೊಡನೆ ಅವನು ಲಂಕೆಯನ್ನು ನೋಡಬಹುದು, ಕಾಳಿದಾಸನೊಡನೆ ಉಜ್ಜಯನಿಯ ವೈಭವವನ್ನು ನೋಡಬಹುದು, ಹಿಮಾಲಯದ ಕಾಡುಗಳಲ್ಲಿ ಅಲೆದಾಡಬಹುದು, ಇಲ್ಲಿ ಮೇಘನೊಡನೆ ರಾಮಗಿರಿಯಿಂದ ಕೈಲಾಸದವರೆಗೆ ಹಾರಾಡಬಹುದು. ಭರ್ತೃಹರಿಯೊಡನೆ ಪ್ರಪಂಚದ

ಒಣ ಹೆಮ್ಮೆ, ಬಡಾಯಿಗಳ ಪರಿಚಯ ಪಡೆಯಬಹುದು. ಸೋಮದೇವನೊಡನೆ, ಸಮುದ್ರ ವ್ಯಾಪಾರಿಗಳೊಡನೆ ದ್ವೀಪಾಂತರದ ಪ್ರಯಾಣ ಮಾಡಿ ಕನಕಪುರಿಯನ್ನು ಕೂಡ ನೋಡಿ ಬರಬಹುದು. ಶೂದ್ರಕನೊಡನೆಯೇ ನಾಗರಿಕನಾಗಿ ಸ್ವಾನುಭವ ಪಡೆಯಬಹುದು. ಸಂಸ್ಕೃತದಿಂದ ನಾವು ನಮ್ಮತನವನ್ನು ಹೆಚ್ಚಿಸಿಕೊಳ್ಳಬಹುದು, ಇತರ ಭಾಗಗಳ ಪರಿಚಯ, ಪ್ರಭಾವಗಳಿಂದ. ಕಲ್ಹಣನೊಡನೆ ಕಾಶ್ಮೀರದ ರಾಜರೊಡನೆ ಬೆರೆಯಬಹುದು, ಜೋನ ರಾಜನೊಡನೆ ಪೃಥ್ವೀರಾಜನ ವೈಭವವನ್ನು ಅನುಭವಿಸಬಹುದು. ಜಯದೇವನಿಂದ ನಾವು ಆನಂದದ ಪರಮಾವಧಿಗೆ ಮುಟ್ಟಬಹುದು, ಹೇಮಚಂದ್ರಸೂರಿ–ಹೀಗೆ ಎಲ್ಲದರ ಪರಿಚಯವೂ ನಮಗಾಗುತ್ತದೆ. ವಿಜಯನಗರದ ಗಂಗಾದೇವಿಯೊಡನೆ ನಾವು ಮಧುರೈ ಮೇಲೆ ದಾಳಿ ಮಾಡಬಹುದು. ಭವಭೂತಿಯೊಡನೆ ನಾವು ಗೋದಾವರೀ ತೀರದಲ್ಲಿ ಚೆಲ್ಲಾಟವಾಡಬಹುದು. ನಾರಾಯಣ ಭಟ್ಟನೊಡನೆ ಕೇರಳವನ್ನು ಕಾಣಬಹುದು. ಜಗನ್ನಾಥ ಪಂಡಿತನೊಡನೆ ಶಹಜಹಾನನ ಕಾಲದ ಸೌಂದರ್ಯದ ಧನ್ಯತೆಯನ್ನು ಅನುಭವಿಸಬಹುದು." ಸಂಸ್ಕೃತವೇ ಭಾರತದ ಜೀವನಾಡಿ. ಅದನ್ನು ಮರೆತರೆ ಭಾರತವೂ ಇಲ್ಲ, ನಾವೂ ಇಲ್ಲ.

ಇಲ್ಲಿ ನಾನು ಒತ್ತಿ ಹೇಳುವುದೇನೆಂದರೆ ಹಿಂದಿ ವ್ಯವಹಾರ ಭಾಷೆಯಾಗಬೇಕಾದರೆ ಸಂಸ್ಕೃತ ಅದರ ತಳಹದಿಯಾಗಬೇಕು. ಸಂಸ್ಕೃತಕ್ಕೆ ನಾವು ಒತ್ತು ಕೊಡದೆ ಹೋದರೆ ಇದರಿಂದ ಹಿಂದಿಗಾಗಲೀ, ಭಾರತದ ಇತರ ಭಾಷೆಗಳಿಗಾಗಲೀ ಯಾವ ಧಕ್ಕೆಯೂ ಆಗುವುದಿಲ್ಲ – ನಮ್ಮ ಸಾಂಸ್ಕೃತಿಕ ಐಕ್ಯತೆ ಹೆಚ್ಚು ಕಾಲ ಬಾಳಲಾರದು. ಸ್ಥಳೀಯ ಭಾಷೆಗಳು ಸಂಸ್ಕೃತದ ಪ್ರಭಾವದಿಂದ ದೂರವಾದರೆ ದೇಶದ ಐಕ್ಯತೆ ನಾಶವಾಗುತ್ತದೆ. ಸಂಸ್ಕೃತದ ಸ್ಥಾನವನ್ನು ಹಿಂದಿ, ಅದು ರಾಜಭಾಷೆಯಾದರೂ ಕೂಡ, ಎಂದೆಂದಿಗೂ ತುಂಬಲಾರದು. ಸಂಸ್ಕೃತವೇ ನಮ್ಮೆಲ್ಲರನ್ನೂ ಒಂದಾಗಿ ಹಿಡಿದಿಟ್ಟಿರುವುದು. ರಾಜಕೀಯವಾಗಿ ಪ್ರತಿಯೊಂದು ಆಲೋಚನೆಯೂ ದೇಶದ ರಕ್ಷಣೆ ಮತ್ತು ಒಂದು ರಾಜ್ಯವಾಗಿ ಉಳಿಯುವುದಾಗಿರುತ್ತದೆ. ಭೌಗೋಳಿಕವಾದ ಪರಿಗಣನೆ ಬರುವುದು ಇಲ್ಲಿ. ಈ ವಿಚಾರಕ್ಕೆ ಈಗ ನಮ್ಮ ಗಮನಹರಿಸೋಣ. ಭಾರತದ ಸೆಲೆ ಹೇಗಿದೆಯೆಂದರೆ ಅದನ್ನು ಭೂಮಿಯ ಕಡೆಯಿಂದಲೂ ಆಕ್ರಮಿಸಬಹುದು. ಭೂಭಾಗದಲ್ಲಿ ನಾವು ಸರಿಸುಮಾರಾಗಿ ರಕ್ಷಿತರಾಗಿದ್ದೇವೆ. ಆದರೂ ದಾಳಿಗಳು ಕಾಲದಿಂದ ಕಾಲಕ್ಕೆ ನಡೆಯುತ್ತಲೇ ಇವೆ. ಆದರೆ ಈ ದಾಳಿಗಳು ತಮ್ಮ ಸತ್ವವನ್ನು ಗಂಗಾಕಣಿವೆ ತಲುಪುವುದರೊಳಗೆ ಕಳೆದುಕೊಂಡಿರುತ್ತಿದ್ದವು. ಅಲೆಗ್ಸಾಂಡರ್, ಘಜ್ನಿ ಮಹಮೂದ್ ಅಥವಾ ನಾದಿರ್ ಷಾ ಮುಂತಾದ ಅತ್ಯಾಕಾಂಕ್ಷಿ ರಾಜರು ತಮ್ಮ ಅತ್ಯಾಸೆ, ಧನಲೋಭಗಳಿಂದ ದಾಳಿ ಮಾಡಿದ ಸಂಗತಿ ಬಿಟ್ಟರೆ ಉಳಿದೆಲ್ಲ ದಾಳಿಗಳೂ ಮಧ್ಯ ಏಷ್ಯಾದಲ್ಲಾದ ಅಲ್ಲೋಲ ಕಲ್ಲೋಲಗಳಿಂದ ಉಂಟಾದುವು.

ಜನನಿಬಿಡತೆಯಿಂದ ಆದ ಜನ ಸಾಮೂಹಿಕ ವಲಸೆಗಳಿಂದ ಸರಿ ಸುಮಾರು ೩೦೦ ವರ್ಷಗಳಿಗೊಂದು ಬಾರಿ ಈ ಸಂವೇದನೆಗಳು ಕಾಣಿಸಿಕೊಳ್ಳುತ್ತವೆ. ಹೀಗೆ ಹೊರಟ ಜನ ಸಮುದಾಯದ ಒಂದು ತುಣುಕು ಭಾರತಕ್ಕೆ ಕಾಬೂಲಿನ ಮುಖಾಂತರ ಬಂದವು. ಇವುಗಳ ತೀವ್ರತೆ ಕುಲಸಂಧಿಗಳ ಮೇಲೆ ನಿರ್ಣಯವಾದುವುಗಳು.

ಮೂಲಭೂತವಾಗಿ ಮಧ್ಯ ಏಷ್ಯಾದಿಂದ ಆದ ಜನ ವಲಸೆಗಳು ಸರಳವಾದುವುಗಳು. ಸದಾಕಾಲವೂ ಈ ಒತ್ತಡಗಳು ಅನಿರೀಕ್ಷಿತವಾದುವುಗಳು. ಭೌಗೋಳಿಕವಾಗಿ ಮತ್ತೆ ಈ ಒತ್ತಡ ತೀವ್ರಗೊಂಡು ಜನಸಂಖ್ಯಾ ಚಲನೆಗಳೂ ಪ್ರಾರಂಭವಾಗುತ್ತವೆ ಎಂಬ ಸಂಗತಿ ಸೈನಿಕ ದಳಪತಿಗಳು ವಿಚಾರ ಮಾಡತಕ್ಕ ಸಂಗತಿಗಳು. ಭೂಗೋಳ ಶಾಸ್ತ್ರಜ್ಞನಿಗೆ ಇವು ಸಂಬಂಧಪಟ್ಟವುಗಳಲ್ಲ. ಆದರೂ ದೂರ, ಅವಕಾಶ, ಅಂತರ ಮುಂತಾದ ಅಂಶಗಳು ಇದ್ದೇ ಇರುತ್ತವೆ.

ಸಮುದ್ರದ ಕಡೆಯಿಂದ ಬರುವ ಸಂಗತಿಗಳೇ ಬೇರೆ. ಇಲ್ಲಿಯವರೆಗೆ ನಾವು ಭೂಭಾಗದಿಂದ ನಮಗೆ ಅಪಾಯ ಅಧಿಕ ಎಂದು ಭಾವಿಸಿದ್ದೇವೆ. ಏಕೆಂದರೆ ಇಲ್ಲಿಯವರೆಗೆ ಬಂದ ಅಪಾಯಗಳೆಲ್ಲಾ ಭೂಭಾಗದಿಂದಲೇ. ಸಮುದ್ರದ ಕಡೆಯಿಂದ ಬಂದುದು ಒಂದೇ ಒಂದು. ಇದಕ್ಕೆ ಕಾರಣ ಸಮುದ್ರ ಮಾರ್ಗವು ೧೪೯೮ರಲ್ಲಿ ಕಂಡುಹಿಡಿಯಲ್ಪಟ್ಟಿತು. ಆದರೂ ಈ ಸಮುದ್ರದ ಕಡೆಯ ಒತ್ತಡ ನಿರಂತರವಾಗಿ ಇಂದಿನವರೆಗೂ ನಮ್ಮ ರಾಜಕೀಯ, ಆರ್ಥಿಕ, ವ್ಯಾಪಾರ, ವ್ಯವಹಾರಗಳ ಮೇಲೆ ಸತತವಾಗಿ ಈ ಒತ್ತಡ ನಮ್ಮನ್ನು ಕಾಡುತ್ತಲೇ ಇದೆ.

೧೪೯೮ರಿಂದ ಸ್ವಾತಂತ್ರ್ಯ ಬರುವವರೆಗೆ ಭಾರತವನ್ನು ಸಮುದ್ರ ಮಾರ್ಗವಾಗಿ ಅಡ್ಡಕಟ್ಟಲಾಗಿದೆ. ಬ್ರಿಟಿಷ್ ರಾಯಲ್ ನೇವಿ ತನ್ನ ಕಬ್ಬಿಣದ ಉಂಗುರವೆಂದೇ ಪರಿಗಣಿತವಾಗಿರುವ ಹಡಗುಗಳ ಸಮೂಹದಿಂದ ಹಿಂದೂ ಮಹಾಸಾಗರವನ್ನು ತನ್ನ ಹಿಡತದಲ್ಲಿಟ್ಟುಕೊಂಡಿತ್ತು. ಆದ್ದರಿಂದ ಭೂಭಾಗಗಳಿಂದ ಬಂದ ದಾಳಿಗಳು ವಿರಳ ಮತ್ತು ಕೆಲವು ಸಂದರ್ಭಗಳಲ್ಲಿ ಮಾತ್ರ ಯಶಸ್ವಿಯಾಗುತ್ತದೆ. ಆದರೆ ಸಮುದ್ರದ ಮೇಲಿನಿಂದ ಬರುವ ಒತ್ತಡ ಶಾಶ್ವತವಾದುದು ಮತ್ತು ಹೆಚ್ಚು ಅಪಾಯಕಾರಿ. ಭೂಭಾಗಗಳಿಂದ ಬಂದ ದಾಳಿಗಳ ಸಂಖ್ಯೆ ಹೆಚ್ಚಾದುದರಿಂದ ನಮ್ಮ ಗಮನವೆಲ್ಲಾ ಅಲ್ಲೇ ಇತ್ತು. ಸಮುದ್ರದ ಕಡೆಗೆ ಹೆಚ್ಚು ಗಮನ ಹರಿಸಲಿಲ್ಲ. ಚರಿತ್ರೆ ನಮ್ಮನ್ನು ದಾರಿ ತಪ್ಪಿಸಿತ್ತು. ಒಂದು ಸಾರಿ ಸಮುದ್ರ ಮಾರ್ಗ ಗೊತ್ತಾಯಿತೆಂದರೆ ಸಾಕು ಸಮುದ್ರ ಲೂಟಿಕೋರರು ಸದಾ ದಾಳಿ ಮಾಡುತ್ತಲೇ ಇರುತ್ತಾರೆ. ನಮ್ಮ ಆರ್ಥಿಕ ವ್ಯವಸ್ಥೆ ಅದರ ಇಚ್ಛೆಗೆ ಒಳಪಡುತ್ತದೆ ಎಂಬಂಶವನ್ನು ನಾವು ಸದಾ ಜ್ಞಾಪಕದಲ್ಲಿಟ್ಟುಕೊಳ್ಳಬೇಕಾಗಿತ್ತು. ಸಮುದ್ರದ ಮೇಲಿನ ಒತ್ತಡ ಸದಾಕಾಲದ್ದು.

ನೌಕಾಬಲದ ವಿಷಯದಲ್ಲಿ ನಿರ್ವಾತ ಪ್ರದೇಶವೆಂಬುದಿರುವುದಿಲ್ಲ. ಭಾಗಮಾಡಲಾಗದ ಸಮುದ್ರಗಳು ನೌಕಾಬಲವಿದ್ದ ರಾಷ್ಟ್ರಗಳಿಗೆ ಅಧೀನವಾಗುತ್ತವೆ. ಇಲ್ಲಿ ಹತ್ತಿರ ದೂರದ ಪ್ರಶ್ನೆ ಏಳುವುದಿಲ್ಲ. ಒಂದು ಕ್ಷಣ ನಾವು ಬ್ರಿಟಿಷರ ಹಿಡಿತ

ಸಮುದ್ರದ ಮೇಲೆ ಸಡಿಲವಾಯಿತೆಂದು ಊಹಿಸಿದರೂ, ಆ ಜಾಗವನ್ನು ಆಕ್ರಮಿಸಿಕೊಳ್ಳಲು ಇತರ ರಾಷ್ಟ್ರಗಳು ಸದಾ ಸಿದ್ಧವಾಗಿಯೇ ಇರುತ್ತವೆ. ಇವತ್ತಿಗೂ ಟ್ರಿಂಕೋಮಲಿ, ಏಡನ್ ಮತ್ತು ಸಿಂಗಪುರಗಳನ್ನು ತಮ್ಮ ವಶದಲ್ಲಿರಿಸಿಕೊಂಡಿರುವ (೧೯೫೧ರಲ್ಲಿ) ಬ್ರಿಟಿಷರೇ ಹಿಂದೂ ಮಹಾಸಾಗರದ ಅಧಿಪತಿಗಳಾಗಿದ್ದಾರೆ, ಭಾರತ ಅವರ ವಶದಲ್ಲಿದ್ದಂತೆಯೇ. ಒಂದು ಪಕ್ಷ ಬ್ರಿಟಿಷರು ಹಿಂದೂ ಮಹಾಸಾಗರದಿಂದ ಕಾಲ್ತೆಗೆದರೂ ಅವರ ಜಾಗಕ್ಕೆ ಅವರಿಗಿಂತಲೂ ಬಲಶಾಲಿಗಳೂ, ತತ್ವರಹಿತರೂ ಆದವರು ಬಂದು ಕೂರುತ್ತಾರೆ. ಚೀನದ ಮುತ್ತಿಗೆ ಇದಕ್ಕೆ ಉತ್ತರವಾಗಿದೆ–ಶಾಂತಿ ಸಮಯದಲ್ಲೂ ನೌಕಾಶಾಹಿಗಳು ಏನು ಮಾಡಬಹುದು ಎಂಬುದಕ್ಕೆ.

ಸಮುದ್ರಾಧಿಪತ್ಯಕ್ಕೆ ಒಂದು ಅಂಕೆ ಇದೆ. ಸುಸಜ್ಜಿತವಾದ ವ್ಯವಸ್ಥೆ ಇರುವ ದೊಡ್ಡ ಭೂಭಾಗಗಳ ಮೇಲೆ ಅದರ ಆಟ ನಡೆಯದು. ಭಾರತದಲ್ಲಿ ಕೂಡ ಪ್ರಾರಂಭದಲ್ಲಿ ಬ್ರಿಟಿಷರು ಸಮುದ್ರದ ಮೇಲೆ ಎಷ್ಟೇ ಬಲಿಷ್ಠರಾಗಿದ್ದರೂ ಮೊಗಲ್ ಚಕ್ರವರ್ತಿಯ ಆದೇಶವಿಲ್ಲದೆ ಯುರೋಪ್ ರಾಷ್ಟ್ರಗಳಿಗೆ ಬೇಕಾದ ಸರಕುಗಳನ್ನು ಭಾರತದಿಂದ ಒಯ್ಯುವಂತಿರಲಿಲ್ಲ, ಮೊಗಲರ ಸಾಮ್ರಾಜ್ಯ ಸುಭದ್ರವಾಗಿರುವವರೆಗೆ. ಚೀನ ವಿಚಾರದಲ್ಲೂ ಹೀಗೇ ಆಯಿತು. ಯುರೋಪಿನ ಚರಿತ್ರೆ ಕೂಡ ಇದನ್ನೇ ಸಾರಿ ಹೇಳುತ್ತದೆ.

ಭೂರಾಜ್ಯ ಭದ್ರವಾಗಿ, ಸುಸಜ್ಜಿತವಾಗಿ ವ್ಯವಸ್ಥಿತವಾಗಿದ್ದರೆ ನೌಕಾಶಾಹಿಗಳು ತೀರ ಪ್ರದೇಶಗಳ ಮೇಲೆ ದಾಳಿ ಮಾಡಿ ವ್ಯಾಪಾರವನ್ನು ಸ್ವಲ್ಪ ತಡೆಯಬಹುದೇ ಹೊರತು ಬೇರೇನೂ ಮಾಡುವಂತೆ ಆಗಲಿಲ್ಲ. ಆದರೆ ಭೂಭಾಗದ ಶಕ್ತಿ ಕುಂದಿದರೆ, ಕುಸಿದರೆ, ಆಗ ನೌಕಾಶಕ್ತಿಗಳು ತೀರ ಪ್ರದೇಶಗಳನ್ನು ಆಕ್ರಮಿಸಿ ತಮ್ಮ ಆಧಿಪತ್ಯವನ್ನು ಸ್ಥಾಪಿಸಬಹುದು. ನೂರು ವರ್ಷ ಹೋರಾಡಿ ಬ್ರಿಟನ್ ಫ್ರಾನ್ಸಿನಿಂದ ಕಾಲ್ತೆಗೆಯ ಬೇಕಾಯಿತು–ಭೂದಾಹವನ್ನು ಮರೆತು. ಜಪಾನಿನ ಚೀನಾ ಪ್ರಯೋಗ, ಫ್ರಾನ್ಸಿನ ಮೆಕ್ಸಿಕೋ ಮೇಲಿನ ಪ್ರಯೋಗಗಳು ಎಲ್ಲಾ ಒಂದೇ ಕಥೆಯನ್ನು ಹೇಳುತ್ತವೆ. ಸುವ್ಯವಸ್ಥಿತವಾಗಿ ದೊಡ್ಡ ಭೂಭಾಗವೊಂದು ಸಂಘಟಿತವಾದಾಗ ಸಾಗರ ಶಕ್ತಿಗಳು ಹೆಚ್ಚಿಗೆ ಏನೂ ಮಾಡಲಾಗುವುದಿಲ್ಲ–ತೀರ ಪ್ರದೇಶಗಳ ಮೇಲೆ ದಾಳಿ ಮಾಡುವುದನ್ನು ಬಿಟ್ಟು. ಆದರೂ ಸಮುದ್ರ ಶಕ್ತಿಗಳ ಒತ್ತಡ ಇದ್ದೇ ಇರುತ್ತದೆ. ಈ ಆಪತ್ತಿನಿಂದ ಪಾರಾಗಲು ಭಾರತ ತನ್ನ ಆಂತರಿಕ ರಾಜಕೀಯ ಮತ್ತು ಆರ್ಥಿಕ ಸ್ಥಿತಿಗಳನ್ನು ಸುಭದ್ರಗೊಳಿಸುವುದೊಂದೇ ದಾರಿ. ಜೊತೆಗೆ ತನ್ನ ತೀರ ರಕ್ಷಣೆಗೆ ಬೇಕಾಗುವಂಥ ನೌಕಾದಳವನ್ನು ಕಟ್ಟಲು ೩೦ ವರ್ಷಗಳೇ ಬೇಕಾದುವು. ನೌಕಾಶಕ್ತಿ ಹೆಚ್ಚು ಬೇಕಾದರೆ ಭಾರತದಲ್ಲಿ ಸುಭದ್ರ ಸರ್ಕಾರ, ಸುವ್ಯವಸ್ಥಿತ ಆರ್ಥಿಕ ಸ್ಥಿತಿ, ವಿಜ್ಞಾನದ ಬೆಳವಣಿಗೆ, ಕುಶಲತೆ ಇವುಗಳೆಲ್ಲ ಬೇಕಾಗುತ್ತದೆ. ಈಗ ದೇಶವು ಎದುರಿಸುತ್ತಿರುವ ಆಂತರಿಕ ಅಸಂಗತ ವಿರೋಧಾಭಾಸಗಳ ಸೆಳೆತದಿಂದ ಹೊರಬರಬೇಕು. ಈ ದಿಕ್ಕಿನಲ್ಲಿ ನಾವು ಸಫಲರಾಗಬೇಕಾದರೆ, ಶಕ್ತಿಶಾಲೀ ನೌಕಾದಳವೊಂದನ್ನು ಕಟ್ಟಬೇಕು. ಆಗ

ನಾವು ಸಮುದ್ರದಿಂದ ಬರಬಹುದಾದ ಅಪಾಯಗಳನ್ನು ಎದುರಿಸಲು ಸಮರ್ಥರಾಗುತ್ತೇವೆ. ಅಲ್ಲಿಯವರೆಗೆ ಈ ಅಪಾಯ ಇದ್ದೇ ಇರುತ್ತದೆ. ನಿರಂತರ ಜಾಗೃತಿ ಸ್ವಾತಂತ್ರ್ಯದ ಬೆಲೆ–ಆದರೆ ಇದನ್ನು ತಿಳಿಯಬೇಕಾದರೆ ಭಾರತದ ಆಂತರಿಕ ಭದ್ರತೆ, ಕುಂದುಕೊರತೆಗಳು ನ್ಯೂನತೆಗಳ ಅಧ್ಯಯನ ನಡೆಯಬೇಕಾಗುತ್ತದೆ. ಹಾಗೇ ನಮ್ಮ ಸುತ್ತಮುತ್ತಲಿನ ರಾಜ್ಯಗಳ ಆಗುಹೋಗುಗಳನ್ನು ಸದಾ ಗಮನದಲ್ಲಿಟ್ಟು ಮುಂದಡಿ ಇಡಬೇಕಾಗುತ್ತದೆ. ಹಾಗೆ ನಾವು ಈ ವಿಷಯದಲ್ಲಿ ಹೆಚ್ಚು ಗಮನ ಹರಿಸಿರಲಿಲ್ಲವಾಗಿ ದಾಳಿಗಳಿಗೆ ಒಳಗಾಗಬೇಕಾಯಿತು. ಶತ್ರು ನಮ್ಮ ಬಾಗಿಲು ಬಡಿಯುವವರೆಗೂ ನಾವು ಎಚ್ಚೆತ್ತುಕೊಂಡಿರಲಿಲ್ಲ. ವಾಸ್ಕೊ–ಡ–ಗಾಮ ಬಂದ ಮೇಲೂ ನಾವು ನಿದ್ರಾವಸ್ಥೆಯಲ್ಲೇ ಇದ್ದೆವು. ನಮ್ಮ ದೃಷ್ಟಿಕೋನದಲ್ಲಿ ಯೂರೋಪ್ ಖಂಡ ಬಂದುದು ೧೯ನೇ ಶತಮಾನದಲ್ಲಿ. ಉತ್ತರ ಚಕ್ರಾಧಿಪತ್ಯಗಳು ಸಮುದ್ರದ ಪ್ರಾಧಾನ್ಯಕ್ಕೆ ಗಮನ ಕೊಡಲೇ ಇಲ್ಲ. ದಕ್ಷಿಣದವರು ಕೂಡ ಸಮುದ್ರ ಶಕ್ತಿಯಾಗಲು ಯೋಚಿಸಲೇ ಇಲ್ಲ. ಸಮುದ್ರ ಅವರಿಗೊಂದು ರಕ್ಷಣಾ ವ್ಯವಸ್ಥೆಯಾಗಿತ್ತು–ಒಂದು ಶಕ್ತಿಯಾಗಿರಲಿಲ್ಲ ನೌಕಾದೃಷ್ಟಿಯಿಂದ. ತೀರ ಪ್ರದೇಶಗಳ ರಕ್ಷಣೆ ಸರ್ಕಾರದ್ದು ಎಂಬ ಭಾವನೆ ಈಗಲೂ ನಮ್ಮಲ್ಲಿದೆ. ಅಜ್ಞಾನವೇ ನಮ್ಮ ಶತ್ರುವಾಯಿತು, ನಮ್ಮ ಅಧಃಪತನಕ್ಕೆ ದಾರಿಯಾಯಿತು. ಭೌಗೋಲಿಕಾಂಶಗಳನ್ನು ಸರಿಯಾಗಿ ಅಧ್ಯಯನ ಮಾಡದೆ, ಅವುಗಳಿಂದ ನಮಗೆ ಆಗಬಹುದಾದ ಅನುಕೂಲ–ಪ್ರತಿಕೂಲಗಳನ್ನು ವಿಮರ್ಶಿಸದೇ ನಾವು ನಮ್ಮ ಪತನವನ್ನು ತಂದುಕೊಂಡೆವು. ಜಪಾನಿನಂತೆ ಸಮುದ್ರದ ಪ್ರಾಮುಖ್ಯತೆಯನ್ನಾಗಲೀ ಚೀನಾ, ಪರ್ಶಿಯಗಳಂತೆ ಖಂಡಾಂತರ ಯೋಚನಾಪರತೆಯನ್ನಾಗಲೀ ನಾವು ಬೆಳೆಸಿಕೊಳ್ಳಲಿಲ್ಲ. ಮೂರು ಕಡೆ ಸಮುದ್ರದಿಂದಲೂ ಉತ್ತರದಲ್ಲಿ ಪರ್ವತ ಶ್ರೇಣಿಗಳಿಂದಲೂ ಆವೃತವಾದ ನಾವು ಹೊರಗಿನಿಂದ ಬಂದವರನ್ನು ಮ್ಲೇಚ್ಛರು ಎಂದು ಕರೆದೆವು. ಅವರನ್ನು ಓಡಿಸುವುದು, ಆಗದಿದ್ದರೆ ಸಹಿಸುವುದು ನಮ್ಮ ದೃಷ್ಟಿಕೋನವಾಯಿತು. ಮ್ಲೇಚ್ಛರು ಹೆಚ್ಚು ಸಂಖ್ಯೆಯಲ್ಲೂ ಬರಲಿಲ್ಲವಾಗಿ ಭಾರತ ಬಚಾವಾಯಿತು.

ಇವತ್ತು ನಮಗೆ ಬೇಕಾಗಿರುವುದು, ಖಂಡಾಂತರ ಆಲೋಚನಾಪರತೆ ಮತ್ತು ನೌಕಾಪಡೆಯ ಗುಣಗ್ರಹಣ ವಿವೇಚನೆ. ಜಂಬೂದ್ವೀಪವೆಂಬ ಕೂಪಕೂರ್ಮ ಭೌಗೋಳಿಕ ಜ್ಞಾನ ನಮಗೆ ಸಾಲದು. ಪ್ರಪಂಚ ಸಂಕುಚಿತವಾಗುತ್ತಿದೆ. ಬಹುದೂರದಲ್ಲಿ ಕೆಲವು ರಾಷ್ಟ್ರಗಳು ಒಂದಾದರೆ ಅದು ನಮ್ಮ ಮೇಲೆ ಪರಿಣಾಮ ಬೀರುತ್ತದೆ. ಭಾರತದ ಭವಿಷ್ಯದಲ್ಲಿ ಆಸಕ್ತಿ ಇರುವವರೆಲ್ಲರೂ ಭೂಗೋಳ ರಾಜ್ಯ ಶಾಸ್ತ್ರವನ್ನು ಅಧ್ಯಯನ ಮಾಡಬೇಕು. ಹಾಗೆ ಮಾಡದಿದ್ದರೆ ನಮ್ಮ ಅಸಡ್ಡೆ ನಮಗೇ ಮುಳುವಾಗುತ್ತದೆ.

* * * *